ಶಿವಾನುಭವ ಗ್ರಂಥಮಾಲಾ ನಂ|| ೭೧

ಶ್ರೀ.

# ಬಸವೇಶ್ವರನ ತತ್ವಗಳು.

1958

S. M. Bhat
B. A. (Hons)

50
124

930
5567

ಫ. ಗು. ಹಳಕಟ್ಟಿ.

ಶಿವಾನುಭವ ಗ್ರಂಥಮಾಲಾ ನಂ|| ೭೧.

ಶ್ರೀ.

# ಬಸವೇಶ್ವರನ ತತ್ವಗಳು.

ಸಂಪಾದಕರು

ರಾ|| ಬ|| ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

(ಇದರ ಯಾವತ್ತು ಅಧಿಕಾರವು ಸಂಪಾದಕರಿಂದ ಕಾದಿಡಲ್ಪಟ್ಟದೆ.)

S. S. High School, Belgaum
Regd No.: 50/124
Section Lit
Dt:
LIBRARY

ಇದನ್ನು ವಿಜಾಪುರದಲ್ಲಿ ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು
ಮತ್ತು ಅವರು ಅಲ್ಲಿಯೇ ಪ್ರಕಟಿಸಿದರು.

# ಪ್ರಸ್ತಾವನೆ

ಈಚೆಗೆ ಬಸವೇಶ್ವರನ ತತ್ವಗಳನ್ನು ಅರಿಯಬೇಕೆಂಬ ಕುತೂಹಲವು ಜನರಲ್ಲಿ ಹೆಚ್ಚುತ್ತಾ ಇದೆ. ಅವನು ಉದಾರ ಮತವುಳ್ಳವನೂ ಅವನು ದೇಶದಲ್ಲಿ ಒಂದು ಮಹತ್ತರವಾದ ಸಾಮಾಜಿಕ ಸುಧಾರಣೆಯನ್ನು ಮಾಡಿದವನೂ ಎಂಬುದರ ತಿಳುವಳಿಕೆಯು ಜನರಲ್ಲಿ ಪ್ರಸಾರವಾಗುತ್ತಲಿದೆ. ಆದ್ದರಿಂದ ಅವನು ರಚಿಸಿದ ವಚನಗಳು ಈಚೆಗೆ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸಕ್ಕೋಸ್ಕರ ನಿಯಮಿಸಲ್ಪಟ್ಟಿವೆ. ಹೀಗೆ ಅವನ ವಿಷಯವಾಗಿ ಎಲ್ಲ ತರಗತಿಯ ಜನರಲ್ಲಿ ಆದರ ಬುದ್ಧಿಯು ಹೆಚ್ಚುತ್ತಾ ಇದ್ದುದರಿಂದ ಮತ್ತು ಅವನು ಪ್ರಚಾರ ಪಡಿಸಿದ ತತ್ವಗಳಾವವೆಂಬದನ್ನು ತಿಳಿಯುವದು ಅವಶ್ಯವೆಂದು ತೋರಿದ್ದರಿಂದ ನಾವು ಈ ಗ್ರಂಥವನ್ನು ಸಿದ್ಧಪಡಿಸಿದ್ದೇವೆ.

ಅವನ ವಿಚಾರಗಳ ವಿಷಯವಾಗಿ ನಾವೇ ಒಂದು ವಿಸ್ತೃತ ಗ್ರಂಥವನ್ನು ಸ್ವತಂತ್ರವಾಗಿ ಬರೆಯಬೇಕೆಂದು ಯೋಚಿಸಿದ್ದೆವು. ಆದರೆ ಅನೇಕ ಮಹನೀಯರು ಅವನ ವಿಚಾರಗಳನ್ನು ಆಳವಾಗಿ ಅಭ್ಯಾಸಮಾಡಿ ಅನೇಕ ಲೇಖಗಳನ್ನು ಕಾಲಕಾಲಕ್ಕೆ ಪ್ರಸಿದ್ಧಮಾಡುತ್ತಾ ಬಂದಿದ್ದಾರೆ. ಅವುಗಳಲ್ಲನೇಕವುಗಳು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧವಾಗಿರುತ್ತವೆ. ಅವುಗಳಲ್ಲಿ ಉತ್ತಮವಾದವುಗಳನ್ನು ಆರಿಸಿ ಒತ್ತಟ್ಟಿಗೆ ಪ್ರಸಿದ್ಧಿಸುವದರಿಂದ ಅವನ ಬಗ್ಗೆ ಇರುವ ಅಭಿಪ್ರಾಯಗಳು ಒಬ್ಬ ವ್ಯಕ್ತಿಯವು ಮಾತ್ರವಲ್ಲ, ಅವು ಅನೇಕ ಮಹನೀಯರವೂ ಕೂಡ ಹಾಗೆಯೇ ಇವೆ, ಎಂಬುದು ಜನತೆಗೆ ಗೊತ್ತಾಗುವದು. ಈ ಉದ್ದೇಶವುಳ್ಳವರಾಗಿ ನಾವು ಈ ಕ್ರಮವನ್ನು ಅನುಸರಿಸಿದ್ದೇವೆ.

ಈ ಲೇಖಗಳೆಲ್ಲವೂ ಶಿವಾನುಭವ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟವಾಗುತ್ತ ಬಂದಿರುತ್ತವೆ. ಅವುಗಳಲ್ಲಿಯ ಕೆಲವು ಲೇಖಗಳಲ್ಲಿ ಅವನ ವಿಚಾರಗಳ ಬಗ್ಗೆ ಸಾಮಾನ್ಯನಿರೂಪಣೆ ಇದೆ. ಬೇರೆ ಕೆಲವುಗಳಲ್ಲಿ ಅವನ ವೈಶಿಷ್ಟ್ಯಗಳ ಚರ್ಚೆ ಇರುತ್ತದೆ. ಜನರ ಇದಿರಿಗೆ ಈ ಉಭಯ ತರದ ಲೇಖಗಳನ್ನಿಡುವದರಿಂದ ಅವನು ಸಮಾಜ ಸುಧಾರಣೆಗೋಸ್ಕರ ಮಾಡಿದ ಮಹತ್ತರ ಕಾರ್ಯಗಳ ಅರಿವು ಉಂಟಾಗಿ ಅವನಸಲುವಾಗಿ ಇರಬೇಕಾದ ಆದರ ಬುದ್ಧಿಯು ಎಲ್ಲರಲ್ಲಿಯೂ ಹೆಚ್ಚುತ್ತ ಹೋಗುವದೆಂದು ಆಶಿಸಿದ್ದೇವೆ

ಫ. ಗು. ಹಳಕಟ್ಟಿ
ಸಂಪಾದಕ "ಶಿವಾನುಭವ"

## ಅನುಕ್ರಮಣಿಕೆ


| | | ಪುಟ |
|---|---|---|
| (೧) | ಬಸವೇಶ್ವರನ ತತ್ವಗಳು ... .... .... <br>— ಕೈ. ವಾ. ಸಿದ್ಧರಾಮಪ್ಪ ಪಾವಟೆ ಬಿ ಏ ಎಲ್, ಎಲ್, ಬಿ ಹುಬ್ಬಳ್ಳಿ | ೧ |
| (೨) | ಬಸವೇಶ್ವರನ ನೈತಿಕ ವಿಚಾರಗಳು .... .... .... <br>— ರಾ॥ ಬ॥ ಫ. ಗು. ಹಳಕಟ್ಟಿ ಬಿ ಏ ಎಲ್..ಎಲ್ ಬಿ. ವಿಜಾಪುರ | ೧೪ |
| (೩) | ಬಸವನ ಭಕ್ತಿಯ ಬೆಳಕು .... .... .... .... <br>— ಶ್ರೀಯುತ ಬ್ಯಾಳಿ ಕಲ್ಯಾಣಪ್ಪನವರು ಬಿ. ಏ. ಬಿ. ಟಿ. ವಿಜಾಪುರ | ೨೬ |
| (೪) | ಬಸವನ ಬಟ್ಟೆ, ಬಟ್ಟೆ .... .... .... <br>— ಶ್ರೀ. ಸ. ಹಾ. ಶಿವಮೂರ್ತಿ ಮು. ಬನಾರಸ | ೩೨ |
| (೫) | ಷಟ್‌ಸ್ಥಲದ ಪ್ರಕಾರ ಸ್ತ್ರೀಯರ ಹಕ್ಕುಗಳು ... ... <br>—ರಾ॥ ಬ॥ ಫ. ಗು ಹಳಕಟ್ಟಿ ಬಿ. ಏ. ಎಲ್. ಎಲ್. ಬಿ. | ೪೫ |
| (೬) | ಕನ್ನಡ ಸಾಹಿತ್ಯಕ್ಕೆ ಬಸವಣ್ಣನವರ ಕಾಣಿಕೆ .... .... <br>— ಶ್ರೀಯುತ ಜೀರಗೆ. ಕ. ಬಸವಪ್ಪ ಬಿ ಏ ಬೆಂಗಳೂರ | ೫೫ |
| (೭) | ಶಿವಶರಣರ ಶಿವಾನುಭವ ಮಂಟಪ .... ... ... <br>— ಶ್ರೀ. ಸ. ಹಾ. ಶಿವಮೂರ್ತಿ ಮು. ಬನಾರಸ ಸಿಟಿ | ೬೬ |
| (೮) | ಬಸವೇಶ್ವರನ ಶಿವಾನುಭವ ಮಂಟಪವು ಮತ್ತು ಅಲ್ಲಿಯ ... ಚರ್ಚೆಗಳು <br>— ರಾ. ರಾ ವೀರಪ್ಪ ಯಗಟಿ ಬಿ. ಏ. ಎಲ್. ಎಲ್. ಬಿ. ವಕೀಲ ಹಾವೇರಿ | ೭೨ |
| (೯, | ಬಸವನು ವೇದ ಬಾಹಿರನೇ? .... .... .... <br>— ಕೈ. ವಾ. ವೀರಪ್ಪ ಬಸವಪ್ಪ ಬಿಳೇಅಂಗಡಿ ಬಿ ಏ. ಎಲ್ ಎಲ್. ಬಿ. ಹುಬ್ಬಳ್ಳಿ | ೮೮ |


---

# ಬಸವೇಶ್ವರನ ತತ್ವಗಳು.

ಸಾಮಾಜಿಕ ರಾಜಕೀಯ ಕುಲುಕಾಟದ ದಿನಗಳಿವು. ಧರ್ಮಪುರುಷರನ್ನೂ ಅವರ ಸಿದ್ಧಾಂತಗಳನ್ನೂ ಕಟ್ಟಿಕೊಂಡೇನು ಮಾಡುವೆವು, ಎಂದು ಆತುರಿಪರು ಅನೇಕರುಂಟು. ಅವರಿಗೆ—ಅಪ್ಪಗಳಿರ, ಧರ್ಮವನ್ನು ಮೂಲಿ ಗೊತ್ತದೆ ಇದ್ದಲ್ಲಿ, ಆವ ತೊಂದರೆಯಾಗಲಿ, ಆ ತೊಂದರೆಯಿಂದಾಗುವ ಕುಲುಕಾಟವಾಗಲಿ ಬಾರದು. ನಮ್ಮ ಬಸವನು ಹಬ್ಬಿಸಿದ ಧರ್ಮವಂತು ಉಭಯ ಲೋಕಸಾಧಕವಾಗಿದೆ. ಅದರಿಂದ ಬಸವಸಿದ್ಧಾಂತವು ಎಲ್ಲರಿಗೂ ಚಾರಿಗಲಿಸಬಲ್ಲುದೆಂದು ನಾನು ಹೇಳುವೆನು.

ಬಸವನು ಧರ್ಮಸ್ಥಾಪನೆಯನ್ನು ಮಾಡಿದನೆಂದರೆ, ಅವನಾವ ಆಗಮಕ್ಕಾಗಲಿ, ವೇದಕ್ಕಾಗಲಿ, ಸೂತ್ರಕ್ಕಾಗಲಿ, ಭಾಷ್ಯವ ಬರೆದನೇ, ಎಂದು ಆರೋ ಕೇಳಬಹುದು. ಆದರೆ ಬಸವನ ನಡೆನುಡಿಗಳು ಎಲ್ಲ ವೇದಾಗಮ ಸಿದ್ಧಾಂತ ರಹಸ್ಯಗಳ ತಿರುಳಾಗಿವೆ. ಬಸವನ ವಚನಗಳನ್ನು ಮಾತುಮಾತಾಡಿ ವೇದಾಗಮ ವಾಕ್ಯಗಳಿಗೆ ಒರೆ ಹಚ್ಚುವ ಕಾಲವಿದಲ್ಲ. "ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ । ತಾವಾನ್ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ" ಲೋಕದೊಳಗೆ ಕೆರೆ ಬಾವಿಗಳಿಂದ ಆಗುವ ಜಳಕ, ನೀರು ಕುಡಿಯುವದು, ಮುಂತಾದ ಈ ಎಲ್ಲ ಕೆಲಸಗಳು ಸುತ್ತಲೂ ನೀರು ತುಂಬಿದ ಕಡಲಿನಿಂದಲೇ ತೀರುತ್ತವೆ. ಅದರಂತೆ ಬ್ರಹ್ಮಜ್ಞಾನಿಯ ಆನಂದದಲ್ಲಿ ಎಲ್ಲ ಕರ್ಮಫಲಗಳೂ ಹುದುಗಿರುವವು, ಎಂಬ ಗೀತಾ ವಚನದ ಹಾಗೆ ಬಸವನು ತೆರೆದ ಧರ್ಮ ಭಾಂಡಾರವು ವೇದಾಗಮೋಪನಿಷತ್ತುಗಳ ರಹಸ್ಯಗಳನ್ನೆಲ್ಲ ಒಳಗೊಂಡಿದೆ ಯೆಂದು ಹೇಳಬಹುದು.

## ಮನಸ್ಸಿನ ಶುದ್ಧತೆ.

ಎಲ್ಲ ಹರಿದಾಟಗಳಿಗೆ ಮನವೇ ಕಾರಣವು. ಮನವು ಮಡಿಯಾಗಿದ್ದರೆ ನಮ್ಮ ನಡತೆಯು ಮಡಿಯು. ಅದು ಮೈಲಿಗೆಯಾದರೆ ನಮ್ಮ ನಡತೆಯು ಮೈಲಿಗೆಯು. ನಮ್ಮ ನಡೆನುಡಿಗಳಿಂದಲೆ ಧರ್ಮಾಧರ್ಮಗಳು, ಪಾಪಪುಣ್ಯಗಳು. ಹಲವು ಹೊತ್ತಿಗೆಗಳನ್ನು ಟೀಕಿಸುವದರಿಂದಾಗಲಿ ಉದ್ದುದ್ದ

ಉಪದೇಶಗಳನ್ನು ಸುರಿಯುವುದರಿಂದಾಗಲಿ ಲೋಕದ ಮನಸ್ಸನ್ನು ತಿದ್ದಲು ಶಕ್ಯವಲ್ಲ. ಮನವನ್ನು ಹಿಡಿದು ಒಡೆದು ಅದರ ಹುರುಳು ಹುಳುಕನ್ನೂ ಜೊಳ್ಳುಪೊಳ್ಳನ್ನೂ ಬಿಚ್ಚಿ ತೋರಿಸಬಲ್ಲವನು ನಮಗೆ ಧರ್ಮದ ಹೊಲಬನ್ನು ತೋರಿಸಬಲ್ಲನು. ಇಂಥವನು ನಮ್ಮ ಬಸವನು. ಅವನು ನಮ್ಮ ಮನವನ್ನು ಹೆಚ್ಚಿ, ಅದರ ಒಳುಗುಂದುಗಳನ್ನು ಮಾಯಿಸುವಲ್ಲಿ 'ಭವರೋಗ ವೈದ್ಯ' ನಾಗಿರುವನು.

"ಎನ್ನ ನಡೆಯೊಂದು ಪರಿ. ಎನ್ನ ನುಡಿಯೊಂದು ಪರಿ. ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ಎನ್ನೊಳಗಿರ್ಪನಯ್ಯಾ."

ಅನಾದಿ ಧರ್ಮಸ್ವರೂಪನೇ ತಾನಾದ ಬಸವನ ಉಪದೇಶವು ಇದು. ಇದು ತಾಯ ನುಡಿದಂತೆ ಮಿದುವಾದುದೂ ಇನಿದಪ್ಪುದೂ ಆಗಿ ಎದೆಯಲ್ಲಿ ಮೂಡುವಂತಹದು. ಅರಸನಪ್ಪಣೆಯಂತೆ ಗದರಿಸಿ ಹೇಳಿದ ಉಪದೇಶವು ಹೀಗಲ್ಲ.

ಅಂತಃಕರಣದ ದೋಷವನ್ನು ತೋರಿಸಿ ಅದನ್ನು ಮಾಯಿಸಲಿಕ್ಕೆ ಬಸವನು ಯೋಜಿಸಿದ ಉಪಾಯವು ಮೇಲಾದುದು. ಧರ್ಮವನ್ನೇ ನುಡಿದು ಅಧರ್ಮವನ್ನೇ ನಡೆವಲ್ಲಿ ಅಕ್ಕರವುಳ್ಳ ಮನವನ್ನು ತಿದ್ದಲು ಸ್ಮೃತಿಗಳು ನಿತ್ಯನೈಮಿತ್ತಿಕಗಳನ್ನೂ ಪ್ರಾಯಶ್ಚಿತ್ತಗಳನ್ನೂ ವಿಧಿಸುವವು. ಪ್ರಾಯಶ್ಚಿತ್ತವೆಂದರೆ ಅರಿತಾಗಲಿ ಅರಿಯದಾಗಲಿ ಮಾಡಿದ ಪಾಪವು ಹೋಗಲೆಂದು, ಪಾಪಿಯು ಇಹದಲ್ಲಿ ಶಾಸ್ತ್ರವಿಧಿಯಿಂದ ಹೊಂದಬೇಕಾದ ಕಷ್ಟವು. ಬಗೆಬಗೆಯ ಪಾಪಗಳಿಗೆ ಬಗೆಬಗೆಯ ಪ್ರಾಯಶ್ಚಿತ್ತಗಳುಂಟು. ಅವುಗಳನ್ನುಚ್ಚಿ ನೋಡಿದರೆ ಪುರೋಹಿತವರ್ಗದ ಹೊಟ್ಟೆಯ ಮೇಲೆ ಕಣ್ಣಿಟ್ಟು ಹೇಳಿದುವು. ಅವುಗಳಲ್ಲಿ ಹೆಚ್ಚಾಗಿವೆ. ಅದಕ್ಕಾಗಿ ಹೊನ್ನ ರಾಶಿಗಳೂ ಸಾಲುವಂತಿಲ್ಲ. ಪಶ್ಚಾತ್ತಾಪವೇ ನಿಜವಾದ ಪ್ರಾಯಶ್ಚಿತ್ತವು. ಆ ಪಶ್ಚಾತ್ತಾಪದಿಂದ ಶಿವನನ್ನು ಮೊರೆವೊಗುವುದೇ ಅಂತಃಕರಣ ಶುದ್ಧಿಯು. ಬಸವನು ಇದನ್ನು ಸರಸಾಗಿ ಹೇಳಿದ್ದಾನೆ:—

'ಎಲವೊ! ಎಲವೊ! ಪಾಪಕರ್ಮವ ಮಾಡಿದವನೆ! ಎಲವೊ! ಎಲವೊ! ಬ್ರಹ್ಮಹತ್ಯವ ಮಾಡಿದವನೆ! ಒಮ್ಮೆ ಶರಣೆನ್ನೆಲವೊ! ಒಮ್ಮೆ ಶರಣೆಂದರೆ ಪಾಪಕರ್ಮಗಳು ಕೆಟ್ಟೋಡುವವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತಂಗಳೈದುವುವೆ? ಓರ್ವಂಗೆ ಶರಣೆನ್ನಿ ನಮ್ಮ ಕೂಡಲಸಂಗಮದೇವಂಗೆ.'



ಅಂತಃಕರಣವನ್ನು ತಿದ್ದಲು ಸಂಧ್ಯಾವಂದನಾದಿಗಳೂ ಶಾಸ್ತ್ರದಲ್ಲಿ ಹೇಳಿಯವೆ. ಬ್ರಾಹ್ಮಣ ಕರ್ಮಗಳನ್ನು ಮುಂದಿಟ್ಟು ವಿಧಿಸಲ್ಪಟ್ಟವು ಅವಾಗಿವೆ. ಆದರೆ ನಿರಹಂಕಾರದಿಂದ ದೇವರನ್ನು ಉಪಾಸಿಸುವ ಮಾರ್ಗವು ಬೇರೊಂದಿದೆ. ಸರ್ವ ಅಭಿಮಾನವನ್ನು ಆಹುತಿಗೊಟ್ಟು ಈಶ್ವರನಿಗೆ ನಿರಭಿಮಾನದಿಂದ ತನ್ನನರ್ಪಿಸಿ ಭಜಿಸುವದೇ ನಿತ್ಯಕೃತ್ಯವೆಂದು ಬಸವನು ಕಲಿಸಿದ್ದಾನೆ.

## ಪರಮಾತ್ಮನ ನುತಿ.

ಬಸವನು ಪರಮ ವೈದಿಕನು. ಪುರುಷ ಸೂಕ್ತವನ್ನೂ ಉಪನಿಷತ್ತುಗಳನ್ನೂ ಪ್ರತಿಬಿಂಬಿಸುವ ವಚನಗಳಿಂದ ಅವನು ಪರಮಾತ್ಮನನ್ನು ನುತಿಸಿರುವನು.

"ಶ್ರುತಿ ತತಿಯ ಶಿರದ ಮೇಲೆ ಅತ್ಯತಿಷ್ಠದ್ದ ಶಾಂಗುಲನ ನಾನೇನೆಂಬೆನಯ್ಯ? ಘನಕ್ಕೆ ಘನ ಮಹಿಮನ ಮನಕ್ಕಗೋಚರನ ಅಣೋರಣೀಯಾನ್ಮಹತೋ ಮಹೀಯಾನ್ ಮಹಾದಾನಿ ಕೂಡಲಸಂಗಮದೇವ."

"ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಿಹ್ವೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿ, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷ, ಶಿರದಲ್ಲಿ ಉದಯ ತೆತ್ತೀಸಕೋಟಿ ದೇವತೆಗಳು. ಪಾದತಳದಲ್ಲಿ ಭೂಮಿಜನನವು. ಶ್ರೋತ್ರದಲ್ಲಿ ದಶದಿಕ್ಕು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನು, ಅಗಣಿತನು, ಸಾಸಿರತಲೆ, ಸಾಸಿರಕಣ್ಣು, ಸಾಸಿರ ಕೈ, ಸಾಸಿರಪಾದ, ಸಾಸಿರ ಸನ್ನಿಹಿತ ಕೂಡಲಸಂಗಮದೇವನು."

ವೇದಗಳಿಂದ ತೆಗೆದುಕೊಂಡ ವಾಕ್ಯಗಳು ಇವಾಗಿವೆ.

## ಅಹಿಂಸೆ.

ವೇದವನ್ನು ಪಶುಹಿಂಸಾತ್ಮಕ ಯಜ್ಞಪರವಾಗಿ ಓದುವುದು ಸರ್ವ ದಯಾಮಯನಾದ ಪರಮಾತ್ಮನ ವಚನ ವಿರೋಧವಾದುದೆಂದು ಬಸವನು ಹಿಂಸೆಯ ಖಂಡಿಸಿದ್ದಾನೆ.

"ಇಟ್ಟೆಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ, ಮುಟ್ಟೆಯ ನಿಟ್ಟ ದ್ವಿಜರ ಮಾತೇಕೋ? ಹಗಲು ಕಾಣದ ಗೂಗೆ ಇರುಳಾಯಿ

ತ್ತೆಂದರೆ ಜಗಕ್ಕೆ ಇರುಳಪ್ಪುದೇ ಮರುಳೇ? ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ ಅನಾಮಿಕರೊಡನಾಡಿ ಗೆಲುವುದೇನು ಕೂಡಲ ಸಂಗಮದೇವ."

"ಮಾತಿನ ಮಾತಿಗೆ ನಿನ್ನ ಕೊಂದಹರೆಂದು ಎಲೆ ಹೋತೇ ಅಳು ಕಂಡೆಯಾ? ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೇ! ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ ಹೋತೇ! ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವನವರ."

ಯಜ್ಞದಲ್ಲಾಗುವ ಪಶುಹಿಂಸೆಯು ಹಿಂಸೆಯಲ್ಲವೆಂದು ಮೀಮಾಂಸಕರು ಸಾಧಿಸುವರು. ಅವರ ವಿಪರೀತ ವಾದಕ್ಕೆ ಬಸವನು ಮೇಲಿನಂತೆ ಹೇಳಿದ್ದಾನೆ.

ಸ್ಮೃತಿಕರ್ತರು ಸಾಮಾನ್ಯ ಧರ್ಮವೆಂದೂ ವರ್ಣ ಧರ್ಮವೆಂದೂ ಆಶ್ರಮ ಧರ್ಮವೆಂದೂ ವರ್ಣಾಶ್ರಮ ಧರ್ಮವೆಂದೂ ಧರ್ಮವನ್ನು ಹಂಚಿದರು. ಸಾಮಾನ್ಯ ಧರ್ಮವೆಂದರೆ ಅಹಿಂಸಾ, ಸತ್ಯ, ದಯಾ ಎಂಬೀ ಮೊದಲಾದುವು. ಇವನ್ನು ಸರ್ವರು ಪಾಲಿಸಬೇಕಾದುದರಿಂದ ಸಾಮಾನ್ಯವೆನಿಸಿತು. ಯಜ್ಞಾದಿಗಳು ವರ್ಣ ಧರ್ಮವು. ಅದನ್ನು ಬ್ರಾಹ್ಮಣಾದಿ ವರ್ಣದವರೇ ಮಾಡತಕ್ಕುದು. ಅಹಿಂಸಾದಿ ಸತ್ಯಧರ್ಮದಿಂದ ಶೂದ್ರರು ನಡೆದರೂ ಹಿಂಸಾತ್ಮಕ ಯಜ್ಞವನ್ನು ಮಾಡುವ ದ್ವಿಜನಿಗಿಂತ ಅವರು ಹೀನರೆಂದು ಸ್ಮೃತಿಗಳು ಹೇಳುತ್ತಿವೆ. ಇದು ತಪ್ಪು. ಅಹಿಂಸಾದಿಗಳನ್ನವಲಂಬಿಸುವ ಶೂದ್ರನು ನಿಜವಾಗಿಯೂ ಹೆಚ್ಚಿನವನೆಂಬುದಾಗಿ ಬಸವನ ವಚನವು. ಇದು ಯಾವುದೆಂದರೆ,

"ಕೊಲ್ಲುವನೇ ಮಾದಿಗನು. ಹೊಲಸು ತಿಂಬುವನೇ ಹೊಲೆಯ. ಕುಲವೇನೋ? ಅವಂದಿರ ಕುಲವೇನೊ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವನೇ ಕುಲಜ ಕೂಡಲಸಂಗಮದೇವ"

ವರ್ಣ ಧರ್ಮವೆಂಬ ಮುಸುಕಿನಲ್ಲಿ ಮರೆಯಾದ ಉಚ್ಚ ವೈದಿಕ ತತ್ವಗಳನ್ನು ಬಸವನು ನಮ್ಮ ಕಣ್ಣೆದುರಿಗೆ ಇಟ್ಟನು. ಅಂದರೆ ದೇವನೊಬ್ಬನೇ ಇದ್ದಾನೆ. ಅವನು ಚರಾಚರ ವಿಶ್ವವನ್ನೂ ಭೂತ ಭೌತಿಕಗಳನ್ನೂ ವ್ಯಾಪಿಸಿ



ಅನಶ್ವರನಾಗಿರುವನು. ಅವನು ವಾಙ್ಮನಾತೀತನು. ಒಬ್ಬೊಬ್ಬ ಮನುಷ್ಯನ ಗುಣಾಗುಣ ಗಣದಿಂದಲೇ ಅವನು ಹೊಲಬಿಗನು, ಅಲ್ಲವೆ ಹೊಲೆಯನು.

ಹೀಗೆ ಬಸವನು ಮೇಲಿನ ವಚನದಲ್ಲಿ ಹೇಳಿದ್ದಾನೆ.

ಇವು ವೈದಿಕ ಧರ್ಮದ ಸಾಮಾನ್ಯ ತತ್ವಗಳು. ಸ್ಮಾರ್ತರಾದವರು ಕೊನೆಗೆ ಇವೇ ತತ್ವಗಳನ್ನು ಸನ್ಯಾಸದಲ್ಲಾದರೂ ಸ್ವೀಕರಿಸುವರು. ಬಸವನು ಇವನ್ನೇ ವೀರಶೈವದ ತಳಹದಿಯಾಗಿ ಅದರ ವಿಶೇಷ ತತ್ವವನ್ನು ಪ್ರಚಾರಿಸಿದನು.

## ಸಂಸಾರವು ಹೇಯವು.

ವೀರಶೈವದ ವಿಶೇಷ ತತ್ವವೆಂದರೆ ಲಿಂಗಾಂಗಸಾಮರಸ್ಯವು. ಇದು ವೇದಾಗಮೋಪನಿಷತ್ತುಗಳ ಸಾರವಾಗಿದೆ. ವೇದದಲ್ಲಿ ಅತಿ ಗೂಢವಾಗಿಯೂ ಉಪನಿಷತ್ತುಗಳಲ್ಲಿ ಮಸಕು ಮಸಕಾಗಿಯೂ ಶಿವಾಗಮೋತ್ತರ ಭಾಗದಲ್ಲಿ ಸ್ಪಷ್ಟವಾಗಿಯೂ ವೀರಶೈವವು ಕಂಡು ಬರುತ್ತದೆ. ನೆಲದ ಮೇಲಿರುವ ನಮಗೆ ಬಾಷ್ಪದಲ್ಲಿ, ಉಗೆಯಾದ ಮೋಡದಲ್ಲಿ, ಅದಕ್ಕೂ ದಟ್ಟಾಗಿ ಮಳೆಯಲ್ಲಿ ನೀರಾಗಿ, ಆ ಉದಕವು ನದೀ ಪ್ರವಾಹವಾಗಿ, ನೀರಡಿಕೆಯನ್ನು ಆರಿಸಲು ಸಮರ್ಥವಾಗುವಂತೆ ಈ ಧರ್ಮವು ಬಸವಚರಿತ್ರದಲ್ಲಿ ನಮ್ಮ ಸಂಸಾರ ತಾಪವನ್ನು ಆರಿಸಲು ಸಮರ್ಥವಾಗಿದೆ. ಸಂಸಾರ ಸಮುದ್ರದ ತೆರೆಗಳಿಂದಲೂ ಅದರ ನೆಲೆ ಇಲ್ಲದ ಆಳದಿಂದಲೂ ಪಾರಾಗಿ ಶಿವಪಾದವೆಂಬ ಸೊಗದ ರೇವನ್ನು (ಬಂದರವನ್ನು) ಸೇರಬೇಕೆಂಬ ಲವಲವಿಕೆಯು ವೀರಶೈವದ ಮೊದಲಿನ ಮೆಟ್ಟು.

"ಸಂಸಾರ ಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆಯುತ್ತಿದೆ. ಸಂಸಾರ ಸಾಗರ ಉರದುದ್ದವಾದೊಡೆ ಹೇಳುವೆ. ಸಂಸಾರ ಸಾಗರ ಕೊರಳುದ್ದವಾದೊಡೆ ಹೇಳುವೆ. ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನು ಹೇಳುವೆನಯ್ಯ! ಅಯ್ಯ! ಅಯ್ಯ! ನಾನೇನೆನಯ್ಯ ಕೂಡಲ ಸಂಗಮದೇವಯ್ಯ?"

ಈ ವಿವೇಕವುಳ್ಳಾತನೇ ಮನುಜನು. ಇಲ್ಲದವನು ಸರ್ಪನ ನೆರಳ ಬಯಸಿದ ಕಪ್ಪೆಯಂತಿಹನು. ದೇಹಾಂತ ಶಿಕ್ಷೆಯನ್ನು ಹೊಂದಿದವನು ಆ ಶಿಕ್ಷೆಗೆ ಮುಂಚೆ ತನಗೆ ಕೊಡುವ ಭೋಗಗಳಲ್ಲಿ ರತಿ ಹೊಂದಿದಂತೆ ಇವನಿಹನು.

"ಕಪ್ಪೆ ಸರ್ಪನ ನೆರಳಲ್ಲಿ ಇರುವಂತೆ ಎನಗಾಯಿತಯ್ಯಾ ! ಅಕಟಕಟ ಸಂಸಾರ ವೃಥಾ ಹೋಯಿತಲ್ಲ. ಕರ್ತೃ ಕೂಡಲ ಸಂಗಮ ದೇವ ಇದನು ತಪ್ಪಿಸಿ ನನ್ನನ್ನು ರಕ್ಷಿಸಯ್ಯ ಪ್ರಭುವೆ ! "

"ಶೂಲದ ಮೇಲಣ ವಿಭೋಗವೇನಾದರೇನೋ ? ನಾನಾ ವರ್ಣದ ಸಂಸಾರ ಹಾವ ಹಾವಾಡಿಗನ ಸ್ನೇಹದಂತೆ. ತನ್ನ ಆತ್ಮನೇ ತನಗೆ ಹಗೆಯಾದ ಬಳಿಕ ಬಿನ್ನಣವುಂಟೆ? ಎಮಗಾದಿ ನೀನು ಕೂಡಲ ಸಂಗಮದೇವ!"

ಸಂಸಾರವು ವಿಚಾರವಂತನಿಗೆ ಸುತ್ತೆಲ್ಲ ಉರಿಯೊಳಕೊಂಡಿರುವುದು. ಅದನ್ನಾರಿಸಲು ಶಿವನಲ್ಲದೆ ಬೇರಾರು ಆರ್ತರಲ್ಲ. (ಸಮರ್ಥರಲ್ಲ)

"ಒಲೆ ಹೊತ್ತಿ ಉರಿದರೆ ನಿಲ್ಲಬಹುದಲ್ಲದೆ ಧರೆ ಹೊತ್ತಿ ಉರಿದರೆ ನಿಲ್ಲಬಾರದು. ಏರಿ ನೀರನುಂಬರೆ, ಬೇಲಿ ಕೆಯ್ಯ ಮೇವರೆ, ನಾರಿ ತನ್ನ ಮನೆಯಲಿ ಕಳವರೆ, ತಾಯಿ ಮೊಲೆವಾಲೆ ನಂಜಾಗಿ ಕೊಲುವರೆ, ಇನ್ನಾರಿಗೆ ದೂರುವೆ ಕೂಡಲ ಸಂಗಮದೇವ ? "

## ವೀರಶೈವಾಧಿಕಾರಿಯು ಯಾರು ?

ಈ ವಚನಗಳಿಂದ ವೀರಶೈವಕ್ಕೆ ಆರು ಅಧಿಕಾರಿ ಎಂಬುದನ್ನು ಬಸವನು ತೋರಿಸಿರುವನು. ಅದೆಂತೆಂದರೆ, ಶಿವನಲ್ಲಿ ಮಿಗುವ ಭಕ್ತಿಯು, ಸದಾಚಾರ ವಿನಯಾದಿಗಳ ಒದವು, ಸಂಸಾರದ ದಂದುಗವನ್ನು ದಾಂಟುವ ತವಕು, ಶಿವನನೆಂದು ಕಾಣ್ಬೆನೆಂಬ ಲವಲವಿಕೆಯುಳ್ಳವನೇ ವೀರಶೈವಾಧಿಕಾರಿಯು.

ವೀರಶೈವವು ಲಿಂಗಾಂಗ ಸಾಮರಸ್ಯದ ಅನುಭವದಲ್ಲಿ ಪೂರ್ಣವಾದುದು. ಆ ಅನುಭವವು ಇತರ ಅನುಭವದಿಂದ ಪರಿಪೂರ್ಣವಾಗುವ ವೈದ್ಯ ಶಾಸ್ತ್ರಾದಿಗಳಂತೆ ಹೊತ್ತಿಗೆಗಳಿಂದ ಬಾರದು. ವೈದ್ಯ ಶಾಸ್ತ್ರವನ್ನು ಕಲಿಯಬೇಕೆಂಬವನು ತಕ್ಕವನಾದ ಗುರುವನ್ನು ಹೊಂದಿ ಶರೀರದ ರೋಗಗಳನ್ನೂ ಅವುಗಳ ಕಾರ್ಯ ಕಾರಣಗಳನ್ನೂ ಅವಕ್ಕೆ ಪ್ರತೀಕಾರವಾದ ವನಸ್ಪತಿಗಳ ಗುಣಾವಗುಣಗಳನ್ನೂ ತನ್ನ ಅನುಭವ ಮಾಡಿಕೊಳ್ಳಬೇಕು. ಅದರಂತೆಯೆ ವೀರಶೈವ ವಿದ್ಯೆಯು ಬಸವನು ಮನ ನಡುವಂತೆ ಹೇಳಿರುವನು. ಅದು ಹೇಗೆಂದರೆ--



"ಮಡಕೆಯ ಮಾಡುವರೆ ಮಣ್ಣೇ ಮೊದಲು. ತೊಡಿಗೆಯ ಮಾಡುವರೆ ಹೊನ್ನೇ ಮೊದಲು. ಶಿವಪದವ ನೋಡುವರೆ ಗುರುಪದವೇ ಮೊದಲು. ಕೂಡಲಸಂಗಮದೇವರನರಿವರೆ ಶರಣರ ಸಂಗವೇ ಮೊದಲು. "

"ನೋಡಿ ನೋಡಿ ಮಾಡುವ ನೇಮ ಸಲ್ಲವು. ತನು ಉದ್ದೇಶ ಮನ ಉದ್ದೇಶ ಮಾಡುವ ನೇಮ ಸಲ್ಲವು. ಗುರುಪಥವ ಮೀರಿ ಮಾಡುವ ನೇಮ ಸಲ್ಲವು. ಕೂಡಲಸಂಗಮದೇವ ಇವು ನಿಮ್ಮ ನಿಜದೊಳಗೆ ನಿಲ್ಲವು ನಿಲ್ಲವು."

## ವಿನಯವುಳ್ಳವನಾಗಿರುವುದು.

ಅಹಂಕಾರವು ಸರ್ವಪಾಪಗಳಿಗೆ ಬೇರು ಆಗಿರುವದು. ಅದ್ದರಿಂದ ವೀರಶೈವಾಧಿಕಾರಿಯು ವಿನಯದ ಪುತ್ತಳಿಯೇ ಆಗಿರಬೇಕು. ಹಾಗಲ್ಲದೆ ಹಮ್ಮು ಬಿಮ್ಮುಗಳುಳ್ಳವನು ಶಿವಪದಕ್ಕೆ ಸಲ್ಲನು. ತಾನು ಗುಣವಂತನೆಂಬ ಸೊಕ್ಕು ಇರಬಾರದು. ನಿಜವಾದ ಗುಣವಂತಿಕೆಯು ಲಿಂಗಾಂಗ ಸಾಮರಸ್ಯದಿಂದಲ್ಲದೆ ಬಾರದು. ಆ ಸಾಮರಸ್ಯವಿಲ್ಲದವನ ಸದ್ಗುಣಗಳು ನಿಜವಲ್ಲ. ಪ್ರಕೃತಿಯ ಮಲವು ಸುಡದೆ ಶಿವಗುಣಗಳು ಕೈಸಾರವು.

ಸದ್ಗುರುವಿನ ಕರುಣೆಯನ್ನು ವಿನಯವೆಂಬ ಬೆಲೆಯಿಂದಲ್ಲದೆ ಕೊಳ್ಳಲು ಸಾಧ್ಯವಲ್ಲ.

"ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೇ ಕಬ್ಬುನದಲ್ಲಿ ? ಸಾಧು ಗುಣವನರಸುವನೇ ಅವಗುಣಿಯಲ್ಲಿ? ಚಂದನ ಗುಣವನರಸುವುದೇ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೇ ಎನ್ನಲ್ಲಿ ಅವಗುಣವನರಸುವರೇ ಕೂಡಲಸಂಗಮದೇವಾ ? "

## ಜ್ಯೋತಿಷ್ಯವನ್ನು ನಂಬಕೂಡದು.

ಹೀಗೆ ಗುರು ಕಾರುಣ್ಯವನ್ನು ದೊರಕಿಸಿದರೆ ಲಿಂಗಧಾರಣಕ್ಕೆ ಭಕ್ತನು ಅರ್ಹನಾಗುವನು. ಲಿಂಗಧಾರಣವು ಬಲು ಮಂಗಲವಾದುದು. ಗುರು ಕಾರುಣ್ಯವಾದ ಕ್ಷಣವೆ ಅದಕ್ಕೆ ಬೇಕಾದ ಶುಭ ಮುಹೂರ್ತವೆಂದು ಭಾವಿಸಬೇಕು. ಅವನು ಪಂಚಾಂಗವನ್ನು ನೋಡಲು ಕಾರಣವಿಲ್ಲ. ಮುಹೂರ್ತ

ನೋಡುವಲ್ಲಾಗುವ ವಿಲಂಬವು ವಿಷವಾಗಿ ಪರಿಣಮಿಸುವುದು. ಇದೀಗ ಬಸವನ ನುಡಿಯು.

"ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ! ರಾಶಿಕೂಟ ಋಣಾನುಬಂಧ ಉಂಟೆಂದು ಹೇಳಿರಯ್ಯ! ನಾಳಿನ ದಿನಕ್ಕೆ ಇಂದಿನ ದಿನ ಲೇಸೆಂದು ಹೇಳಿರಯ್ಯ! ಕೂಡಲಸಂಗಮದೇವರ ಪೂಜಿಸಿದ ಫಲ ನಿಮ್ಮದಯ್ಯ."

## ಲಿಂಗ ಧಾರಣೆ—ಗುರೂಪದೇಶ.

ಶಿಷ್ಯನ ಮೇಲಿನ ಕರುಣೆಯಿಂದ ಕರಗಿ ಗುರುವು ತಾನು ಒಳ್ಳೇ ಗುಪ್ತವಾಗಿಟ್ಟುಕೊಂಡ ಶಿವಮಂತ್ರವನ್ನು ಉಸಿರುತ್ತ ಆ ಮಂತ್ರಕ್ಕೆ ಅರ್ಥವೇ ಆಗಿರುವ ಶಿವಲಿಂಗವನ್ನು ಕರುಣಿಸುವನು. ಲಗ್ನ ಕಾಲದಲ್ಲಿ ವಧುವನ್ನು ನೀರೆರೆದು ಅರಸಿನವನೆ ಹೂಸಿ ಹೊಂದೊಡಿಗೆಯ ನಿಟ್ಟು ಸಿಂಗರಿಸುವಂತೆಯೂ, ವರನನ್ನು ಮಂಗಲಸ್ನಾನಂಗೈಸಿ ಅರಿಸಿನವ ಹೂಸಿ ಸಿಂಗರಿಸುವಂತೆಯೂ ಶಿಷ್ಯನೆಂಬ ವಧುವನ್ನು ಕಲಶಾಭಿಷೇಕಾದಿಗಳಿಂದ ಪರಿಶುದ್ಧಿಗೊಳಿಸಿ ಮಾತೃಕಾನ್ಯಾಸಾದಿಗಳಿಂದಲೂ ಕಲಾನ್ಯಾಸದಿಂದಲೂ ಶರೀರ ಮಾನಸ ಭಾವಗಳನ್ನು ಪವಿತ್ರೀಕರಿಸಿ ವಿಭೂತಿಯನೆ ತೊಡೆದು ತ್ರಿಪುಂಡ್ರವನೆ ರಚಿಸಿ ರುದ್ರಾಕ್ಷಾಭರಣಗಳನ್ನು ತೊಡಿಸಿ ಚೌಕ ಮಧ್ಯದಲ್ಲಿ ಕುಳ್ಳಿರಿಸಿ ಲಿಂಗವನು ಅದರಂತೆಯೆ ಸಂಸ್ಕರಿಸಿ ಮಂತ್ರೋಪದೇಶವನ್ನು ಮಾಡುತ್ತ ಲಿಂಗವನ್ನು ಕೈಗೆ ಕೊಟ್ಟು ಆ ಲಿಂಗದಲ್ಲಿ ಶಿಷ್ಯನ ಮಸ್ತಕದಲ್ಲಿ ಹುದುಗಿರ್ದ ಶಿವಕಳೆಯನ್ನು ಸಂಗಡಿಸಿ, ಲಿಂಗವೇ ಪತಿ ನೀನು ಸತಿ ಎಂಬ ಬಗೆಯಿಂದ ಶರೀರದಿಂದಗಲದೆ ತಾಳಿ ಉರಿಕಪ್ಪುರಗಳಂತೆ ಬೆರಿಸೆಂದು ಬೋಧಿಸುವನು. ಈ ವಿಷಯವಲ್ಲಿ ಬಸವ ವಚನವನ್ನು ಕೇಳಿರಿ!

"ಮುನ್ನ ಮಾಡಿದ ಪಾಪವೆಂತು ಪೋಪುದೆಂದು ಚಿಂತಿಸಬೇಡ. ಕಹಿಸೋರೆಯ ಕಾಯ ತಂದು, ವಿಭೂತಿಯ ತುಂಬಿದರೆ ಸಿಹಿಯಾಗದೆ ಮೂರು ದಿವಸಕ್ಕಯ್ಯ ? ಹಲವು ಕಾಲ ಕೊಂದ ಸೂನೆಗಾರನ ಕೈಯ್ಯ ಕತ್ತಿಯಾದರೇನು ? ಪರುಷ ಮುಟ್ಟಲಿಕ್ಕೆ ಹೊನ್ನಾಗದೇ ಅಯ್ಯಾ? ಎನ್ನ ಲಲಾಟದಲ್ಲಿ ವಿಭೂತಿಯ ಬರೆದರೆ, ಪಾಪ ಪಲ್ಲಟವಾಗದೇ ಕೂಡಲಸಂಗಮದೇವ?"

"ಅರಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನೊಲಿದ ಲಲನೆಯಂತೆ ಆಗಿದ್ದೆನಯ್ಯ! ವಿಭೂತಿಯನೆ ಧರಿಸಿ ರುದ್ರಾಕ್ಷಿ



ಯನೆ ಕಟ್ಟಿ, ಶಿವ ನಿಮ್ಮ ಒಲಿದಂತೆ ಆಗಿದ್ದೆನಯ್ಯ. ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ. ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವ.

"ಓಂ ನಮ: ಶಿವಾಯ ಮಂತ್ರವ ಮೀರಲಮ್ಮದೆ ನಿಂದುದು ವೇದ. ಓಂ ನಮಃ ಶಿವಾಯ ಮಂತ್ರವ ಮೀರಲಮ್ಮದೆ ನಿಂದುದು ತರ್ಕ. ಭಯಂಕರ ಭ್ರಮೆಗೊಂಡಿತ್ತು. ಮಂತ್ರ ತಂತ್ರ ಶಿವನಂತವನರಿಯದೆ ಚಿಂತಿಸುತ್ತಿದ್ದಿತು ಲೋಕ. ಕೂಡಲಸಂಗಮದೇವ ಶ್ವಪಚನ ಮೆರೆದರೆ ಜಾತಿ ಭೇದವ ಮಾಡಲಮ್ಮೆನು."

"ಜಗವೆಲ್ಲರಿಯಲು ಎನಗೊಬ್ಬ ಗಂಡನುಂಟು.' ಆನು ಮುತ್ತೈದೆ. ಆನು ನಿಷ್ಠೆ. ಕೂಡಲಸಂಗಮದೇವ ನಂತಪ್ಪ ಎನಗೊಬ್ಬ ಗಂಡನುಂಟು."

"ಜಗದಗಲ ಮುಗಿಲಗಲ ಮಿಗಿಲಗಲ ನಿಮ್ಮಗಲ. ಪಾತಾಳಲೋಕದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ. ಕೂಡಲಸಂಗಮದೇವಯ್ಯ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲ."

ಗುರುವು ಲಿಂಗವಾಗಿ ಶಿಷ್ಯನಲ್ಲಿ ಸಂಗತವಾದ ವಚನವಿದುಃ—

"ಕಂಗಳ ಮುಂದಿನಿಂದ ಶ್ರೀಗುರುಲಿಂಗ ಹಿಂಗಿದರೆ ವ್ರತಕ್ಕೆ ಭಂಗವಾದುದೆಂದು ಕೊಟ್ಟನಯ್ಯ ಶ್ರೀಗುರು ಕರಸ್ಥಲದಲ್ಲಿ ಪ್ರಾಣಲಿಂಗವ. ಆ ಲಿಂಗ ಮುಟ್ಟಲೊಡನೆ ತನುಪ್ರಸಾದ, ಮನಪ್ರಸಾದ, ಧನಪ್ರಸಾದವಾಯಿತ್ತು. ಇಂತು ಸರ್ವಾಂಗ ಪ್ರಸಾದವಾಯಿತ್ತು ಕೂಡಲಸಂಗಮದೇವ."

ಗುರುವು ಲಿಂಗವಾಗಿ ನೆಲಿಸಲು ತನು ಮನ ಧನ ಪ್ರಸಾದವಾದ ಇರವನ್ನು ನೋಡಿರಿಃ—

"ಆವ ಕುಲವಾದರೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ? 'ಶಿವಜಾತಃ ಕುಲೀನಸ್ಯಾತ್ಪೂರ್ವಜಾತಿ ವಿವರ್ಜಿತಃ । ಉಮಾ ಮಾತಾ ಪಿತಾ ರುದ್ರಃ ಐಶ್ವರಂ ಕುಲಮೇವ ಚ" ಎಂದುದಾಗಿ.

"ಆರಾಧ್ಯವು ಪ್ರಾಣಲಿಂಗವೆಂದರಿದು ಪೂರ್ವ ಗುಣವಳಿದು ಪುನರ್ಭೂತನಾದ ಬಳಿಕ ಸಂಸಾರ ಬಂಧುಗಳೆನ್ನವರೆಂದರೆ, ನಂಟು ಭಕ್ತಿ ನಾಯಕ ನರಕ, ಇಂತೆಂದುದು ಕೂಡಲಸಂಗನ ವಚನ."

ಇಂತು ಚರಿಸೆ ಶಿವನಲ್ಲಿ ಸಮರಸವಾಗುವುದು. ಕಾಳು ನರರಿಗೆ ಸಾಧಿಸದು. ಅವರು ದೀಕ್ಷೆಗರುಹರಲ್ಲ. ವೀರಶೈವ ಸದ್ಗುರೂಪದೇಶವು—ಹುಲಿಯ ಹಾಲು ಹುಲಿಮರಿಗಲ್ಲದೆ ಸಲ್ಲದು.

"ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗೆ ಉಣಬಾರದು. ಕಲಿಯ ಕಾಲ ತೊಡರು ಉಚ್ಚಳದಾಳಿಗಲ್ಲದೆ ಇಕ್ಕಬಾರದು. ಅಳಿಮನ ದಾಸೆಯವರ ಮೂಗ ಹಲ್ಲುಮೋರೆ ಕೊಯ್ಸ ಕೂಡಲಸಂಗಮದೇವ."

"ಸಗಣೆಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಗಂಜಳ ಬಿಡದಣ್ಣ. ಮಣ್ಣ. ಪುತ್ಥಳಿಯ ಮರಮರಳಿ ಜಲದಲ್ಲಿ ತೊಳೆದರೆ ನಿಚ್ಚ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣ. ಲೋಕದ ಮಾನವನಿಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವರ್ನೇಕೆ ಸದ್ಭಕ್ತನಾಗುವನು ಕೂಡಲಸಂಗಮದೇವ?"

ಹೀಗೆ ನಿರ್ಮಲಾತ್ಮನಾಗಿ ಲಿಂಗಸಮರಸವಾದವನು ಜಾತಿಸೂತಕದಂತೆ ಉಳಿದ ಜನನೋಚ್ಛಿಷ್ಟ ರಜೋಮೃತಿಸೂತಕಗಳನ್ನು ನೀಗುವನು. ಎಲ್ಲ ಸೂತಕಕ್ಕೂ ಪಿಂಡದಭಿಮಾನವು ಮೂಲವು.

## ಜಪವು.

ಭಾವವು ಶುದ್ಧವಾಗಲಿಕ್ಕೆ ಮಂತ್ರಜಪವು ಕಾರಣವು. ನಾಲಗೆಯ ಮಂತ್ರವು ಕಣ್ಣ ಮುಂದಿನ ಲಿಂಗವನ್ನು ತುಂಬುವುದು. ಲಿಂಗನಾಮವೆಂಬ ಮಂತ್ರವನ್ನು ನುಡಿದ ನಾಲಿಗೆಯೂ ಲಿಂಗರೂಪವನ್ನು ನೋಡುವ ಕಣ್ಣೂ ಒಂದುಗೂಡಿದಲ್ಲಿ ಜಪದಲ್ಲಿ ಮನಸ್ಸು ನಿಲ್ಲುವುದು. ಮನದಲ್ಲಿ ತುಂಬಿದ ಶಿವಭಾವವೇ ಪ್ರಾಣಲಿಂಗವು.

ಇಷ್ಟಲಿಂಗದ ದೃಷ್ಟಿಯಿಂದ ನೋಟವೂ, ಲಿಂಗಮಂತ್ರದಿಂದ ನಾಲಿಗೆಯೂ, ಲಿಂಗಪೂಜೆಯಿಂದ ಕೈಗಳೂ, ಶಿವಪೂಜಾಸನದಿಂದ ಪದ್ಮಾಸನವೂ, ಲಿಂಗತನುವು ಅಶುಚಿಯಾಗದಂತೆ ಬಂಧಿಸಿದರಿಂದ ದೇಹವೂ, ಲಿಂಗಸ್ತುತಿಯನ್ನು ಕೇಳುವುದರಿಂದ ಕಿವಿಯೂ, ಲಿಂಗಸ್ಪರ್ಶನದಿಂದ ಹಸ್ತವೂ, ಲಿಂಗದೃಷ್ಟಿಯಿಂದ ನೋಟವೂ, ಶಿವಪ್ರಸಾದರುಚಿಯಿಂದ ರಸನೆಯೂ, ಶಿವನಿರ್ಮಾಲ್ಯ ಘ್ರಾಣದಿಂದ ನಾಸಿಕವೂ, ಶಿವಮಯವಾಗುವವು. ಇದೀಗ ಬಸವನ ವಚನ—



"ನಿಮ್ಮ ನೋಟವನಂತ ಸುಖ. ಕೂಟ ಪರಮ ಸುಖ. ಅಷ್ಟಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನು. ಕೂಡಲಸಂಗಮದೇವಯ್ಯ, ನಿಮ್ಮ ನೋಡಿ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು."

"ವಚನದಲ್ಲಿ ನಾಮಾಮೃತವ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮರುಹನೆ ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿಯನೆ ತುಂಬಿ, ಕೂಡಲಸಂಗಮದೇವ ನಿಮ್ಮ ಚರಣಕಮಲದೊಳು ಸೊಗದ ಬಂಡನುಂಬ ತುಂಬಿಯಾಗಿರ್ಪೆನು."

"ಅಡಿಗಡಿಗೆ ಲಿಂಗವನು ಅಡರಿ ಅಡರಿ ನೋಡಿ ಕಂಗಳು ಕಡೆಗೋಡಿ ವರಿದುವೆನಗಯ್ಯ ಎನ್ನಶ್ರುಜಲಂಗಳು! ಆಲಿಗಲ್ಲ ರೂಹಿನಂತೆ, ಅರಗಿನ ಪುತ್ತಳಿಯಂತೆ, ತನುವೆಲ್ಲ ಪುಳಕಿತವಾಗೆ ಬೆವರ ಬಿಂದುಗಳೆಲ್ಲ ಭಕ್ತಿರಸದ ದ್ರವವಯ್ಯ! ಕೂಡಲಸಂಗಮದೇವಯ್ಯ ನಿಮ್ಮ ದರುಶನದಿಂದ ಮನವೊಲಿದ ನೆನವನೇನು ಹೇಳುವೆನಯ್ಯ!

ಈ ಬಸವಾಗಮಕ್ಕೆ ಶಿವಾಗಮ ನೋಡಿರಿಃ—

ಲಿಂಗಧ್ಯಾನಂ ಲಿಂಗಮನೋ ಲಿಂಗ ಪೂಜಾ ಪರೌ ಕರೌ । ಲಿಂಗ ಶ್ರುತಿಪರೇ ಶ್ರೋತ್ರೇ ಲಿಂಗಾರ್ಪಿತ ರಸಾದರಃ ॥ ಲಿಂಗ ನಿರ್ಮಾಲ್ಯ ಸುರಭಿ ಲೋಭೋ ಘ್ರಾಣಸ್ಯ ಪಾರ್ವತಿ ! ಲಿಂಗಾಲಂಕಾರ ಸಂದರ್ಶನಾಸಕ್ತೇ ಲೋಚನೆ ಪಿ ಚ ॥ ಲಿಂಗ ಪ್ರದಕ್ಷಿಣಪರೌ ಪಾದೌ ಚ ಗಿರಿಸಂಭವೇ । ಲಿಂಗಸ್ಯ ಪುರತೋ ನಿತ್ಯಂ ತದರ್ಥಂ ಚಾಂಗಚೇಷ್ಟನಂ ॥ ಲಿಂಗಾರ್ಥ ದತ್ತ ಸರ್ವಸ್ವಂ ಲಿಂಗ ನಿಷ್ಠೇತಿ ಗೀಯತೇಃ— ಸೂಕ್ಷ್ಮಾಗಮ.

## ಜಂಗಮ ಭಕ್ತಿ.

ಇಂತು ಲಿಂಗದಲ್ಲಿ ಕರಗಿದ ಭಕ್ತನು ಜಂಗಮವು ಲಿಂಗವೆಂದೇ ಕಾಂಬನು. ಭಕ್ತ ಜಂಗಮವೆಂಬಿವು ಜ್ಞಾನಕ್ರಿಯೆಗಳಂತೆಯೂ, ಶರೀರೇಂದ್ರಿಯಗಳಂತೆಯೂ, ಪ್ರಾಣ ಚೈತನ್ಯಗಳಂತೆಯೂ ಏಕ ರೂಪವಾಗಿವೆ.

ಭಕ್ತನು ಜಂಗಮದಲ್ಲೂ ಜಂಗಮನು ಭಕ್ತನಲ್ಲೂ, ಬೆರೆದು ಮಾಡುವ ಭಕ್ತಿಯೇ ಭಕ್ತಿಯು.

"ಜಂಗಮವ ಕೂಡಿ ಲಿಂಗಾರ್ಚನೆಯ ಮಾಡುವುದು ಲೇಸು ಕಂಡಯ್ಯಾ ಭಕ್ತಂಗೆ. ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು

ಲೇಸಯ್ಯ ಜಂಗಮಕ್ಕೆ. ಆ ಜಂಗಮದ ದಾಸೋಹವೇ ಭಕ್ತನ ಕರ್ತವ್ಯ. ಆ ಭಕ್ತನ ಕಿಂಕಲವೆ ಜಂಗಮಕ್ಕೆ ದಾಸೋಹ. ಆ ಭಕ್ತನೊಳಗೆ ಜಂಗಮವಡಗಿ, ಆ ಜಂಗಮದೊಳಗೆ ಭಕ್ತವಡಗಿಹುದ ಇದನೇನೆಂದು ಹವಣಿಸುವೆನಯ್ಯ ತೆರಹಿಲ್ಲದ ಘನವ? ಈ ಎರಡಕ್ಕೆ ಭವವಿಲ್ಲೆಂದು ನಿಮ್ಮ ಶ್ರುತಿಗಳು ಹೇಳಿದುವಾಗಿ."

ಈ ವಚನವಲ್ಲಿ ಬಹು ಆಳವಾದ ಅರ್ಥವಿದೆ.

## ಪ್ರಸಾದ.

ಗುರುಲಿಂಗ ಜಂಗಮಾತ್ಮಕನಾಗಿ ಚರಿಸುವ ಭಕ್ತನು ತನು ಪ್ರಸಾದ, ಮನ ಪ್ರಸಾದ, ಧನ ಪ್ರಸಾದನಾದನು. ಪ್ರಸಾದ ಕಾಯನಿಗೆ ಪ್ರಸಾದವೇ ಆಹಾರವು. ಶುದ್ಧ ಕಾಯಕದಿಂದ ಬಂದ ಪದಾರ್ಥವನ್ನು ಗುರುಲಿಂಗ ಜಂಗಮಕ್ಕೆ ನಿವೇದಿಸಿ ಉಳುಮೆಯನ್ನು ಕೊಂಬುದು ಪ್ರಸಾದವು. ಪ್ರಸಾದವನ್ನು ಕೈಕೊಳ್ಳುವ ಬಗೆಯು ಹೇಗೆಂದರೆ:—

"ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ, ನಿಮ್ಮಾಣೆ ನಿಮ್ಮ ಪುರಾತರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವ."

"ನಾನು ಆರಂಬವ ಮಾಡುವೆನಯ್ಯ ಗುರುಪೂಜೆಗೆಂದು. ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು. ನಾನಾವ ಕರ್ಮವ ಮಾಡಿದಡೆಯೂ ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದನರಿತಿಪ್ಪೆನಾಗಿ. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ವ್ಯಯ ಮಾಡೆನು. ನಿಮ್ಮ ಸೊಲ್ಲಿಂಗೆ ಸಲ್ಲಿಸುವೆನು ನಿಮ್ಮಾಣೆ ಕೂಡಲಸಂಗಮದೇವ"

"ಮೌನದಲುಂಬುದು ಆಚಾರವಲ್ಲ. ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು. ಕರಣವೃತ್ತಿಗಳಡಗುವುವು, ಕೂಡಲಸಂಗನ ನೆನೆಯುತ್ತ ಉಂಡರೆ."



## ಧರ್ಮವು ಇಹಪರಸಾಧಕವು.

ವೀರಶೈವ ಧರ್ಮವು ಇಹಪರಸಾಧಕವಾಗಿದೆ:— "ಮರ್ತ್ಯಲೋಕವೆಂಬುದು ಕರ್ತನ ಕಮ್ಮಟವಯ್ಯ. ಇಲ್ಲಿ ಸಲ್ಲುವರು ಅಲ್ಲಿ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲಸಂಗಮದೇವ."

## ಕಾಯಕಗಳು.

ವೀರಶೈವ ಸಮಾಜವು ಜಗಳದಿಂದ ಕಡಿಕಡಿಯಾಗಿ ಕಳವಳಗೊಂಬುತ್ತಲಿದೆ. ಆದರೆ ಅಷ್ಟಾವರಣ ಪಂಚಾಚಾರಗಳನ್ನು ಪಾಲಿಸುತ್ತ ಸಮಾಜದಲ್ಲಿರುವ ಜಾತಿವಿಜಾತಿಗಳನ್ನು ತೆಗೆದುಹಾಕಲಿ. ಉದ್ಯೋಗಗಳು ಶಿವನಿಗೋಸ್ಕರ ಕೈಕೊಂಡವುಗಳೆಂದು ಮನಗಂಡು ಉಚ್ಚನೀಚಭಾವವನ್ನು ಅದು ಮಾಡದಿರಲಿ. ಬಸವನು ಹೇಳಿರುವದೇನಂದರೆ:—

"ದೇವಸಹಿತ ಭಕ್ತರು ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ತಲೆದಂಡ ತಲೆದಂಡ. ಕೂಡಲಸಂಗಮದೇವ ಭಕ್ತರಲ್ಲಿ ಕುಲವನರಸಿದರೆ ನಿಮ್ಮಾಣೆ, ನಿಮ್ಮ ರಾಣಿವಾಸದಾಣೆ."

ನಮ್ಮ ಸಮಾಜದ ಔದ್ಯೋಗಿಕ ವೃದ್ಧಿಯನ್ನು ಗುರಿ ಇಟ್ಟವರು ಅವನ ಕೆಳಗಿನ ವಚನವನ್ನು ನೋಡುವುದು:—

"ಭಕ್ತಿ ವಿಶೇಷವ ಮಾಡುವರೆ ಹತ್ತು ಬೆರಳುಂಟು. ಹಾಸಿ ಮುಡಿದರೆ ತನಗುಂಟು. ತನ್ನ ಪ್ರಮಥರಿಗುಂಟು. ಮಾರಿತಂದೆಗಳಂತೆ ಎನಗೇಕಹುದಯ್ಯ? ರತ್ನದ ಸಂಕೋಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ."

ಅವರು ಬಸವನ ಈ ಉಕ್ತಿಯನ್ನು ಎಲ್ಲರಲ್ಲಿ ಬೀರಿ ದುಡಿಮೆಯ ದೊಡ್ಡಸ್ತಿಕೆಯನ್ನು ಹಬ್ಬಿಸಲಿ.

## ಸ್ತ್ರೀ ಸುಧಾರಣೆ.

ಸ್ತ್ರೀ ಸುಧಾರಣೆಯನ್ನು ಬಯಸುವವರು ಬಸವನ ಈ ವಚನವನ್ನು ಪಾಲಿಸಲಿ:—

"ಗಂಡ ಶಿವಲಿಂಗ ಭಕ್ತ. ಹೆಂಡತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧಿ ಇಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವ."

ಎಂಬೀ ವಚನದಲ್ಲಿ ಬಸವನು ಸ್ತ್ರೀಯರಿಗೂ ಕೂಡ ಸಂಸ್ಕೃತಿಯು ಅವಶ್ಯವೆಂದು ಹೇಳಿರುವದನ್ನು ಸಮಾಜಕ್ಕರುಹಲಿ.

—ಕೈ. ವಾ. ಸಿದ್ಧರಾಮಪ್ಪ ದುಂಡಪ್ಪ ಪಾವಟೆ,
ಬಿ. ಎ. ಎಲ್, ಎಲ್. ಬಿ.-ಹುಬ್ಬಳ್ಳಿ

---

## ಬಸವೇಶ್ವರನ ನೈತಿಕ ವಿಚಾರಗಳು.

ಈಗಿನ ಕಾಲದಲ್ಲಿ ಗ್ರಂಥಕಾರರು ಒಂದು ವಿಷಯವನ್ನು ತೆಗೆದುಕೊಂಡು ಅದಕ್ಕೆ ಸಾಧಕ ಬಾಧಕ ಪ್ರಮಾಣಗಳನ್ನು ಕೊಟ್ಟು, ಕೆಲವೊಂದು ವ್ಯವಸ್ಥೆಯಿಂದ ಬರೆಯುವ ಪದ್ಧತಿಯುಂಟು. ಇಂಥ ಗ್ರಂಥಗಳನ್ನು ಓದುವವರು ವಚನ ಗ್ರಂಥಗಳನ್ನು ನೋಡಿದ ಕೂಡಲೆ, ಅವುಗಳಲ್ಲಿ ಒಂದಕ್ಕೊಂದು ಸಂಬಂಧವಿರದಂಥ ನಾನಾತರಹದ ಉಕ್ತಿಗಳ ಮಾಲೆಯನ್ನು ಕಂಡು, ಅವುಗಳ ವಿಷಯವಾಗಿ ತಾತ್ಸಾರ ಭಾವವನ್ನು ತಾಳುವ ಸಂಭವವುಂಟು. ಆದರೆ ಇವುಗಳನ್ನು ಈ ರೀತಿಯಾಗಿ ಪರಿಶೀಲಿಸುವ ಕ್ರಮವಲ್ಲ. ಧರ್ಮೋದ್ಧಾರಕರ ಮೂಲ ಗ್ರಂಥಗಳ ಸ್ಥಿತಿಯು ಹೆಚ್ಚುಕಡಿಮೆ ಪ್ರಮಾಣದಿಂದ ಹೀಗೆಯೇ ಇರುತ್ತದೆ. ಅವು ಸ್ಫುರಣ ಹೊಂದಿದ ಕಾಲದಲ್ಲಿ ಇಲ್ಲವೆ ಕೆಲವೊಂದು ಸಂದರ್ಭದಲ್ಲಿ ರಚಿಸಿದ ನುಡಿಗಳು ಆಗಿರುತ್ತವೆ. ಆದ್ದರಿಂದ ಅವುಗಳಲ್ಲಿ ಅಷ್ಟು ವ್ಯವಸ್ಥೆಯು ತೋರಿಬರುವದಿಲ್ಲ. ಮಹಮ್ಮದ ಪೈಗಂಬರನು ರಚಿಸಿದ ಕುರಾನದೊಳಗಿನ ವಾಕ್ಯಗಳಲ್ಲಿ ದ್ವಿರುಕ್ತಿಗಳು ಅನೇಕವಿರುತ್ತವೆ. ಬಾಯಬಲ್ಲಿನಲ್ಲಿಯ ಏಸೂ ಕ್ರಿಸ್ತನ ವಾಕ್ಯಗಳಾದರೂ ಬಿಡಿಬಿಡಿಯಾಗಿ ಕೆಲವೊಂದು ಪ್ರಸಂಗಗಳಲ್ಲಿ ಹೇಳಿದವುಗಳು ಇರುತ್ತವೆ. ಬೌದ್ಧ ಧರ್ಮದ ಪವಿತ್ರ ಗ್ರಂಥವಾದ ಧಮ್ಮಪದದಲ್ಲಿಯೂ ಕೂಡ ಹೀಗೆಯೇ ಇರುತ್ತದೆ. ಅದರಂತೆಯೇ ಹಿಂದೂ ಧರ್ಮದ ಪವಿತ್ರ



ಗ್ರಂಥಗಳಲ್ಲಿ ಶ್ರೇಷ್ಠವೆನಿಸಿಕೊಂಡ ಉಪನಿಷದ್ಗ್ರಂಥಗಳಲ್ಲಿ ಸಹ ವಿಷಯ ನಿರೂಪಣೆಯಲ್ಲಿ ವ್ಯತ್ಯಾಸಗಳು ಆಗಿಂದಾಗ್ಗೆ ತೋರಿಬರುತ್ತವೆ. ಇವಾವೂ ಕ್ರಮವಾಗಿ ಬರೆದ ಗ್ರಂಥಗಳಂತೆ ಇರುವದಿಲ್ಲ. ಆದರೂ ಇವುಗಳ ಬೆಲೆಯು ಎಳ್ಳಷ್ಟಾದರೂ ಕಡಿಮೆಯಾಗಿಲ್ಲ. ಅವುಗಳ ಮಹತ್ವವು ಅಚ್ಚಳಿಯದೆ ಈ ವರೆಗೂ ಹಾಗೆಯೇ ಉಳಿದಿದೆ. ಯಾಕಂದರೆ ಈ ಗ್ರಂಥಗಳೆಲ್ಲ ಪ್ರಾಸಾದಿಕವಾಗಿವೆ. ಅಂತಃಕರಣದಲ್ಲಿ ಮೂಡಿದ ವಿಚಾರಗಳನ್ನು ತೇಜಃಪುಂಜವಾದ ರೀತಿಯಿಂದ ಹೇಳಿದವುಗಳು ಇವಾಗಿವೆ. ಪೂರ್ವದ ಶಿವಶರಣರ ವಚನಗಳಾದರೂ ಹೀಗೆಯೇ ಇವೆ. ಅವು ಪ್ರತಿಭಾಮಯವಾಗಿವೆ. ಅವು ಅಂತಃಕರಣದಿಂದ ಹೊರಸೂಸಿದ ವಾಕ್ಯಗಳಿವೆ. ಆದ್ದರಿಂದ ಹೇಗೆ ಕುರಾನ, ಬಾಯಬಲ್, ಉಪನಿಷದ್ಗ್ರಂಥಗಳು ಆಯಾ ಜನಾಂಗಗಳಲ್ಲಿ ಮಹದ್ಗ್ರಂಥಗಳಾಗಿರುವವೋ., ಹಾಗೆಯೇ ಶಿವಶರಣರ ವಚನಗಳಾದರೂ ಕನ್ನಡದಲ್ಲಿ ಮಹತ್ವದ ಕೃತಿಗಳು ಇರುತ್ತವೆ.

ಶಿವಶರಣರು ಸಂಸಾರವನ್ನು ತೊರೆಯದೆ, ಜಗತ್ತಿನಲ್ಲಿದ್ದುಕೊಂಡು ಆಯುಷ್ಯ ಕ್ರಮವನ್ನು ಹೇಗೆ ಜರಗಿಸಬೇಕೆಂಬವನ್ನು ಹೆಚ್ಚಾಗಿ ವಿವೇಚಿಸಿದ್ದಾರೆ. ಇದು ಬಹು ಮಹತ್ವವಾದದ್ದು. ಅವರು ಸಮಾಜವನ್ನು ಬಿಡಲಿಲ್ಲ. ಕಂದಮೂಲಗಳನ್ನು ಭಕ್ಷಿಸುತ್ತ ಅರಣ್ಯವಾಸಿಗಳಾಗಲಿಲ್ಲ. ಆದ್ದರಿಂದ ಅವರ ವಚನಗಳಲ್ಲಿ ನೈತಿಕ ವಿಷಯಗಳು ಬಹಳ ಹೆಚ್ಚು ಇರುತ್ತವೆ. ನೀತಿಯು ಸಮಾಜಕ್ಕೆ ಸಂಬಂಧಿಸಿದ್ದದೆ. ಆದ್ದರಿಂದ ಸಮಾಜವನ್ನು ಬಿಟ್ಟವರಿಗೆ ನೀತಿಯ ಉಪಯೋಗವು ಇರಲಾರದು. ಇದಕ್ಕನುಸಾರವಾಗಿ ಬಸವೇಶ್ವರನ ವಚನಗಳಲ್ಲಿ ನೀತಿಯ ವಿಷಯಗಳು ತುಂಬಿಕೊಂಡಿವೆ. ಅನೇಕರು ಬಸವೇಶ್ವರನು ದುರ್ನಡತೆಯವನು, ಅವನು ಅನೇಕ ದುರ್ಗುಣಗಳನ್ನು ತನ್ನಲ್ಲಿ ಸಲಹಿದ್ದನು, ವೀರಶೈವ ಧರ್ಮವನ್ನು ಅಸಾಧು ಮಾರ್ಗದಿಂದ ಪ್ರಸಾರಗೊಳಿಸಿದನು, ಎಂದು ಅವನ ಮೇಲೆ ನಾನಾತರಹದ ದೋಷ ವಿಡುತ್ತಾರೆ. ಆದರೆ ಜಗತ್ತಿನಲ್ಲಿ ಅನೀತಿಯಿಂದ ಯಾವ ಧರ್ಮವೂ ಬೆಳೆದಿಲ್ಲ. ಸಾತ್ವಿಕ ಗುಣಪರಿಪೂರ್ಣವಾದ ನಮ್ಮ ಹಿಂದುಸ್ಥಾನದ ದೇಶದಲ್ಲಿಯಂತೂ ಅನಾಚಾರದಿಂದ ಯಾವ ಧರ್ಮವೂ ಹಿಂದೆ ಎಂದೂ ಬೆಳೆದಿಲ್ಲ, ಮುಂದಾದರೂ ಬೆಳೆಯಲಾರದು. ಅನಾಚಾರ ಮತ್ತು ದುಷ್ಟತೆಯಿಂದ ದುಷ್ಟ ಜನರು ಮಾತ್ರ ಪರಸ್ಪರ ಕೆಲಕಾಲ ಕೂಡಬಹುದು.

ಆದರೆ ಇವರು ಸಮಾಜವನ್ನು ರಚಿಸಲಾರರು. ಬಸವೇಶ್ವರನು ನಿಜವಾಗಿ ಒಂದು ಬಲಿಷ್ಠ ಸಮಾಜವನ್ನು ನಿರ್ಮಿಸಿದ್ದಾನೆ. ಇದು ಸದ್ವರ್ತನೆಯ ತಳಹದಿಯ ಮೇಲೆ ಊರದ ಹೊರ್ತು, ಎಂದಿಗೂ ಸಾಧ್ಯವಾಗಲಾರದು. ಬಸವೇಶ್ವರನು ತನ್ನ ವಚನಗಳಲ್ಲಿ ಸದ್ಗತಿಯನ್ನು ಹೊಂದಬೇಕಾದರೆ, ಇಹ ಲೋಕದಲ್ಲಿ ಸದ್ವರ್ತನೆಯಿಂದ ನಡೆಯುವದರಿಂದಲೇ ಇದು ಸಾಧ್ಯವೆಂದು ಮೇಲಿಂದಮೇಲೆ ಹೇಳುತ್ತಾನೆ. ಒಂದು ವಚನದಲ್ಲಿ ಆತನು ಇಹಲೋಕವನ್ನು ಒಂದು ಟಂಕಸಾಲೆಗೆ ಹೋಲಿಸಿ ಇಂಥ ಟಂಕಸಾಲೆಯಲ್ಲಿ ಯಾರು ಚೊಕ್ಕ ನಾಣ್ಯವಾಗಿ ಹೊರಬೀಳುತ್ತಾರೋ ಅವರೇ ಮುಂದಿನ ಲೋಕಕ್ಕೆ ಒಪ್ಪುವರೆಂದು ಹೇಳಿದ್ದಾನೆ.

“ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲಸಂಗಮದೇವಾ.”

ಸ್ವರ್ಗಲೋಕವೆಂಬುದು ಬೇರೊಂದು ಸ್ಥಾನದಲ್ಲಿಲ್ಲ, ಎಲ್ಲ ತರದ ಲೋಕಗಳು ಈ ಜಗತ್ತಿನಲ್ಲಿಯೇ ಇವೆ, ಎಂದು ಬಸವೇಶ್ವರನು ಭಾವಿಸುತ್ತಿದ್ದನೆಂಬುದು ಕೆಳಗಿನ ವಚನದಿಂದ ತಿಳಿಯುತ್ತಿದೆ. ಯಾವನು ಸದಾಚಾರಿಯೋ ಅವನೇ ದೇವಲೋಕದವನು, ಯಾವನು ಅನಾಚಾರಿಯೋ ಅವನೇ ನರಕದೊಳಗೆ ಇರುವವನು ಎಂದು ಅವನು ಇಲ್ಲಿ ನುಡಿದಿದ್ದಾನೆ.

“ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೇ? ಈ ಲೋಕದೊಳಗೆ ಮತ್ತನಂತಲೋಕ. ಶಿವಲೋಕ ಶಿವಾಚಾರವಯ್ಯಾ. ಶಿವಭಕ್ತನಿದ್ದ ಠಾವೇ ದೇವಲೋಕ, ಶಿವಭಕ್ತನಂಗಣವೇ ವಾರಣಾಸಿ, ಕಾಯವೇ ಕೈಲಾಸ. ಇದು ಸತ್ಯ, ಕೂಡಲಸಂಗಮದೇವಾ,”

“ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ. ಅಸತ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣು ಕೂಡಲಸಂಗಮದೇವ.”

ಇದರ ಮೇಲಿಂದ ಬಸವೇಶ್ವರನು ಸದಾಚರಣೆಗೆ ಎಷ್ಟು ಮಹತ್ವ ಕೊಡುತ್ತಿದ್ದನೆಂಬುದು ಸ್ಪಷ್ಟವದೆ. ಅವನು ತನ್ನ ವಚನಗಳಲ್ಲಿ ತನ್ನನ್ನು



ಯಾವ ತರದ ಕುಮಾರ್ಗಕ್ಕೆ ಹಚ್ಚಬೇಡವೆಂದು ದೇವರನ್ನು ಆಗಿಂದಾಗ್ಗೆ ಬೇಡಿಕೊಳ್ಳಲಿಕ್ಕೆ ಬೇಸರಿಯುವದಿಲ್ಲ. ಪರಮಾತ್ಮನನ್ನು ಹೊಂದದೆ ಇರಬೇಕಾದರೆ, ಮನುಷ್ಯನಲ್ಲಿಯ ದುಷ್ಟವಾಸನೆಗಳೇ ಇದಕ್ಕೆ ಕಾರಣವೆಂದು ಅವನ ದೃಢವಾದ ಅಭಿಪ್ರಾಯವಿದೆ.

“ಆಶೆಯಾಮಿಷ ತಾಮಸ ಹುಸಿ ವಿಷಯ ಕುಟಿಲ ಕುಹಕ ಕ್ರೋಧ ಕ್ಷುದ್ರ ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ. ಇವೆಂತೆಂದೊಡೆ, ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ ಇವೆಲ್ಲವ ಕಳೆದು ಎನ್ನ ನಿಮ್ಮಯ ಭಕ್ತನ ಮಾಡಾ ಕೂಡಲ ಸಂಗಮದೇವಾ.”

“ಕಾಯವಿಕಾರ ಕಾಡಿಹವಯ್ಯಾ. ಮನದ ವಿಕಾರ ಕೂಡಿಹವಯ್ಯಾ. ಇಂದ್ರಿಯ ವಿಕಾರ ಸುಳಿಹವಯ್ಯಾ. ಸುಳಿವಿನೊಳಗೆ ಸುಳಿವುತಲಿದ್ದೇನೆ. ಸಿಲುಕಿಸದಿರಯ್ಯಾ. ಅನ್ಯ ಚಿತ್ತವನಿರಿಸದಿರಯ್ಯಾ. ನಿಮ್ಮ ಚಿತ್ತದಿರಿಸಯ್ಯಾ. ಅನುಪಮ ಸುಖಸಾರಾಯ ಶರಣರಲ್ಲಿ ಕೂಡಿಸು ಕೂಡಲಸಂಗಮದೇವಯ್ಯಾ. ಇದನೇ ಬೇಡುವೆನಯ್ಯಾ.”

ಈ ತೆರದ ಬಸವೇಶ್ವರನ ಅಸಂಖ್ಯ ಉಕ್ತಿಗಳನ್ನು ನಾವು ಉದಹರಿಸಬಹುದು.

ಒಬ್ಬ ಮನುಷ್ಯನು ಲಿಂಗಧಾರಣಕ್ಕೆ ಯೋಗ್ಯನಾಗಬೇಕಾದರೆ, ಅವನ ನಡೆನುಡಿಗಳು ಶುದ್ಧವಾಗಿಯೇ ಇರಬೇಕೆಂಬುದು ಬಸವೇಶ್ವರನ ದೃಢವಾದ ಅಭಿಪ್ರಾಯವಿದೆ. ಈ ವಿಷಯದಲ್ಲಿ ಅವನು ಎಷ್ಟು ಸ್ಪಷ್ಟ ಮತವುಳ್ಳವನಾಗಿದ್ದನೆಂಬುದು ಈ ಕೆಳಗಿನ ವಚನಗಳಿಂದ ವ್ಯಕ್ತವಾಗುತ್ತದೆ.

“ಕುಂಬಳದ ಕಾಯಿಗೆ ಕಬ್ಬುನದ ಕಟ್ಟುಕೊಟ್ಟರೆ, ಕೊಳೆವುದಲ್ಲದೆ, ಬಲುಹಾಗಬಲ್ಲುದೇ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯಾ, ಮಾನಹೀನನ ಮೀಸಲ ಕಾಯ್ದಿರಿಸಿದಂತೆ.”

“ಸಗಣೆಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜನೆಯಹುದಲ್ಲದೆ. ಅದರ ಗಂಜಳ ಬಿಡದಣ್ಣ. ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ, ನಿಚ್ಚ ನಿಚ್ಚ ಕೆಸರಹುದಲ್ಲದೆ, ಅದರಚ್ಚುಗ ಬಿಡದಣ್ಣ.

ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ, ಕೆಟ್ಟವನೇಕೆ ಸದ್ಭಕ್ತನ ಹನು ಕೂಡಲಸಂಗಮದೇವಾ ? "

"ಕಬ್ಬುನದ ಕೋಡಗ ಪರುಷ ಮುಟ್ಟಲು ಹೊನ್ನಾದರೇನು, ಮತ್ತೇನಾದರೇನು, ತನ್ನ ಮುನ್ನಿನ ರೂಪ ಬಿಡದನ್ನಕ್ಕರ? ಕೂಡಲಸಂಗಮದೇವಯ್ಯ ನಿಮ್ಮ ನಂಬಿಯೂ, ನಂಬದ ಡಂಭಕರಿಗಯ್ಯ. "

ಯಾವ ಮಹಾತ್ಮನು ಇಂಥ ವಿಚಾರಗಳಿಗೆ ಇಂಬುಗೊಡುತ್ತಿದ್ದನೋ, ಅವನು ದುರಾಚಾರಿಗಳನ್ನು ಆದರಿಸುತ್ತಿದ್ದನೆಂಬುದನ್ನು ಊಹಿಸಲಿಕ್ಕೆ ಅಸಾಧ್ಯವಾಗಿದೆ.

ದೀಕ್ಷೆಯನ್ನು ಹೊಂದಿದ ಬಳಿಕ ಸಹ ಲಿಂಗಧಾರಿಯು ಸದಾಚಾರದ ಕಟ್ಟುಗಳಿಗೆ ತಪ್ಪದೆ ಒಳಪಟ್ಟು ನಡೆಯಬೇಕೆಂದು ಬಸವೇಶ್ವರನು ಸದಾ ಬೋಧಿಸುತ್ತಾನೆ. ಲಿಂಗಧಾರಣವು ಸದಾಚಾರದ ಗುರುತು. ಸದಾಚಾರವಿಲ್ಲದೆ ಹೋದರೆ, ಲಿಂಗಿಯಲ್ಲ. ಹೀಗೆ ನಡೆಯುವವರಿಗೆ ಪ್ರಾಯಶ್ಚಿತ್ತವು ಸಹ ಇಲ್ಲವೆಂದು ಅವನ ಅಭಿಪ್ರಾಯವಿದೆ. ಅವನು ಅನ್ನುವದೇನೆಂದರೆ:—

"ಸದಾಚಾರ ಸದ್ಭಕ್ತಿ ಇಲ್ಲದವರ ನೀನೊಲ್ಲೆಯಯ್ಯ. ಅವರ ಆರಾಧನೆ ದಂಡ. ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲನಯ್ಯ, ಕೂಡಲಸಂಗಮದೇವ ಭೂಮಿಭಾರಕರ. "

"ಕೋಪಿ ಮಜ್ಜನಕ್ಕೆರೆದರೆ, ರಕ್ತದ ಧಾರೆ. ಪಾಪಿ ಹೂವನೇರಿಸಿದರೆ, ಮಸೆದಾಯುಧದ ಗಾಯ. ಕೂಪರನಾರನೂ ಕಾಣೆ, ಡೋಹರ ಕಕ್ಕಯ್ಯನಲ್ಲದೆ. ವ್ಯಾಪ್ತಿಯುಳ್ಳವ ನಮ್ಮ ಮಡಿವಾಳಮಾಚಯ್ಯ. ನಿಮ್ಮ ಪತ್ತಿಗರಿವರಯ್ಯ ಕೂಡಲಸಂಗಮದೇವಾ. "

ವೀರಶೈವನು ಮೋಕ್ಷವನ್ನು ಹೊಂದಲಿಕ್ಕೆ ಷಟ್ಸ್ಥಲ ಮಾರ್ಗವು ಅವನಿಗೆ ಏರ್ಪಡಿಸಲ್ಪಟ್ಟಿರುವದು. ಈ ಮಾರ್ಗಕ್ಕೆ ಭಕ್ತಸ್ಥಲವೇ ಮೊದಲನೆಯ ಮೆಟ್ಟಿಲಾಗಿದೆ. ಈ ಭಕ್ತಸ್ಥಲಕ್ಕೆ ಸದಾಚಾರವೂ ಭಕ್ತಿಯೂ ತಳಹದಿಯಾಗಿರುತ್ತವೆ. ಈ ಗುಣಗಳಿಲ್ಲದೆ ಹೋದರೆ, ಮುಂದಿನ ಶ್ರೇಷ್ಠಸ್ಥಿತಿಗಳು ವೀರಶೈವನಿಗೆ ಎಂದಿಗೂ ದೊರಕಲಾರವು. ಆದ್ದರಿಂದ ಎಲ್ಲ ವಚನ



ಗ್ರಂಥಗಳಲ್ಲಿ ಸದಾಚಾರ ಮತ್ತು ನೀತಿಗೆ ಬಹಳ ಮಹತ್ವದ ಸ್ಥಾನವು ಕೊಡಲ್ಪಟ್ಟಿದೆ.

ದುರ್ಮಾರ್ಗಕ್ಕೆ ವಿಷಯ ಲಂಪಟತನವೇ ಕಾರಣವು. ಆದ್ದರಿಂದ ವಚನಕಾರರು ತಮ್ಮ ವಚನಗಳಲ್ಲಿ ಸಂಸಾರ ಹೇಯಸ್ಥಲವನ್ನು ಮೊದಲು ವರ್ಣಿಸಿರುತ್ತಾರೆ. ಮನುಷ್ಯನಿಗೆ ನಿಜವಾದ ಸುಖವು ವಿಷಯ ಲಂಪಟತನದಲ್ಲಿ ಎಂದಿಗೂ ದೊರಕಲಾರದು. ವಿಷಯ ಸುಖಗಳು ಅಲ್ಪ ಸುಖವನ್ನು ಕೊಡುವಂತಹವು, ನಶ್ವರವಾದವುಗಳು. ಆದರೆ ಸದ್ಭಕ್ತಿ ಸದಾಚಾರ ವಿವೇಕಗಳೇ ಮನುಷ್ಯನಿಗೆ ಸದಾ ಸುಖವನ್ನು ಕೊಡುವಂತಹವಿರುತ್ತವೆ. ಆದ್ದರಿಂದ ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುವದೇನೆಂದರೆ: —

"ವಿಷಯವೆಂಬ ಹಸರನೆನ್ನ ಮುಂದೆ ತಂದು ಪಸರಿಸದಿರಯ್ಯ. ಪಶುವೇನು ಬಲ್ಲದು, ಹಸುರೆಂದೆಳಸುವದಲ್ಲದೆ? ವಿಷಯ ರಹಿತನ ಮಾಡಿ, ಭಕ್ತಿರಸನ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ ಕೂಡಲಸಂಗಮದೇವಾ. "

ಮನುಷ್ಯನ ಅಂತರಂಗ ಬಹಿರಂಗಶುದ್ಧಿ ಎಂದರೆ ಸದಾಚಾರದಿಂದ ವರ್ತಿಸುವದೇ ಇರುತ್ತದೆ. ಬಸವೇಶ್ವರನು ಈ ವಿಷಯವಾಗಿ ಅನ್ನುವದೇನೆಂದರೆ:—

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯವ ನುಡಿಯಲುಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ. ಇದೇ ಅಂತರಂಗದ ಶುದ್ಧಿ; ಇದೇ ಬಹಿರಂಗದ ಶುದ್ಧಿ. ಇದೇ ನಮ್ಮ ಕೂಡಲಸಂಗಮನನೊಲಿಸುವ ಪರಿ. "

"ಅರ್ಥವಡಗದು, ಕ್ರೋಧ ತೊಲಗದು. ಕ್ರೂರ ಕುಹಕ ಕುಭಾಷೆ ಬಿಡದನ್ನಕ್ಕರ, ನೀನೆತ್ತ ಶಿವನೆತ್ತ, ಹೋಗತ್ತ ಮರುಳೇ. ಭವರೋಗವೆಂಬ ತಿಮಿರ ತಿಳಿಯದನ್ನಕ್ಕರ ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೇ?"

"ಕೆಡೆನಡೆಯದೆ, ಕೆಡೆನುಡಿಯದೆ ಅನ್ಯವನು ಪ್ರತಿಪಾದಿಸದಿದ್ದರೆ ಏನು ಕೊಡನಯ್ಯ ಲಿಂಗವು? ತಾನೇನು ಬೇಡಿದ್ದನೀವನಾಗಿ, ನಂಬಿಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ ಕೂಡಲಸಂಗಮದೇವಾ. "

ಒಬ್ಬ ಮನುಷ್ಯನು ಜ್ಞಾನಿಯಾಗಿದ್ದರೂ ಕೂಡ ಅವನು ಸದಾಚಾರಿಯಾಗಿರದಿದ್ದರೆ ಅವನು ತ್ಯಾಜ್ಯನೆಂದು ಬಸವೇಶ್ವರನು ತಿಳಿಯುತ್ತಾನೆ. ಅವನು ಜಂಗಮಸ್ಥಲವನ್ನು ಹೊಂದಿದವನಾದರೂ ಕೂಡ ನಿಂದ್ಯಸ್ಪದನು.

"ಆಪ್ಯಾಯನಕ್ಕೆ ಅನ್ನವ ನೀಡುವೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ನೀ ಸಾಕ್ಷಿಯಾಗಿ, 'ಛೀ' ಎಂಬೆನು ಕೂಡಲಸಂಗಮದೇವಾ."

"ವೇದಶಾಸ್ತ್ರವ ಬಲ್ಲವರ ಹಿರಿಯರೆಂಬೆನೆ? ಮಾಯಾಭ್ರಾಂತು. ಕವಿತೆ ಗೀತಜ್ಞರ ಹಿರಿಯರೆಂಬೆನೆ? ಇವರು ಹಿರಿಯರುಗಳೇ, ಯಾಗನಟ್ಟುವಿಗೆ ಪ್ರಾಣರು? ಇವರಿಂದಧಿಕವ ಸಾಧಿಸುವರೇನು ಕಿರಿಯರೇ? ಇಂತು ವಿಷ್ಯೈಗುಣ ಜ್ಞಾನ ಧರ್ಮ ವಿಚಾರ ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸುವುದು."

ಈ ವಚನಗಳ ಮೇಲಿಂದ ಬಸವೇಶ್ವರನು ಶುದ್ಧನಡತೆಗೆ ಎಷ್ಟು ಮಹತ್ವ ಕೊಟ್ಟಿರುವನೆಂಬುದು ಸ್ಪಷ್ಟವಾಗುತ್ತದೆ.

ಮನುಷ್ಯನಿಗೆ ತನ್ನ ಧ್ಯೇಯದಲ್ಲಿ ಅನೇಕ ತೊಂದರೆಗಳು ಬರುವದುಂಟು. ಇದು ವ್ಯವಹಾರದಲ್ಲಿ ಯಾವಾಗಲೂ ಸಂಭವಿಸುತ್ತದೆ. ಇಂಥ ಕಾಲದಲ್ಲಿಯೂ ಸಹ ಮನುಷ್ಯನು ತನ್ನ ಸದ್ಗುಣಗಳನ್ನು ಬಿಡಕೂಡದು. ಇಂಥ ಕಷ್ಟಗಳು ಮನುಷ್ಯನ ಪರೀಕ್ಷೆಗಾಗಿ ಮೇಲಿಂದ ಮೇಲೆ ಬರುತ್ತವೆ. ಈ ಕಾಲಕ್ಕೆ ಆತನು ತನ್ನ ನಿಷ್ಠೆಯನ್ನು ಎಂದೂ ಬಿಡಕೂಡದು. ಈ ಬಗ್ಗೆ ಬಸವೇಶ್ವರನು ಅನ್ನುವದೇನಂದರೆ:—

"ಭಕ್ತನಾಗಿ ತನ್ನ ಹಿಡಿದೆನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ. ಕೂಡಲಸಂಗಮದೇವರ ನೆರೆ ನಂಬಿದೆನಾದರೆ ತನ್ನಂತೆ ಮಾಡುವ."

"ಅರೆವನಯ್ಯ ಸಣ್ಣವಾಹನ್ನಕ್ಕ. ಒರೆವನಯ್ಯ ಬಣ್ಣಗಾಂಬನ್ನಕ್ಕ. ಅರೆದರೆ ಸಣ್ಣಗಾಗಿ, ಒರೆದರೆ ಬಣ್ಣಬಂದರೆ ಕೂಡಲಸಂಗಮದೇವರೊಲಿದು ಸಲಹುವ."

ಈತರದ ತೊಂದರೆಗಳು ಬಂದ ಕಾಲದಲ್ಲಿ ಮನುಷ್ಯನು ಅತ್ಯಂತ ಸ್ಥಿರ ಮನಸ್ಸಿನವನು ಇರಬೇಕು. ಸ್ಥಿರ ಮನಸ್ಸಿನ ಮುಂದೆ ಶ್ರೀಮಂತಿಕೆಯ ತೇಜಸು



ಎಂದಿಗೂ ನಿಲ್ಲಲಾರದು. ಸ್ಥಿರಮನಸ್ಸು ಬಡತನದಲ್ಲಿದ್ದರೂ ಅದು ಘನತರವಾದದ್ದು. ಒಂದುಕಡೆ ಬಸವೇಶ್ವರನು ಅನ್ನುವದೇನೆಂದರೆ:—

"ನೋಡಾ, ಬಡವರ ಮನೆ! ಮನ ನೋಡಾ ಘನ. ಸೋಂಕಿನಲ್ಲಿ ಶುಚಿ. ಸರ್ವಾಂಗ ಕಲಿ. ಪಸಾರಕ್ಕನುಕೂಲವಿಲ್ಲ. ಬಂದ ತತ್ಕಾಲಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರರು, ಧೀರರು."

ಈತೆರದ ಮನಸ್ಸಿನವರಿಗೆ ಕೊರತೆ ಎಂಬುದಿರಲಾರದು. ಆದ್ದರಿಂದ ಬಸವೇಶ್ವರನು ತನಗೆ ಶ್ರೀಮಂತಿಕೆಯು ಬೇಡ, ಬಡತನವನ್ನೇ ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತಾನೆ. ಬಡತನವು ಕೆಲಸಕ್ಕೆ ಹಚ್ಚುವದು. ಕೆಲಸದಿಂದ ಬಡವನು ಸ್ವತಂತ್ರವೃತ್ತಿಯುಳ್ಳವನಾಗುವನು. ಆದರೆ ಶ್ರೀಮಂತಿಕೆಯು ಬಂಧನೆಗಳನ್ನುಂಟುಮಾಡುವದು. ದುಡಿಕೆಯುಳ್ಳಾತನು ತನ್ನನ್ನು ಸಲಹಿಕೊಳ್ಳುವನಷ್ಟೇ ಅಲ್ಲ, ಇತರರನ್ನೂ ಸಲಹುವನು. ಆದ್ದರಿಂದ ಈತನು ಸ್ವತಂತ್ರನು, ಧೀರನು ಎಂದು ಬಸವೇಶ್ವರನು ಹೇಳಿದ್ದಾನೆ. ಅವನು ಒಂದೆಡೆಯಲ್ಲಿ ಅಂದಿರುವದೇನಂದರೆ:—

"ಭಕ್ತಿ ವಿಶೇಷವ ಮಾಡುವರೆ, ಹತ್ತು ಬೆರಳುಂಟು. ಹಾಸಿ ದುಡಿದರೆ. ತನಗುಂಟು, ತನ್ನ ಪ್ರಮಥರಿಗುಂಟು. ಮಾರಿತಂದೆಗಳಂತೆ, ಎನಗೇಕಹುದಯ್ಯ! ರತ್ನದ ಸಂಕೋಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ ಶಿವಧೋ ಶಿವಧೋ!"

ಈಮೇರೆಗೆ ಬಸವೇಶ್ವರನು ತನ್ನನ್ನು ರತ್ನದ ಸಂಕೋಲೆಯಲ್ಲಿ ಅಂದರೆ ಶ್ರೀಮಂತಿಕೆಯಲ್ಲಿ ಇಟ್ಟದ್ದಕ್ಕೆ ದುಃಖಿಸುತ್ತಾನೆ.

ಸತ್ಯ ಮಾರ್ಗದಲ್ಲಿ ನಡೆಯುವವರನ್ನು ಜನರು ವಿರೋಧಿಸುವದುಂಟು. ಆದರೆ ಅವರು ತಮ್ಮ ಸತ್ಕರ್ಮಗಳನ್ನು ಎಂದಿಗೂ ಬಿಡಕೂಡದು. ಜನರ ಹಿಂಸೆಗಳಿಗೆ ಸಹ ಅವರು ಎಂದೂ ಪರಿವೆ ಇಡಕೂಡದೆಂದು ಬಸವೇಶ್ವರನು ಹೇಳುತ್ತಾನೆ.

"ಆರು ಮುನಿದು, ನಮ್ಮನೇನ ಮಾಡುವರು? ಊರು ಮುನಿದು ನಮ್ಮನೆಂತ ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚ ಬಲ್ಲುದೇ? ನಮ್ಮ ಕೂಡಲಸಂಗಮದೇವರುಳ್ಳನ್ನಕ್ಕರ ನಮಗೇನಯ್ಯ!"

" ನ್ಯಾಯ ನಿಷ್ಠುರ, ದಯಾ ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ. ಶರಣನಾರಿಗೆಯೂ ಅಂಜುವವನಲ್ಲ, ಕೂಡಲಸಂಗಮದೇವರ ರಾಜತೇಜದೊಳಗಿಪ್ಪೆನಾಗಿ. "

ಯಾವನು ಸದಾಚಾರಿಯಾಗಿರುತ್ತಾನೋ ಅವನ ಸರಳ ವರ್ತನೆಗಳು ಕೆಡುಕರಿಗೆ ವಿರೋಧವಾಗಿ ತೋರುತ್ತವೆ. ಆದ್ದರಿಂದ ಅವರು ಅವನನ್ನು ಪೀಡಿಸಹತ್ತುವರು. ಆದರೆ ಅವರ ಪೀಡೆಗಳಿಗೆ ಅಂಜಿ ಯಾವನು ತನ್ನ ಸದ್ವರ್ತನೆಯನ್ನು ಬಿಡುತ್ತಾನೋ, ಅವನಿಂದ ಸಮಾಜ ಸುಧಾರಣೆಯ ಕಾರ್ಯಗಳು ಎಂದಿಗೂ ಆಗಲಾರವು. ಇಂಥ ಪೀಡೆಗಳಿಗೆ ಮಹಮ್ಮದ, ಕ್ರೈಸ್ತ, ಲೂಥರ ಮೊದಲಾದ ಸಮಾಜ ಸುಧಾರಕರೆಲ್ಲರೂ ಒಳಗಾದರು. ಅವರಂತೆಯೇ ಅನೇಕ ಕಠಿಣ ಪ್ರಸಂಗಗಳು ಬಸವೇಶ್ವರನಿಗೂ ಬಂದವು. ಅವನು ಚಿಕ್ಕಂದಿನಲ್ಲಿಯೇ ತನ್ನ ಮಾತಾ ಪಿತೃಗಳ ಮನೆಯನ್ನು ತೊರೆಯಬೇಕಾಯಿತು. ಆದರೆ ಅವನು ಸ್ಥಿರಮನಸ್ಸಿನವನು. ಆದ್ದರಿಂದ ಅವನಿಂದ ಮಹತ್ಕಾರ್ಯಗಳು ಜರಗಿದವು. ಅವನು ಧ್ಯೇಯವನ್ನು ಅನುಸರಿಸುವಲ್ಲಿ ತನ್ನ ಪ್ರಾಣವನ್ನಾದರೂ ಬಿಡಬಹುದೆಂದು ಹೇಳಿದ್ದಾನೆ.

" ಎನಿಸೆನಿಸೆಂದಡೆಯೂ ನಾ ಧೃತಿಗೆಡೆನಯ್ಯಾ. ಎಲುದೋರಿದೊಡೆಯೂ ನರ ಹರಿದಡೆಯೂ ಕರುಳು ಕುಪ್ಪಳಿಸಿದಡೆಯೂ ನಾ ಧೃತಿಗೆಡೆನಯ್ಯಾ. ಶಿರಹರಿದು, ಅಟ್ಟೆ ನೆಲಕ್ಕೆ ಬಿದ್ದಡೆಯೂ ನಾಲಿಗೆ 'ಸಂಗ ಶರಣು' ಎನುತಿಪ್ಪುದಯ್ಯಾ"

''ನಾಳೆ ಬಪ್ಪುದು ನಮಗಿಂದೇ ಬರಲಿ. ಇದಕಾರಂಜುವರು, ಇದ ಕಾರಳಕುವರು ? '' ಜಾತಸ್ಯ ಮರಣಂ ಧ್ರುವಂ " ಎಂದುದಾಗಿ ನಮ್ಮ ಕೂಡಲಸಂಗಮದೇವನು ಬರೆದ ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳವಲ್ಲ.

"ಜೊಳ್ಳುವಾಳಿಯವ ನಾನಲ್ಲಯ್ಯಾ. ನಿಮ್ಮ ವೇಳೆಯಾಳಯ್ಯಾ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ. ಕೇಳು ಕೂಡಲಸಂಗಮದೇವ, ಮರಣವೇ ಮಹಾನವಮಿ ಎನಗೆ"

ಈ ರೀತಿಯಾಗಿ ದೃಢ ನಿಶ್ಚಯದಿಂದ ಬಸವೇಶ್ವರನು ವರ್ತಿಸಿದ್ದರಿಂದ ಅವನಿಂದ ಧರ್ಮಪ್ರಸಾರದ ಮಹತ್ವದ ಕಾರ್ಯಗಳಾದವು. ಆದರೆ



ಯಾವನ ನಡೆನುಡಿಗಳು ಶುದ್ಧವಾಗಿ ಇರುತ್ತವೆಯೋ ಅವನಿಗೆ ಮಾತ್ರ ಇಂಥ ಮಹತ್ತರವಾದ ಆತ್ಮವಿಶ್ವಾಸವು ಉಂಟಾಗುತ್ತದೆ. ಇಂಥವನಲ್ಲಿ ಮಾತ್ರ ಜಗತ್ತನ್ನೇ ಎಳೆದುಕೊಳ್ಳುವಂಥ ಸಾಮರ್ಥ್ಯವು ಉತ್ಪನ್ನವಾಗುತ್ತದೆ.

ಬಸವೇಶ್ವರನಲ್ಲಿಯ ಮಹತ್ತರವಾದ ಧಾರ್ಮಿಕ ಬುದ್ಧಿ, ನೈತಿಕ ವೃತ್ತಿ, ಇವುಗಳನ್ನು ನೋಡಿ ಆ ಕಾಲಕ್ಕಿನ ಜನರು ಅವನು ಕೇವಲ ನಂದೀಸ್ವರೂಪನೆಂದು ಭಾವಿಸಿದಂತೆ ತೋರುತ್ತದೆ. ನಂದಿಯು ಕೇವಲ ಧಾರ್ಮಿಕ ಮತ್ತು ಸದಾಚಾರಸ್ವರೂಪನಾಗಿರುತ್ತಾನೆ. ಬಸವೇಶ್ವರನು ಅತ್ಯಂತ ನೀತಿಯುಳ್ಳವನೆಂತಲೇ ಅವನಿಗೆ ನಂದೀ ಅವತಾರವೆಂದು ಜನರು ತಿಳಿದಿದ್ದಾರೆ. ಜನರು ಹೀಗೆ ತನ್ನನ್ನು ಭಾವಿಸಿದರೂ ಬಸವೇಶ್ವರನು ಅದಕ್ಕೆ ಉಬ್ಬಿ ವರ್ತಿಸಲಿಲ್ಲ. ಆತನು ತಾನೊಬ್ಬ ಕೇವಲ ದೀನನಾದ ಭಕ್ತನೆಂತಲೇ ತಿಳಿದುಕೊಳ್ಳುತ್ತಿದ್ದನು. ಅವನು ಅನ್ನುವದೇನೆಂದರೆ:--

" ಮೇಲಾಗಲೊಲ್ಲೆನು ಕೀಳಾಗಬಲ್ಲದೆ. ಕೀಳಿಂಗಲ್ಲದೆ ಹಯನ ಕರೆವುದೇ ? ಮೇಲಾಗಿ ನರಕದೊಳಗೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವಾ. "

"ಎನಗಿಂತ ಕಿರಿಯರಾರಿಲ್ಲ, ಶಿವಭಕ್ತರಿಗಿಂತ ಹಿರಿಯರಾರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನಸ್ಸಾಕ್ಷಿ. ಕೂಡಲಸಂಗಮದೇವಾ ಎನಗಿದೇ ದಿಬ್ಯ."

"ಕಾಗೆ ವೃಷ್ಟಿಸುವ ಹೊನ್ನಕಳಶವಹುದರಿಂದ ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ, ಕರ್ಮಾವಲಂಬನಂ ಕೇಚಿತ್, ಕೇಚಿತ್ ಜ್ಞಾನಾವಲಂಬನಂ। ವಯಂ ತು ಶಿವಭಕ್ತಾನಾಂ ಪಾದುಕಸ್ಯಾವಲಂಬನಂ॥ ಎಂದುದಾಗಿ ಕೂಡಲಸಂಗಮದೇವಾ ನಿಮ್ಮ ಸೆರೆಗೊಡ್ಡಿ ಬೇಡುವೆನು. ಇದೊಂದೇ ವರವ ಕರುಣಿಸಯ್ಯಾ. "

ಇದರ ಮೇಲಿಂದ ಬಸವೇಶ್ವರನು ಎಷ್ಟು ಅಹಂಕಾರ ಮಮಕಾರಗಳನ್ನು ತೊರೆದವನಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಅಹಂಕಾರವು ಅನೀತಿಗೆ ಒಯ್ಯುತ್ತದೆ. ಯಾವ ಮನುಷ್ಯನು ತಾನು ಜಾಣನು, ಎಲ್ಲವನ್ನು ಬಲ್ಲವನು ಎಂದು ತಿಳಿಯುತ್ತಾನೋ, ಅವನ ಮನಸ್ಸಿನ ಪ್ರಗತಿಯು ಕೂಡಲೇ ಕುಂಠಿತವಾಗುತ್ತದೆ. ಮತ್ತು ಅವನು ದಿನದಿನಕ್ಕೆ

ಅವನತ ಸ್ಥಿತಿಯನ್ನು ಹೊಂದುತ್ತ ಹೋಗುತ್ತಾನೆ. ಅದರಂತೆಯೇ ಮನುಷ್ಯನು ಸ್ತುತಿಗೆ ಮೆಚ್ಚುವವನು ಇರಕೂಡದು. ತನ್ನ ನಿಜವನ್ನು ತಿಳಿದುಕೊಂಡು, ದೈನ್ಯಭಾವದಿಂದಲೇ ವರ್ತಿಸತಕ್ಕದ್ದು. ಇದರಿಂದಲೇ ಅವನ ಪ್ರಗತಿಯು. ಈ ವಿಷಯವಾಗಿ ಬಸವೇಶ್ವರನು ಒಂದು ಕಡೆಗೆ ಅನ್ನುವದೇನೆಂದರೆ:—

"ಎನ್ನಲ್ಲಿ ನಿನ್ನ ಮೇಲಣ ಭಕ್ತಿ ಸಾಸಿವೆಯ ಷಡ್ಭಾಗದನಿತಿಲ್ಲ. ಎನ್ನ ಭಕ್ತನೆಂಬರು. ನಾನಾವ ಪಾಪ ಮಾಡಿದೆನೋ? ಬೆಳೆಯದ ಮುನ್ನ ಕೊಯ್ಯುವರೇ ಹೇಳಯ್ಯ? ಇರಿಯದ ವೀರ ಇಲ್ಲದ ಸೊಬಗನು ಎಲ್ಲಾ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೇ ಕೂಡಲ ಸಂಗಮದೇವ?"

"ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರು, ಎನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತ್ತಲ್ಲಾ! ಅಯ್ಯಾ, ನೊಂದೆನು. ಸೈರಿಸಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡಬಾರಾ ಧರ್ಮಿ."

ಮೇಲಿನ ವಚನಗಳಿಂದ ಬಸವೇಶ್ವರನು ಎಷ್ಟು ದೀನ ಮತ್ತು ಸಭ್ಯ ವರ್ತನೆಯುಳ್ಳವನಾಗಿದ್ದನೆಂಬುದು ಗೊತ್ತಾಗುತ್ತದೆ. ಈತೆರದ ವೃತ್ತಿಯು ಇರಬೇಕಾದರೆ, ಮನುಷ್ಯನ ಸದಸದ್ವಿಚಾರ ಬುದ್ಧಿಯು ಅತ್ಯಂತ ಜಾಗ್ರತವಾಗಿರಬೇಕಾಗುತ್ತದೆ. ಆತನಿಗೆ ಆತ್ಮನಿರೀಕ್ಷಣ ಭಾವವು ಮೇಲ್ತರದ್ದಿರಬೇಕಾಗುತ್ತದೆ. ಇಂಥ ಆತ್ಮನಿರೀಕ್ಷಣ ಭಾವವು ಬಸವೇಶ್ವರನಲ್ಲಿ ಅತ್ಯಂತ ಜಾಗ್ರತಸ್ಥಿತಿಯಲ್ಲಿತ್ತೆಂದು ತೋರುತ್ತದೆ. ಆದ್ದರಿಂದ ಅವನು ಅನ್ನುವದೇನೆಂದರೆ: —

"ಡಂಬು ಡಳ್ಳು ಎನ್ನದಯ್ಯ. ಡಂಭಕನೆಂಬುವ ನಾನಯ್ಯ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವ."

"ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯ. ಕಟುಕ ಕೆತ್ತುಗ ಕೊಲ್ಲುಗನೆಂಬುದು ಎನ್ನ ಹೆಸರಯ್ಯ. ಕೂಡಲಸಂಗಮದೇವಾ ನಿಮ್ಮ ಶರಣರ ಮನೆಯ ಮಗ ನಾನಯ್ಯ."



ಹೀಗೆ ಯಾವನು ತನ್ನನ್ನು ತಿಳಿದುಕೊಂಡು ಆಚರಿಸುತ್ತಾನೋ, ಅವನ ನಡೆ ನುಡಿಗಳಲ್ಲಿ ತಪ್ಪಾಗುವದು ದುರ್ಲಭವು. ಒಂದು ವೇಳೆ ತಪ್ಪುಗಳಾದರೂ ಅವುಗಳನ್ನು ಅವನು ತೀವ್ರವಾಗಿ ತಿದ್ದಿಕೊಳ್ಳುತ್ತಾನೆ.

ಬಸವೇಶ್ವರನು ಒಬ್ಬ ಧರ್ಮಸ್ಥಾಪಕನಂತೆ ಎಂದೂ ವರ್ತಿಸಲಿಲ್ಲ. ತಾನೊಬ್ಬ ಸಾಮಾನ್ಯ ಭಕ್ತನೆಂಬ ಭಾವವನ್ನು ತಾಳಿ, ಅವನು ವರ್ತಿಸುತ್ತಿದ್ದನು. ಈ ವಿಷಯದಲ್ಲಿ ಅವನಿಗೂ ಬುದ್ಧ, ಮಹಮ್ಮದ, ಕ್ರಾಯಿಸ್ತ ಮೊದಲಾದ ಧರ್ಮಸ್ಥಾಪಕರಿಗೂ ಮಹದಂತರವಿದೆ. ಇವರೆಲ್ಲರು ತಾವು ದೇವರಿಂದ ಜಗತ್ತಿನ ಉದ್ಧಾರಾರ್ಥವಾಗಿ ಕಳಿಸಲ್ಪಟ್ಟವರೆಂದು ಹೇಳಿ, ತಮ್ಮ ಧರ್ಮವನ್ನು ಪ್ರಸಾರಗೊಳಿಸಿದರು. ಆದರೆ ಬಸವೇಶ್ವರನು ಹಾಗೆ ಮಾಡಲಿಲ್ಲ. ಅವನು ತಾನೊಬ್ಬ ದೇವದೂತನೆಂದು ಎಂದೂ ಹೇಳಿಕೊಳ್ಳಲಿಲ್ಲ. ಎಲ್ಲ ಮಾನವರಂತೆ ತಾನೊಬ್ಬ ಮನುಷ್ಯನು, ಅಪರಾಧಕ್ಕೆ ಒಳಗಾಗುವವನು, ಎಂದು ಭಾವಿಸಿಕೊಂಡು ವರ್ತಿಸುತ್ತಿದ್ದನು. ಅವನು ಒಂದು ಕಡೆಗೆ ಅನ್ನುವದೇನಂದರೆ;—

"ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ, ನಿಮ್ಮ ಪ್ರಮಥರ ಮುಂದೆ ಕಿನ್ನರೀ ಬೊಮ್ಮಣ್ಣನೇ ಸಾಕ್ಷಿ"

"ಆನು ಮಾಡಿದ ತಪ್ಪನೆಣಿಸಿಹೆನೆಂದೊಡೆ, ಗಣನೆ ಇಲ್ಲ. ನಡೆದು ತಪ್ಪುವೆನು, ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ, ಅರಿದು ತಪ್ಪುವೆ, ಮರೆದು ತಪ್ಪುವೆ. ಎನ್ನ ತಪ್ಪನೊಪ್ಪ ಮಾಡಿಕೊಂಬುದಲ್ಲದೆ, ಚಿತ್ತಕ್ಕೆ ತರಲಾಗದು ಕೂಡಲಸಂಗಮದೇವ."

"ಎಡದ ಪಾದದಲೊದ್ದರೆ, ಬಲದ ಪಾದವ ಹಿಡಿವೆ. ಬಲದ ಪಾದದಲೊದ್ದರೆ, ಎಡದ ಪಾದವ ಹಿಡಿವೆ. ತ್ರಾಹಿ ತ್ರಾಹಿ. ತಪ್ಪೆನ್ನದು, ಕ್ಷಮೆ ನಿಮ್ಮದು. ಕೂಡಲಸಂಗಮದೇವಾ ನಿಮ್ಮ ಕರುಣದ ಕಂದ ನಾನು."

ಎಂದು ಬಸವೇಶ್ವರನು ಹೇಳಿಕೊಂಡಿದ್ದಾನೆ. ನೈತಿಕಾಚರಣೆಗೆ ಇಂಥ ಆತ್ಮನಿರೀಕ್ಷಣೆಯು ತಳಹದಿಯಾಗಿದೆ. ಹೀಗೆ ಮನಸ್ಸಾಕ್ಷಿಯಾಗಿ ಯಾವನು ವರ್ತಿಸುತ್ತಾನೋ, ಅವನ ಆಚರಣೆಯು ಯಾವಾಗಲೂ ಶುದ್ಧನಾಗಿರುತ್ತದೆ.

ಈ ಬಗೆಯಾಗಿ ಬಸವೇಶ್ವರನು ಆಚರಿಸಿದ್ದರಿಂದಲೇ ಅವನು ಸಮಾಜವನ್ನು ಮುಂದಕ್ಕೆ ಒಯ್ಯಲು ಶಕ್ತನಾದನು. ಅವನು ಅತ್ಯಂತ ಪವಿತ್ರ ಆಚರಣೆಯುಳ್ಳವನು. ಆದರೆ ಅವನ ವಿಷಯವಾಗಿ ನಾನಾ ತರದ ಅತ್ಯಂತ ಹೇಯವಾದ ಕಥೆಗಳು ಕಲ್ಪಿಸಲ್ಪಟ್ಟಿವೆ. ಇವುಗಳಿಗೂ ಅವನು ಬೋಧಿಸಿದ ತತ್ವಗಳಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಆದ್ದರಿಂದ ಇಂಥ ಕಥೆಗಳು ನಂಬಲಿಕ್ಕೆ ಅಸಾಧ್ಯವಾಗಿರುತ್ತದೆ. ಅವನ ವಿಚಾರಗಳನ್ನು ಅರಿಯಲಿಕ್ಕೆ ಅವನ ವಚನಗಳೇ ಮಹತ್ವದ ಸಾಧನಗಳಾಗಿವೆ. ಅವುಗಳನ್ನು ಅರಿತು ನಾವು ವರ್ತಿಸುವದೇ ನಮ್ಮ ಕರ್ತವ್ಯವು.

ರಾ॥ ಬ॥ ಫ. ಗು ಹಳಕಟ್ಟಿ.

ಬಿ. ಎ ಎಲ್. ಎಲ್. ಬಿ., ವಿಜಾಪುರ.

---

## ಬಸವನ ಭಕ್ತಿಯು ಬೆಳಕು.

ಶ್ರೀ ಬಸವೇಶ್ವರನು ಗತಿಸಿ ಹೋಗಿ ೮೦೦ ವರ್ಷಗಳಾದವು. ಆದರೂ ಅವನ ಶುಭನಾಮವು ಇನ್ನೂ ಅಚ್ಚಳಿಯದೆ ಹಾಗೆಯೇ ಉಳಿದಿರುತ್ತದೆ. ಬಸವನ ಭಕ್ತರಂತೂ ಆತನನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಕುಣಿದಾಡಬಹುದು. ಆದರೆ ಬಸವನ ವಿರೋಧಿಗಳು ಸಹ ಆತನನ್ನು ನಿಂದಿಸಿ ಅವನ ಕೀರ್ತಿಪ್ರಭೆಯನ್ನು ಬೆಳಗಿದರು. 'ಬೈದವರೆನ್ನ ಬಂಧುಗಳೆಂಬೆ' ಎಂಬ ಬಸವನ ನುಡಿಯೇ ಆತನ ದಿವ್ಯ ತೇಜಸ್ಸಿನ ದ್ಯೋತಕವಾಗಿರುತ್ತದೆ. 'ಬಸವಾ ಬಸವಾ' ಎಂಬ ಹೆಸರು ಬಹುಕಾಲದಿಂದ ಜನರಲ್ಲಿ ಪ್ರಚಲಿತವಾಗಿರುವದರಿಂದ ಅದನ್ನು ತಪ್ಪಿಸಬೇಕೆಂಬ ಪ್ರಯತ್ನಿಸುವವರೂ ಕೂಡ ಅಪ್ಪಿ ತಪ್ಪಿ ಆಕಳಿಸುವಾಗ, ನಿದ್ರೆಯಿಂದೆಚ್ಚತ್ತಾಗ, 'ಬಸವಾ' ಎಂದು ಫಕ್ಕನೆ ನುಡಿದು ಬಿಡುವರು. ಬಸವನ ಭಕ್ತಿಯ ಬೆಳಕು ಹಿಂದಕ್ಕೂ ಬೆಳಗುತ್ತಿತ್ತು, ಈಗಲೂ ಬೆಳಗುತ್ತಿದೆ, ಇನ್ನು ಮುಂದೆಯೂ ಬೆಳಗುವದು. ಆ ಬೆಳಕಿನಲ್ಲಿಯೇ ವೀರಶೈವರ ಅಸ್ತಿತ್ವವಿದೆ. ಬಸವನೆಂಬ ಭಕ್ತಿಯ ಜ್ಯೋತಿಯೊಂದಿರದಿದ್ದರೆ ವೀರಶೈವರೆಂಥ ಅಂಧಕಾರದಲ್ಲಿರುತ್ತಿದ್ದರೋ



ಏನೋ! ವೀರಶೈವ ಮತದಲ್ಲಿ ಅತ್ಯಂತ ಮಹಿಮಾಶಾಲಿಗಳಾರಾದರೂ ಇದ್ದಾರೆಯೇ ಎಂಬ ಪ್ರಶ್ನೆಗೆ ಬಸವನ ಹೆಸರು ಎಲ್ಲಕ್ಕೂ ಮುಂದೆ ಬಂದು ನಿಲ್ಲುತ್ತದೆ.

ವೀರಶೈವ ಮತದಲ್ಲಿ ಎಷ್ಟೋ ಜನ ವೈರಾಗ್ಯಶಾಲಿಗಳೂ, ಮಹಾ ವಿದ್ವಾಂಸರೂ, ತತ್ವಜ್ಞಾನಿಗಳೂ, ಮಹಾ ಮಹಾ ಆಚಾರ್ಯರೂ, ಶಿವ ಶರಣರೂ ಆಗಿ ಹೋಗಿರಬಹುದು. ಅವರ ಹೆಸರನ್ನು ಬಲ್ಲವರು ಬಹು ವಿರಳ. ಬಸವನ ಹೆಸರನ್ನರಿಯದವರಾರು? ಆತನ ಹೆಸರು ಎಲ್ಲರಿಗೂ ಮನೆಮಾರಾಗಿ ಬಿಟ್ಟಿರುವದು. ಅದೇಕೆ? ಬಸವನಲ್ಲಿರುವ ಭಕ್ತಿಯ ಬೆಳಕೇ ಆತನ ಶ್ರೇಷ್ಠತೆಗೆ ಕಾರಣವಾಯಿತಲ್ಲವೇ? ಬಸವನು ತನ್ನ ಭಕ್ತಿ ಪ್ರಭಾವದಿಂದಲೇ ವೀರಶೈವ ಮತವನ್ನು ಪ್ರಸಾರ ಮಾಡಿದನು. ತನ್ನ ಭಕ್ತಿಯ ಬಲದಿಂದಲೇ ಆತನು ಜನರ ಭಾವನೆಗಳನ್ನು ಪ್ರದೀಪ್ತಿಗೊಳಿಸಿದನು. ಕರ್ನಾಟಕದ ಪ್ರತಿಯೊಂದು ಮೂಲೆಯಲ್ಲಿಯೂ ಸಹ ಬಸವನ ಯಶೋದುಂದುಭಿಯು ಮೊಳಗಲಿಕ್ಕೆ ಆತನ ಅವಿರಳ ಭಕ್ತಿಯೇ ಕಾರಣವಾಯಿತು. ಬಸವನಂಥ ಭಕ್ತಿಶಾಲಿಗಳು ವೀರಶೈವ ಮತದಲ್ಲಿ ಹಿಂದಕ್ಕೂ ಆಗಿಲ್ಲ, ಮುಂದೆಯೂ ಆಗಲಿಕ್ಕಿಲ್ಲ

ಜಗತ್ತು ವಿಶೇಷತಃ ಭಾವನಾ ಪ್ರಚುರವಾದುದು. ಜನಗಳ ಭಾವನೆಯನ್ನು ಪ್ರದೀಪ್ತಿಗೊಳಿಸಿದವರೇ ಜಗತ್ತಿನಲ್ಲಿ ಯಾವಾಗಲೂ ಹೆಸರುವಾಸಿಗಳಾಗಿ ಮೆರೆಯುವರು. ಸಾಧುವರ್ಯ ಕ್ರೈಸ್ತ, ಗೌತಮಬುದ್ಧ, ಚೈತನ್ಯ, ಶ್ರೀಕೃಷ್ಣ, ಮೊದಲಾದ ವಿಭೂತಿಗಳು ಭಾವನಾಪ್ರಾಧಾನ್ಯರಿದ್ದು ಜನಗಳ ಭಾವನಾಶಕ್ತಿಯನ್ನು ಹೆಚ್ಚಿಸಿದ್ದುದರಿಂದಲೇ ಅವರ ಹೆಸರುಗಳನ್ನು ಜನರು ಈಗಲೂ ಕೊಂಡಾಡುತ್ತಾರೆ. ಭಕ್ತಿಯು ಭಾವನೆಯ ಕೂಸು. ಭಾವನೆಯುಳ್ಳವರಲ್ಲಿ ಭಕ್ತಿಯು ಸ್ವಾಭಾವಿಕವಾಗಿ ಉದ್ಭವಿಸುತ್ತದೆ. ಯಾರ ಹೃದಯದಲ್ಲಿ ಭಕ್ತಿಯು ಮೇಲ್ಮಟ್ಟವನ್ನು ಮುಟ್ಟುವದೋ ಅವರೇ ಯಾವಾಗಲೂ ಪೂಜ್ಯರು. ಇದೇ ಮೇರೆಗೆ ಬಸವನು ಭಾವನಾಪ್ರಧಾನವಾದ ಕರ್ನಾಟಕ ದೇಶದಲ್ಲಿ ಜನ್ಮವೆತ್ತಿ ಭಕ್ತಿಯ ಅಂಕುರಗಳನ್ನು ಎಲ್ಲರ ಹೃದಯದಲ್ಲಿ ಬಿತ್ತಿ ಹೋಗಿರುವದರಿಂದ ಬಸವನ ಹೆಸರೂ ಆತನ ಬಗ್ಗೆ ಪ್ರೇಮವೂ ಎಲ್ಲರಲ್ಲಿಯೂ ಮನೆಮಾಡಿಬಿಟ್ಟಿರುತ್ತದೆ. ಬಸವನ ಭಕ್ತಿಯಲ್ಲಿ ಆಕರ್ಷಣ ಶಕ್ತಿಯಿದ್ದಿತು. ಬಸವನ ಭಕ್ತಿಪ್ರಭಾವವನ್ನು ಕೇಳಿ ಮೋಳಿಗೆಯ ಮಾರ

ಯ್ಯನವರು ಕಾಶ್ಮೀರ ದೇಶವನ್ನು ಬಿಟ್ಟು ಬಸವನಿದ್ದೆಡೆಗೆ ಬಂದರು. ಅಕ್ಕಮಹಾದೇವಿಯು ಉಡುತಡಿಯನ್ನು ಬಿಟ್ಟು, ಕಲ್ಯಾಣವನ್ನು ಸೇರಿದಳು. ಶ್ರೀ ಪ್ರಭುದೇವರು ಬನವಾಸಿಯನ್ನು ಬಿಟ್ಟು ಬಸವೇಶ್ವರನ ಸನ್ನಿಧಿಗೆ ಆಗಮಿಸಿದರು. ಇವಲ್ಲದೆ ಆ ಕಾಲದಲ್ಲಿ ಹಿಂದುಸ್ತಾನದ ಎಲ್ಲ ಭಾಗಗಳಿಂದಲೂ ಮಹಾ ಮಹಾ ವ್ಯಕ್ತಿಗಳು ಬಸವನ ಭಕ್ತಿ ಪ್ರಭಾವವನ್ನು ಕೇಳಿ ಕಲ್ಯಾಣ ಪಟ್ಟಣದಲ್ಲಿ ಬಂದು ವಾಸವಾಗಿದ್ದರು. ಬಸವನ ಭಕ್ತಿಗೆ ಮೆಚ್ಚಿ ಎಷ್ಟೋ ಜನ ಪರಮತಸ್ಥರು ವೀರಶೈವ ಮತವನ್ನಂಗೀಕರಿಸಿದರು. ಭಕ್ತಿಗೆ ತಲೆಬಾಗದರಾರು? ಭಕ್ತಿಗೆ ದೂರವಾವುದು? ಈ ಕುಲದವರೇನು? ಆ ಕುಲದವರೇನು? ಭಕ್ತಿಯು ಎಲ್ಲರನ್ನೂ ಸರಿಸಮಾನ ಸ್ಥಿತಿಗೆ ತಂದು ಬಿಡುವದು. ಬಸವನು ೧೨ನೆಯ ಶತಮಾನದಲ್ಲಿರದೆ ೨೦ನೆಯ ಶತಮಾನದಲ್ಲಿದ್ದರೆ ಯುರೋಪ ಅಮೇರಿಕೆಗಳ ಮಹಾ ಮಹಾ ತತ್ವವೇತ್ತರನ್ನು ತನ್ನೆಡೆಗೆ ನಿಸ್ಸಂಶಯವಾಗಿ ಆಕರ್ಷಿಸುತ್ತಿದ್ದನು.

ಭಕ್ತಿಯ ಬಲದಿಂದಲೇ ಬಸವನು ಗುರುಸಂಗಮೇಶನ ಘನಕೃಪೆಗೆ ಪಾತ್ರನಾದನು. ಭಕ್ತಿಯಿಂದಲೇ ಜಗತ್ತಿನಲ್ಲಿ ಬೆಳಕಿಗೆ ಬಂದನು. ಭಕ್ತಿಯ ಆವೇಶದಿಂದಲೇ ಗಂಭೀರವಾದ ವಾಗ್ಝರಿಯು ಆತನ ಹೃತ್ಪಟಲದಿಂದ ಅಸ್ಖಲಿತವಾಗಿ ಹೊರಚಿಮ್ಮಿತು. ಭಕ್ತಿಯ ಸಹಾಯದಿಂದಲೇ ಆತನು ಅಘಟಿತ ಘಟನಾಕಾರ್ಯಗಳನ್ನು ಮಾಡಿದನು. ಭಕ್ತಿಪ್ರಭಾವದಿಂದಲೇ ಪಂಚಪರುಷದ ಕಣಿಯೆಂದೂ ಸಿದ್ಧಪುರುಷನೆಂದೂ ಅನಿಸಿಕೊಂಡನು. ಬಸವನ ಪವಿತ್ರ ನಾಮವು ಎಲ್ಲರ ಬಾಯೊಳಾಡಲಿಕ್ಕೂ, ಬಸವನ ಹೆಸರನ್ನು ಜನರು ತಮ್ಮ ಹಸುಗೂಸುಗಳಿಗಿಟ್ಟು ಕರೆಯುವದಕ್ಕೂ, ಬಸವನ ನಾಮಸ್ಮರಣೆಯಿಂದ ಆತ್ಮೋದ್ಧಾರ ಮಾಡಿಕೊಳ್ಳಲಿಕ್ಕೂ, ಆತನಲ್ಲಿರುವ ಭಕ್ತಿಯೇ ಕಾರಣವಾಯಿತು. ಬಸವನ ಭಕ್ತಿಸುಧೆಯನ್ನು ಶಿವಶರಣರೆಲ್ಲರೂ ಭಿಕ್ಷೆ ಬೇಡಬೇಕಾದರೆ ಆತನ ಭಕ್ತಿಯು ಸಾಮಾನ್ಯವಾದುದೇ? ಮೂರ್ತಿಮಂತ ಭಕ್ತಿಯಾದ ಬಸವನನ್ನು ನೆನೆನೆನೆದೇ ಎಷ್ಟೋ ಸ್ವಾಮಿಗಳೂ ಶಿವಯೋಗಿಗಳೂ ಉದ್ಧಾರವಾದರು, ಆಗುತ್ತಲಿದ್ದಾರೆ. ಜನರ ಕುಲಗೋತ್ರಗಳಿಗೆ ಮಹತ್ವ ಕೊಡದೆ ಸದಾಚಾರ ಸದ್ಗುಣಗಳಿಗೆ ಮಹತ್ವ ಕೊಟ್ಟು, ಮಾರ್ಗದರ್ಶಿಯಾದ ಶ್ರೇಯಸ್ಸು ಆತನ ಭಕ್ತಿಗೆ ಸಲ್ಲುತ್ತದೆ. ಬಸವನು ಭಕ್ತಿಯ ಬಲದಿಂದ ಸಿದ್ಧಪುರುಷನಾಗಿ ಮಹತ್ಕಾರ್ಯಗಳನ್ನು ಮಾಡಿದನು. ಅದರಂತೆಯೇ ಭಕ್ತಿಹೀನರಾದ ಸಾಮಾನ್ಯರೂ ಮಾಡಲಾರಂಭಿಸಿದರೆ ಜನರ



ಅಪಹಾಸ್ಯಕ್ಕೂ ನಿಂದೆಗೂ ಗುರಿಯಾಗುತ್ತಾರೆ. ಭಕ್ತಿರಸವೇ ಹೆಪ್ಪುಗಟ್ಟಿ ಬಸವನೆಂಬ ನಾಮವನ್ನು ಧರಿಸಿ ಯಾವಾಗಲೂ ಬೆಳಗುತ್ತಿರುವದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಶ್ರೀಸಂಗಮೇಶ್ವರನು ಬಸವೇಶ್ವರನಿಗೆ ಲಿಂಗಧಾರಣ ಮಾಡಿದಾಗ ಆತನಲ್ಲಿ ಭಕ್ತಿಯ ಬೀಜಾರೋಪಣೆಯಾಯಿತು. ೮ನೆಯ ವರ್ಷ ಮುಂಜಿಯ ಕಾಲಕ್ಕೆ ಅದು ಮೊಳೆತು ಸಸಿಯಾಯಿತು. ಮುಂದೆ ಶಿವಶರಣರೊಡಗೂಡಿ ಮತಪ್ರಸಾರ ಮಾಡುವಾಗ ಅದು ಪಲ್ಲವಿಸಿ ಪೆರ್ಮರವಾಗಿದ್ದಿತು. ಅನಂತರ ಆತನ ಭಕ್ತಿದ್ರುಮವು ಪರಿಪಕ್ವವಾದ ವಚನಗಳೆಂಬ ಫಲಗಳನ್ನು ಸುರಿಸಿ ಸಕಲರಿಗೂ ತೃಪ್ತಿಬಡಿಸಿತು. ಕಲ್ಯಾಣ ಪಟ್ಟಣದಲ್ಲಿ ೧ ಲಕ್ಷ ೯೬ ಸಾವಿರ ಗಣಂಗಳು ಪ್ರತಿನಿತ್ಯ ಈ ಭಕ್ತಿಯ ರಸವನ್ನು ಪಾನ ಮಾಡುತ್ತಿದ್ದರು. ಬಸವನೆಂಬ ಭಕ್ತಿಯ ಕಣಿಯಲ್ಲಿ ಸದಾಚಾರ ಸದ್ಗುಣಗಳೆಂಬ ಅಮೌಲ್ಯ ರತ್ನಗಳು ಬೇಕಾದಷ್ಟು ಅಡಗಿದ್ದವು. ಬಸವನೆಂಬ ಭಕ್ತಿರತ್ನಾಕರನು ತನ್ನೊಡಲಲ್ಲಿ ಕ್ರಿಯಾಜ್ಞಾನಗಳೆಂಬ ಮುತ್ತು ಹವಳಗಳನ್ನಿಟ್ಟುಕೊಂಡಿದ್ದನು. ಬಸವನೆಂಬ ಭಕ್ತಿಕೇಸರಿಯು ತನ್ನ ದೇಹವೆಂಬ ಕಾನನದೊಳಗಿನ ಕಾಮಕ್ರೋಧಾದಿ ಅರಿಷಡ್ವರ್ಗವೆಂಬ ಮೃಗಗಳನ್ನು ಧ್ವಂಸಮಾಡಿಬಿಟ್ಟಿದ್ದನು. ಇಂಥ ಭಕ್ತಿಯು ಅಳವಟ್ಟಿದ್ದರಿಂದಲೇ ಬಸವನು ಬೇಡಿದವರಿಗೆ ಇಲ್ಲವೆಂದು ಎಂದೂ ಹೇಳುತ್ತಿರಲಿಲ್ಲ. ಆದುದರಿಂದಲೇ ಬಸವನನ್ನು ಕವಿಗಳು ಭಾಗ್ಯದ ನಿಧಿಯೆಂದೂ ಪರುಷದ ಕಣಿಯೆಂದೂ ಚಿಂತಾಮಣಿಯೆಂದೂ ಕಲ್ಪತರುವೆಂದೂ ಬಹು ಪ್ರೇಮದಿಂದ ಕರೆದಿರುವರು. ಭಕ್ತಿಗೆಂದಾದರೂ ಬಡತನವುಂಟೇ?

ಸಂಗಮನಾಥನನ್ನು ಕಂಡರೆ ಅಥವಾ ಸ್ಮರಣೆಗೆ ತಂದರೆ ಬಸವೇಶನ ಶರೀರವು ಪುಲಕಿತವಾಗುತ್ತಿತ್ತು. ಆನಂದಾಶ್ರುಗಳು ಉಕ್ಕುಕ್ಕಿ ಹೊರ ಚೆಲ್ಲುತ್ತಿದ್ದವು. ಆತನ ಮುಖವು ಅರಳಿದ ತಾವರೆಯಂತೆ ಪ್ರಫುಲ್ಲತೆಯಿಂದ ವಿರಾಜಿಸುತ್ತಿದ್ದಿತು. ಹೃತ್ಪಟಲವು ಭಕ್ತಿಪ್ರಕಾಶದಿಂದ ಲಕ ಲಕ ಹೊಳೆಯುತ್ತಿದ್ದಿತು. ಆತನ ರಕ್ತನಾಳಗಳಲ್ಲಿ ಭಕ್ತಿಯ ಝರಿಯು ಸೊಗಸಾಗಿ ಹರಿದಾಡುತ್ತಿದ್ದಿತು. ನಡೆವಾಗ ನುಡಿವಾಗ ಮಲಗುವಾಗ ಏಳುವಾಗ ಯಾವಾಗಲೂ ಕೂಡಲಸಂಗನ ಮೃದು ಮಧುರ ನಾಮವು ಆತನ ಬಾಯೊಳಗಾಡುತ್ತಿದ್ದಿತು.

ಹಸುಗೂಸು ಹೆತ್ತಾಯಿಯನ್ನು ಕಂಡಕೂಡಲೆ 'ಅವ್ವಾ' ಎಂದು ಕರೆಯುತ್ತ ಧಾವಿಸುವಂತೆ ಬಸವನು ಸಂಗಮೇಶನ ಕಡೆಗೆ ಧಾವಿಸುವನು. ಆಕಳ ಕರುವು ತಾಯಿಯ ಬಳಿಗೆ ಜಿಗಿಯುತ್ತ ಹೋಗುವಂತೆ ಬಸವನು ಸಂಗಮನಾಥನೆಂಬ ಕಾಮಧೇನುವಿನೆದುರಿಗೆ ಎಳೆಗರುವಾಗಿ ನಿಲ್ಲುವನು. ಹೆತ್ತಾಯಿಯು ತನ್ನ ಮುದ್ದು ಮಗುವನ್ನು ನೋಡಿ ಹಿಗ್ಗಿ ಹಿರಿಹೊಳೆಯಾಗಿ ಅಪ್ಪಿಕೊಂಡು ಲಟ ಲಟ ಮುದ್ದು ಕೊಡುವಂತೆ ತನ್ನ ಪ್ರಾಣಸ್ವರೂಪಿಯಾದ ಕೂಡಲಸಂಗಮದೇವನನ್ನು ಮುದ್ದಿಡುವನು. ತಂದೆಯನ್ನು ಕಂಡು ಮಗುವು ಭಯಭೀತನಾಗಿ ತನ್ನ ಆಚಾರಗಳಿಗೆ ವ್ಯತ್ಯಯ ಬಾರದಂತೆ ನಡೆದುಕೊಳ್ಳುವ ಹಾಗೆ ಬಸವನು ತಂದೆಯಾದ ಕೂಡಲಸಂಗಮನೆದುರಿಗೆ ತನ್ನಿಂದ ಯಾವ ಪಾಪವೂ ಘಟಿಸದಂತೆ ಬಹು ಜಾಗರೂಕತೆಯಿಂದ ನಡೆದುಕೊಳ್ಳುವನು. ಗುರುವು ಹೇಳಿಕೊಟ್ಟ ಪಾಠವನ್ನು ಒಳ್ಳೇ ಶಿಷ್ಯನು ದಕ್ಷತೆಯಿಂದ ಕಲಿಯುವಂತೆ ಗುರು ಸಂಗಮೇಶನು ಹಾಕಿಕೊಟ್ಟ ವ್ರತನಿಯಮಗಳನ್ನು ಭಕ್ತನಾದ ಬಸವನು ಒಳ್ಳೇ ಬದ್ಧನಾಗಿ ಪಾಲಿಸುವನು. ಸಜ್ಜನನು ತನ್ನ ಪ್ರಿಯ ಮಿತ್ರನ ಮುಂದೆ ತನ್ನಂತರಂಗವನ್ನೆಲ್ಲ ಬಿಚ್ಚಿಟ್ಟು ಆತನ ಸಲಹೆಗೆ ಹಂಬಲಿಸುವಂತೆ ಬಸವನು ಪರಮಸ್ನೇಹಿತನಾದ ಕೂಡಲಸಂಗಯ್ಯನೆದುರಿಗೆ ತನ್ನ ಗುಟ್ಟನ್ನು ಬಿಚ್ಚಿಟ್ಟು ಆತನ ಸಲಹೆ ಕೇಳುವನು. ಸತಿಯು ಪತಿಯೊಡನೆ ಇದ್ದು ಆನಂದಿಸುವಂತೆ ಬಸವನು ಲಿಂಗಸ್ವರೂಪಿಯಾದ ಕೂಡಲಸಂಗನಲ್ಲಿ ತಲ್ಲೀನ ಮನಸ್ಕನಾಗಿ ಸುಖಿಸುವನು. ಕೀಟವು ಪತಂಗವನ್ನು ನೆನೆನೆನೆದು ಕೊನೆಗೆ ತಾನೂ ಪತಂಗವೇ ಆದಂತೆ ಬಸವನು ಕೂಡಲಸಂಗನನ್ನೇ ಏಕಾಗ್ರತೆಯಿಂದ ನೆನೆನೆನೆದು ಕೊನೆಗೆ ತಾನೂ ಕೂಡಲಸಂಗನೇ ಆಗಿಹೋದನು. ಅಂತೆಯೇ ಬಸವನಿಗೆ ದ್ವಿತೀಯ ಶಂಭುವೆಂದೆನ್ನುವರು. ಬಸವನೂ, ಶಿವನೂ, ಒಂದೇ- ಬೇರೆಯಲ್ಲ. "ಬಸವಾ ಶಿವನೇ ಶಿವನೇ ಬಸವಾ" ಎಂಬ ಹಾಡಿನಲ್ಲಿ ಶಿವಬಸವರಲ್ಲಿರುವ ಅಭೇದತ್ವವು ಗೊತ್ತಾಗುತ್ತದೆ.

ಬಸವನ ಭಕ್ತಿಯೇ ಬಲಿದು ನಿಷ್ಠೆಯಾಯಿತು. ಆತನ ನಿಷ್ಠೆಯು ಏಕಾಗ್ರವಾಗಲು ಆತನಲ್ಲಿ ಪ್ರಸನ್ನತೆಯ ಕಳೆಯು ಮೂರ್ತಿಗೊಂಡಿತು. ಪ್ರಸನ್ನತೆಯಿಂದ ಆತನಲ್ಲಿ ಸ್ವಾನುಭವವು ಅಳವಟ್ಟಿತು. ಆ ಸ್ವಾನುಭವದ ಸಹಾಯದಿಂದ ಆತನಿಗೆ ಲಿಂಗಾಂಗ ಸಾಮರಸ್ಯದರಿವಾಯಿತು. ಆ ಅರಿವಿನ ಅನುಗ್ರಹದಿಂದಲೇ ಪರವನ್ನು ಕಂಡು ಅದರಲ್ಲಿ ಬೆರೆದು ಹೋದನು.



ಆದ್ದರಿಂದಲೇ ಬಸವನ ಭಕ್ತಿಯ ನಂದಾದೀಪವು ಕರ್ನಾಟಕವೆಂಬ ಪಣತಿಯಲ್ಲಿ ಈಗಲೂ ಪ್ರಕಾಶಮಾನವಾಗಿ ಬೆಳಗುತ್ತಿರುವದು.

ಬಸವನು ಗತಿಸಿ ಹೋದರೂ ಆತನ ಹೆಸರೂ, ಆತನ ಬಾಯಿಂದ ಹೊರಟ ಭಕ್ತಿಯ ವಾಗ್ಝರಿಯೂ ಹಾಗೆಯೇ ಉಳಿದಿರುತ್ತವೆ. ಮಹಾಮಹಿಮನ ಆ ವಚನಗಳು ವೇದಾಗಮೋಪನಿಷತ್ತುಗಳಿಂದಲೂ ಮಿಗಿಲಾದವುಗಳು. ವಚನ ವಾಙ್ಮಯದಲ್ಲಿರುವಷ್ಟು ಸ್ಫೂರ್ತಿಯೂ, ಜೀವಕಳೆಯೂ, ಬೇರೆ ಕಡೆಗೆ ಕಾಣುವದು ಬಹು ಅಪರೂಪ. ಬಸವನು ಯಾವ ಯಾವ ಭಾವನೆಗಳಿಂದ ಆಯಾಯ ವಚನಗಳನ್ನು ನುಡಿದಿರುವನೋ, ಅಂತಂಥ ಉದಾತ್ತ ಭಾವನೆಗಳು ಆ ವಚನಗಳನ್ನು ನಾವು ಓದಿದರೆ ಅಥವಾ ಕೇಳಿದರೆ ನಮ್ಮಲ್ಲಿ ದಿವ್ಯ ಸ್ಫೂರ್ತಿಯೂ, ದೈವೀ ಭಕ್ತಿಯೂ ಪ್ರಾದುರ್ಭವಿಸುವವು. ಸಾಕ್ಷಾತ್ ಬಸವೇಶನೇ ನಮ್ಮ ಹೃದಯದೊಳಗೆ ಕುಳಿತುಕೊಂಡು ನಮಗೆ ತನ್ನ ಗಂಭೀರವಾದ ವಚನಗಳನ್ನು ಬೋಧಿಸುವಂತೆ ಭಾಸವಾಗುತ್ತದೆ. ಬಸವನ ಅಗಾಧವಾದ ಭಕ್ತಿಯ ಲೇಶಮಾತ್ರವಾದರೂ ತಮ್ಮಲ್ಲಳವಡಬೇಕೆಂದಪೇಕ್ಷಿಸುವವರು ಆತನ ವಚನಗಳನ್ನು ಪ್ರತಿನಿತ್ಯ ತಪ್ಪದೆ ಪಾರಾಯಣ ಮಾಡಬೇಕು.

—ಶ್ರೀ. ಬ್ಯಾಳಿ ಕಲ್ಯಾಣಪ್ಪನವರು-ಬಿ. ಎ. (ಬಿ. ಟಿ.)
ಸಿದ್ಧೇಶ್ವರ ಹೈಸ್ಕೂಲ
ವಿಜಯಪುರ.

# ಬಸವನ ಬಟ್ಟೆ, ಬಟ್ಟೆ.

ಪರಿಪರಿಯ ಕಾಲಗಳಲ್ಲಿ ತೆರತೆರನಾದ ಹಿರಿಹಿರಿಯ ಕ್ರಾಂತಿಗಳು ತಲೆಯೆತ್ತುತ್ತವೆ, ಬೆಲೆ ಹೊಂದುತ್ತವೆ. ಆ ಕ್ರಾಂತಿಗಳಿಗೆ ಒಂದು 'ಸಂಧಿ' ಅಥವಾ 'ಈಶ್ವರ ಸಂಕೇತ'ವೆಂಬುದು ಇದ್ದೇ ಇರುತ್ತದೆ. ಇದಲ್ಲವೆ ಕ್ರಾಂತಿ ದೇವಿಯು ಮುಡಿಗೆದರಿ ರಕ್ತಾಕ್ಷಿಯಾಗಿ ಅಡಿಯಿಡಲಾರಳು. ಮಹತ್ತಾದ ಕ್ರಾಂತಿಗಳಲ್ಲೆಲ್ಲಾ 'ಈಶ್ವರ ಸಂಕೇತ' ವಿರುತ್ತದೆಂದು ಕಾರ್ಯಗಳಿಂದ ಊಹಿಸಬಹುದು. ಇಂದು ಹಿಂದುಸ್ತಾನದಲ್ಲೆಲ್ಲ ಪ್ರಜ್ವಲಿಸುತ್ತಿರುವ ರಾಜಕೀಯ ಕ್ರಾಂತಿಗೆ ಅಗಾಧ ಶಕ್ತಿಯುತರಾದ ಮಹಾತ್ಮಾ ಗಾಂಧಿ, ಪಂಡಿತ ಜವಾಹಿರಲಾಲ ನೆಹರು, ಮುಂತಾದ ಎಷ್ಟೋ ರಾಜಕೀಯ ಮಹಾ ಮಹಾ ವ್ಯಕ್ತಿಗಳು ಏಕಕಾಲದಲ್ಲಿಯೇ ಒದಗಿರುವುದನ್ನು ನೋಡಿ, ಕೊಂಚ ಯೋಚಿಸಿದರೆ ಇದೊಂದು 'ಸಂಧಿ' ಅಥವಾ ಈಶ್ವರೇಚ್ಛೆಯ ಪ್ರಭಾವವು ಎಂದು ತಾನಾಗಿಯೇ ಬೋಧೆಯಾಗುವದಿಲ್ಲವೇ ? ಇಲ್ಲದಿರಲು ಇಂತಹ ರಾಜಕೀಯ ಮಹಾವ್ಯಕ್ತಿಗಳು ಏಕತ್ರಿತರಾಗುವುದು ಹೇಗೆ ?

ಈ ಸಮಯದಲ್ಲಿ ವಚನ ಸಾಹಿತ್ಯೋದ್ಧಾರಕರಾದ ಶ್ರೀಮಾನ್ ರಾ. ಸಾ. ಪಿ. ಜಿ. ಹಳಕಟ್ಟಿಯವರ ವಿಚಾರ ಪ್ರಚುರವಾದ ವಾಕ್ಯವೊಂದು ನನ್ನ ನೆನಹಿಗೆ ಬರುತ್ತದೆ.— "ಯಾವುದಾದರೊಂದು ಮಹತ್ತರವಾದ ಕ್ರಾಂತಿಯು ತತ್ಕಾಲದಲ್ಲಿ ಎಂದೂ ಸಂಭವಿಸುವದಿಲ್ಲ. ಇದು ರೂಪಕ್ಕೆ ಬರಲು ಅದಕ್ಕೆ ಒಂದು ಪೂರ್ವೇತಿಹಾಸನಿರುತ್ತದೆ. ಆಗ ಅನೇಕರು ಉದ್ಭವಿಸಿ ಪ್ರಚಾರ ಕಾರ್ಯ ಮಾಡುವದುಂಟು. ಅದರ ಪರಿಣಾಮವಾಗುತ್ತ ಕೆಲಕಾಲದ ಮೇಲೆ ಮತ್ತೊಬ್ಬ ಮಹಾವ್ಯಕ್ತಿಯು ಉದ್ಭವಿಸಿ ಅವನು ತನ್ನ ಘಟನಾ ಶಕ್ತಿಯಿಂದ ಒಂದು ಅದ್ಭುತವಾದ ಕ್ರಾಂತಿಯನ್ನು ಸಮಾಜದಲ್ಲಿ ಎಸಗುವನು. ಅವನ ಹೆಸರೇ ಮುಂದೆ ಬಹುಕಾಲದಲ್ಲಿ ಉಳಿಯುತ್ತದೆ. ಅವನು ಮಹಾತ್ಮನಾಗುತ್ತಾನೆ." ಎಂದು ತಿಳಿಸಿದ್ದಾರೆ. ಏಕೆಂದರೆ ಅರುಣೋದಯವಾಗದೆ ಸೂರ್ಯೋದಯವಾಗದು. ಇದೀಗ ಉಗ್ರವಾಗಿ ಸಮಗ್ರವಾಗಿ ಪ್ರಜ್ವಲಿಸುತ್ತಿರುವ ಕ್ರಾಂತಿಗೆ ಪೂರ್ವೇತಿಹಾಸವೊಂದು ಇದ್ದೇ ಇದೆ. ಟಿಳಕರು ಅರುಣೋದಯದಂತಿದ್ದರೆ ಗಾಂಧೀಯವರು ಸೂರ್ಯೋದಯದಂತಿದ್ದಾರೆ. ಗಾಂಧೀಯವರಿಗಿಂತಲೂ ಮೊದಲು ಲೋಕಮಾನ್ಯ ಟಿಳಕ, ಚಿತ್ತರಂಜನ ದಾಸ ಮೊದಲಾದವರು ದುಡಿದಿದ್ದಾರೆ, ದುಃಖಪಟ್ಟಿದ್ದಾರೆ. ಆದರೆ ಇನಕ್ಕೆ ಗಾಂಧೀಯವರೇ ಪ್ರಧಾನ ನಾಯಕರೆಂಬ ಪ್ರಖ್ಯಾತಿಯು ಇಂದು ದೇವ



ಲೋಕಕ್ಕೆ ಮುಟ್ಟಿದೆ. ಅರುಣೋದಯ ಸೂರ್ಯೋದಯಗಳಲ್ಲಿ ತೋರಿಬರುವ ತಾರತಮ್ಯವಿವೇ ಇರಬಹುದು. ಹೀಗೆಯೇ ಬಸವಣ್ಣನವರ ಕಾಲ ೧೧ನೇ ಹಾಗೂ ೧೨ನೇ ಶತಮಾನಗಳ ಮಧ್ಯದಲ್ಲಿದ್ದು ಆಗ ಧಾರ್ಮಿಕ ಕ್ರಾಂತಿ ಎದ್ದಿತು. ಈಶ್ವರೇಚ್ಛೆಯಂತೆ ಅಂತಹ ಧೀರ ವೀರ ವ್ಯಕ್ತಿಗಳೇ ಆಗ ಏಕಕಾಲದಲ್ಲಿ ಏಕತ್ರಿತರಾದರು. ಟಿಳಕರ ತರುವಾಯ ಗಾಂಧಿಯವರಾದಂತೆ, ಅರುಣೋದಯದ ತರುವಾಯ ತರಣಿಯು ಉದಯವಾದಂತೆ, ರೇವಣಸಿದ್ಧೇಶ್ವರರ ತರುವಾಯ ಬಸವಣ್ಣನವರಾದರು. ಗಾಂಧೀಯವರು ಪ್ರಖ್ಯಾತಿಗೆ ಬರಲು ಟಿಳಕರ ವಿಷಯದಲ್ಲಿ ಜನರು ಬರಬರುತ್ತ ಮಂದೋತ್ಸಾಹರಾದರು, ಆಗಿರುತ್ತಾರೆ. ಬಸವಣ್ಣನವರು ಪ್ರಕಾಶಕ್ಕೆ ಬರಲು ರೇವಣಸಿದ್ಧೇಶ್ವರರ ಹೆಸರು ವೀರಶೈವರ ಸ್ಮೃತಿಪಥದಿಂದ ಕೊಂಚ ಸರಿದಿರಬೇಕು. 'ಮಾವಿನಹಣ್ಣು ಬರಲು ಮಾವಿನ ಹೂವಿನಲ್ಲಿದ್ದ ಲವಲವಿಕೆ ಕಡಿಮೆಯಾಗುತ್ತದೆಯಲ್ಲವೇ ?

ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಚರಿತೆಯ ಹೊತ್ತಿಗೆಗಳು ಮಿತಿಮೀರಿಲ್ಲವೆಂದರೂ ಕೊರತೆಯಿಲ್ಲವೆನ್ನಬಹುದು. ಆದರೆ ಅವೆಲ್ಲವೂ ಬಸವಣ್ಣನವರ ಜೀವನ ರೇಖೆಯನ್ನು ಸುಸ್ಪಷ್ಟಗೊಳಿಸಿವೆ ಎಂದು ಒಪ್ಪಿಕೊಳ್ಳುವಂತಿಲ್ಲ. ಬಸವಣ್ಣನವರ ಜೀವನ ರಹಸ್ಯವು ಅವರ ವಚನಗಳಲ್ಲಿಯೇ ಖಚಿತವಾಗಿದೆ. ಪೌರಾಣಿಕ ಪೊವಾಡದ ಕಥೆಗಳಲ್ಲಿಲ್ಲ. ಅವರ ಚರಿತ್ರೆ ಬರೆದವರೆಲ್ಲರೂ ಅವರ ವಚನಗಳನ್ನು ನೋಡಿಯೇ ಇದ್ದರು. ಆದರೆ ಜನರ ಮುಖದಲ್ಲಿ ಬೆಳೆದು ಬಂದು ಪೊವಾಡಗಳಿಗೆ ಸಾಕಷ್ಟು ಬೆಲೆ ಕೊಟ್ಟು, ಇಷ್ಟೂ ಸಾಲದಿದ್ದಕ್ಕೆ ತಮ್ಮಿಂದಲೂ ಸಾಧ್ಯವಿದ್ದಷ್ಟು ಕಲ್ಪಿಸಿ ಕೃತಿ ಬರೆದವರೇ ಬಹು ಜನರೆನ್ನಬಹುದು. ಬಸವಣ್ಣನವರ ವಚನಗಳನ್ನು ಹಾಡಿ ನೋಡಿ, ಅವುಗಳಲ್ಲಿರುವ ಧ್ವನಿಯನ್ನು ಹಿಡಿದುಕೊಂಡು, ಅವನ ಜೀವನದ ಬೆಳವಣಿಗೆಯಾದ ಬಗೆ ಸತ್ಯಾನ್ವೇಷಣೆಯಲ್ಲಿರುವ ಆತನ ವಿಮರ್ಶಾತ್ಮಕ ಬುದ್ಧಿ, ಮತ್ತು ಇದಕ್ಕೆ ತಕ್ಕ ಧೀರಲಲಿತ ಸ್ವಭಾವ, ಆದರೂ ಸಹಿಷ್ಣುತೆಯನ್ನೊಳಗೊಂಡ ಕುಸುಮ ಕೋಮಲವಾದ ಚಿತ್ತವೃತ್ತಿ, ಎಲ್ಲಕ್ಕೂ ಮಿಗಿಲಾಗಿ ಕೂಡಲ ಸಂಗಮನಲ್ಲಿದ್ದ ಅವನ ಅಹೇತುಕ ವಿಶ್ವಾಸ, ಪ್ರಧಾನವಾದ ಸುಸ್ಥಿರ ಭಕ್ತಿ, ಆ ಭಕ್ತಿಭಾವದಲ್ಲಿರುವ ಸರ್ವಾರ್ಪಣಭಾವ ಇವುಗಳನ್ನೆಲ್ಲ ಯಥಾಮತಿ ಗ್ರಹಿಸಿಯೂ ವಹಿಸಿಯೂ ವಚನಗಳಿಗೆ ಸರಿಬರುವ ಜನರ ಮುಖದಲ್ಲಿದ್ದ ಕೆಲವು ಪೊವಾಡಗಳನ್ನು ಸೇರಿಸಿಕೊಂಡು, ಆ ಭಕ್ತಿ

ಭಾಂಡಾರಿಯ ಸರಳ ಹೃದಯವನ್ನು ಮರೆಮಾಡದೆ, ಚರಿತ್ರೆಗೆ ತಕ್ಕ ಚದುರಿಡಿದ, ಮೃದುವಡೆದ, ಸವಿನುಡಿಯ ಕಾವ್ಯ ವಾಣಿಯಿಂದ ಭಾವಭರಿತವಾಗಿ ಹಾಡಿದವನೆಂದರೆ, 'ಹರಿಹರ' ದೇವನೊಬ್ಬನಾಗಬಹುದೆಂದು ನನಗೆ ತೋರುತ್ತದೆ. ಚಂದ್ರಲೇಖೆಯ ಅಭಿರುಚಿಯನ್ನು ಚಕೋರವು ಬಲ್ಲುದಲ್ಲವೇ? ಅಥವಾ "ಭುಜಂಗ ಏವ ಜಾನೀತೆ ಭುಜಂಗ ಚರಣಂ ಸಖೇ," ಹಾವಿ ನಡಿಯನು ಹಾವುಗಳೇ ನೆರೆ ಬಲ್ಲುವಲ್ಲವೆ?

ಕನ್ನಡ ಸಾಹಿತ್ಯದಲ್ಲಿ ಬಸವಣ್ಣನು ಸೀಮಾ-ಪುರುಷನಾಗಿದ್ದಾನೆ. ಆತನುಸರಿಸಿದ ತತ್ವವು (ಧಾರ್ಮಿಕ ಕ್ರಾಂತಿಯು) ಆತನ ಆತ್ಮ ಶಕ್ತಿಪ್ರಭೆಯು. ಅದು ಜಗತ್ತನ್ನೇ ಆವರಿಸಿದೆ; ಅಚ್ಚುಕಟ್ಟು ಮಾಡಿದೆ; ಅಚ್ಚರಿಗೊಳಿಸಿದೆ. ಅವನ ನಿಷ್ಕಪಟವಾದ ನಡೆನುಡಿಗಳಿಗೆ ಮುಗ್ಧರಾದ ಜನರು ಅವನನ್ನು ನಂದೀಶ್ವರನ ಅವತಾರವೆಂದೂ ಮತ್ತೆ ಹಲವರು ಎರಡನೆಯ ಶಂಭುವೆಂದೂ ಭಾವಿಸಿ ಬಣ್ಣಿಸಿದರು. ಈ ನಮ್ಮ ವಿಜ್ಞಾನಯುಗದಲ್ಲಿ ಅವತಾರ ವಿಷಯವನ್ನು ಬಹುಜನರು ನಂಬಲಾರರು, ನಂಬಲೂ ಬಾರದು. ಆದರೆ ಮಾನವನಾಗಿ ಹುಟ್ಟಿ, ಮಹಾದೇವನಾಗಿ ನಿರ್ವಯಲಾದನೆನಬಾರದೇಕೆ? ಇದನ್ನು ಸಿದ್ಧರಾಮಣ್ಣನವರೇ:— "ಬಸವನು ಎರಡನೆಯ ಶಂಭುವೆನ್ನುವರು. ನಾವು ಮೂರನೆಯ ಶಂಭುವೇನಯ್ಯ?" ಎಂದು ಪ್ರಸಿದ್ಧಿಸಿದ್ದಾರೆ. ಏಕಂದರೆ ಯಾವ ವಸ್ತುವು ಸದಾ ಅಖಂಡವಾಗಿ ಒಂದೇ ಇದೆಯೋ ಅವರಲ್ಲಿಯೇ ನ್ಯೂನವಾಗದ ತತ್ಸದೃಶ ಮತ್ತೊಂದು ವಸ್ತುವು ಹುಟ್ಟುವುದು ಸಿದ್ಧವಾದರೆ, ಮೂರನೆಯದು, ಹಾಗೇ ನಾಲ್ಕು, ಐದು ಬೆಳೆಯುತ್ತ ಬೆಳೆಯುತ್ತ 'ಶಂಭುವಿನ' ಎಂಬ ಪದವು ಹೋಗಿ 'ಶಂಭುಗಳ' (ಎಂದಾಗಿ) ಸಂಖ್ಯೆ ಹೆಚ್ಚಿ ಶಂಭುವಿಗೂ ನಾಶವೊದಗಬೇಕಾದೀತೆಂಬುದೇ ಆ ಪ್ರಶ್ನೆಯ ತಾತ್ಪರ್ಯ. ಮುಂದೆ ಅದೇ ವಚನದಲ್ಲಿ:—"ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆಂದೆನಿಸಿದ. ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ (ಸಿ. ರಾ. ವಚನ ಪುಟ (೧೧೪) ಎಂದು ಉತ್ತರಿಸಿದ್ದಾರೆ. ಈ ಬಗೆಯಲ್ಲೇ ಕ್ರಮವಿಡಿದು ಬಳೆದು ಬಂದ ಧಾರ್ಮಿಕ ಜೀವನದ ಯೋಗ್ಯತೆಯ ಜೊತೆಗೆ, ರಾಜಕೀಯ ವಿಚಾರದಲ್ಲಿಯೂ ವ್ಯವಹಾರದಲ್ಲಿಯೂ (ಹರಿಹರನು ಹೇಳುವ ಬಗೆಯಲ್ಲಿ ಅನುವು ದೊರೆತು) ಸಮರ್ಥ ಬುದ್ಧಿಯೊದಗಿದ್ದರಿಂದ ಬಸವಣ್ಣನವರು ಮಂತ್ರಿಪದವಿಯಿಂದ ಬಹುಮಾನಿತರಾದರು. ಅವರ ದಾನ ವಿನಯಾದಿ



ಸಚ್ಚರಿತ್ರೆಯಿಂದುಂಟಾದ ಕೀರ್ತಿಲತೆಯಾದ ಜಗತ್ತನ್ನು ವ್ಯಾಪಿಸತೊಡಗಿತು. ಅದನ್ನು ರಸಿಕ ಚಕ್ರವರ್ತಿಯಾದ ಆ ಹರಿಹರನು ಬಣ್ಣಿಸಲಿ:—

"ಬಸವನ ಪುಣ್ಯ ಕೀರ್ತಿಲತೆ ಬೇರ್ವರಿಯಿತ್ತುರಗೇಂದ್ರ ಲೋಕದೊಳ್" ।
"ದೆಸೆಗಳನಗ್ಗಳಂ ಮುಸುಕಿ, ಪರ್ವಿಗೆಯಾಯ್ತು ನರೇಂದ್ರ ಲೋಕದೊಳ್" ॥
ಕುಸುಮಿತವಾಗಿ ಸೌರಭದಿ, ಹೊಂಪುಳಿಯಾಯ್ತು ಮರೇಂದ್ರ ಲೋಕದೊಳ್ ।
ಪಸರಿಸಿ, ಪೂರಿತಾಮಳ ಸುಧಾಫಳ ಮಾದುದು ರುದ್ರಲೋಕದೊಳ್ ॥

[**ಭಾವಾರ್ಥ:**— ಬಸವನ ಕೀರ್ತಿ ಎಂಬ ಲತೆಯು ಪಾತಾಳದ ವರೆಗೂ ಬೇರಿಟ್ಟು, ಭೂತಲದಲ್ಲೆಲ್ಲಾ ಕುಡಿಯಿಟ್ಟು, ದಶ ದಿಗಂತಗಳಲ್ಲಿ ಅಡಿಯಿಟ್ಟು, ಸ್ವರ್ಗದಲ್ಲಿ ಹೂ ಬಿಟ್ಟು, ಸೌಸವವ ಬೀರಿ, ರುದ್ರ (ಕೈಲಾಸ) ಲೋಕದಲ್ಲಿ ಅಮೃತರಸ ಪೂರಿತವಾದ ಫಲಗಳನ್ನು ಬಿಟ್ಟಿತು.]

ಇದೇ ಸಮಯದಲ್ಲಿ ವಿರತಿ ತಳೆದ ಅಲ್ಲಮಪ್ರಭುವು ವೀರಮಡಿವಳ ಮಾಚಿದೇವಾದಿ ಸಹಸ್ರಾರು ಶರಣರು ನೆರೆಯಲು ಬೆರೆಯಲು ಬಸವಣ್ಣನ ಧಾರ್ಮಿಕ ಕ್ರಾಂತಿಯು ಉಜ್ವಲಾಕಾರವನ್ನು ತಾಳಿತು. ಕ್ರಾಂತಿಯ ಕೂಗು ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಕೇಳಿತು.

ಕ್ರಾಂತಿದೇವಿಗೆ ಸಾಹಿತ್ಯವೇ ಮುಖ. ಪ್ರತಿಯೊಂದು ಧರ್ಮದ, ಕರ್ಮದ, ರಾಷ್ಟ್ರದ ಅಭ್ಯುದಯವಾಗಬೇಕಾದರೆ, ಸಾಹಿತ್ಯ ಮುಖದಿಂದಲೇ ಕೂಗಬೇಕು, ಸಾಗಬೇಕು. ಹಿಂದಿನಿಂದ ಇಂದಿನ ವರೆಗೆ ನಿರುಕಿಸಿದರೆ, ಪರಿಕಿಸಿದರೆ, ಮಾನವಪ್ರಪಂಚವು ಭವ್ಯ ರೂಪವನ್ನೂ, ದಿವ್ಯ ಚೈತನ್ಯವನ್ನೂ, ನವ್ಯ ಪ್ರತಿಭೆಯನ್ನೂ ಸಾಹಿತ್ಯಮುಖದಿಂದಲೇ ಹೊಂದಿತು; ಹೊಂದುವುದು. ಈ ಕಾರಣದಿಂದಲೇ ಆ ಆ ಕಾಲಗಳ ಇತಿಹಾಸವು ಅಂದಿನ ಸಾಹಿತ್ಯದ ಒಡಲಿನಲ್ಲಿ ಅಡಗಿರುತ್ತದೆಂದು ನುಡಿಯುತ್ತಾರೆ. ಬಸವಣ್ಣನವರ ಶತಮಾನವು ಧಾರ್ಮಿಕ ಕ್ರಾಂತಿಮಯವಾಗಿತ್ತೆಂಬುದು ಆ ಕಾಲದ ವಚನಸಾಹಿತ್ಯವನ್ನು ಬಿಟ್ಟರೆ ಮತ್ತಾವುದರಿಂದಲೂ ತಿಳಿಯಲಾಗುವದಿಲ್ಲ. ಮತ್ತೊಂದು ವೈಶಿಷ್ಟ್ಯವೇನೆಂದರೆ:— ಈ ವಚನ ಸಾಹಿತ್ಯವು ಭಾಷೆಯು

ಸುಂದರತೆಯಲ್ಲಿಯೂ ಭಾವದ ಬಂಧುರತೆಯಲ್ಲಿಯೂ ಕನ್ನಡಕ್ಕೆ ಹೊಸತು. ಪದ್ಯವೂ ಅಲ್ಲ, ಗದ್ಯವೂ ಅಲ್ಲ; ಇವೆರಡನ್ನೊಡಗೂಡಿ ಒಂದು ನವೀನ ತತ್ವದಿಂದ ಸತ್ವದಿಂದ ಆಳವಾಗಿಯೂ ಅಗಲವಾಗಿಯೂ ಅಂದವಾಗಿಯೂ ಮಂದವಾಗಿಯೂ ಕನ್ನಡ ಕಾವೇರಿಯಂತೆ ಪ್ರವಹಿಸಿದ್ದುದರ ಮೂಲಕ ಕನ್ನಡ ಸಾಹಿತ್ಯವೂ ವಿಶ್ವಸಾಹಿತ್ಯದಲ್ಲಿ ತನ್ನಗೊಂದು ವಿಶಿಷ್ಟ ಸ್ಥಾನವನ್ನು ಪಡೆಯುವ ಅಭಿಮಾನವನ್ನು ತಾಳಲು ಸಮರ್ಥವಾಗಿದೆ. ಕರ್ನಾಟಕ ವಾಙ್ಮಯೋದ್ಯಾನಕ್ಕೆ ವಸಂತನ ಬರವಿನಂತೆ ಈ ವಚನ ಸಾಹಿತ್ಯದಿಂದ ಚೆಲುವು ಸಂದಿದೆ; ಬೆಲೆಯು ಬಂದಿದೆ. ಇವರಲ್ಲಿ ಬಸವಣ್ಣನವರ ವಚನಗಳು ಸರ್ವಜನ ಚಿತ್ತಾಕರ್ಷಕಗಳಾಗಿವೆ. ಇದಕ್ಕೆ ಬಸವಣ್ಣನವರ ಮಹಾನುಭಾವತೆಯೇ ಕಾರಣವು.

ವೀರಶೈವ ಶಾಸ್ತ್ರದ ಅಥವಾ ಬಸವಣ್ಣನವರ ಉಪದೇಶವು ಹಳೆಯದೆಲ್ಲವೂ ಪುರಸ್ಕರಣೀಯ, ಹೊಸದೆಲ್ಲದೂ ತಿರಸ್ಕರಣೀಯವೆಂಬ ಮಾರ್ಗ ವಿಡಿದು ಸಾಗಿಲ್ಲ. ಅವರ ಉಪದೇಶದಲ್ಲಿ ವಿಚಾರಕ್ಕೇ ತುಂಬಾ ಪ್ರಶಸ್ತಿ ಇದೆ. ಯಾವುದಾದರೊಂದು ವಿಷಯವು ಅನುಭವದಿಂದಲೇ ಸರ್ವಸಮ್ಮತವಾಗುತ್ತಿರಲು, ಆಗಮದ ಪ್ರಮಾಣವಿಲ್ಲವಲ್ಲಾ, ಎಂದು ನೊಂದು ಹಿಂದುಳಿಯುವದು ಬಸವಣ್ಣನವರ ಉದ್ದೇಶವಾಗಿರಲಿಲ್ಲ. ಏಕೆಂದರೆ ಅವರು ಶಾಸ್ತ್ರದ ಹುಟ್ಟನ್ನೂ ಅದರ ಬಿತ್ತರದ ಮುಟ್ಟನ್ನೂ ತಿಳಿದಿದ್ದರು. "ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಸಾಲದೇ ಅಯ್ಯ! ಮಾಲೆಗಾರನ ಕೇಳಿ ನನೆಯರಳುವುದೇ? ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯ?" ಎಂಬ ರಾಜಮಾರ್ಗವು ಬಸವಣ್ಣನವರದು. "ಮಾಲೆಗಾರನ ಕೇಳಿ ನನೆಯರಳುವುದೇ?" ಎಂಬ ನುಡಿ ಅದೆಷ್ಟು ನಿಸರ್ಗವಾದುದು, ನೈಜವಾದುದು ನೋಡಿ? ಮೊಗ್ಗು (ನನೆಯು) ಅರಳುವದು ಹೂವಾಡಿಗನ ಅಪ್ಪಣೆಯಿಂದಲ್ಲ. ಅದು ತನಗಿರುವ ಸ್ವಾತಂತ್ರ್ಯದಿಂದ ಸಮಯವರಿತು ಅರಳಿ ಸೌಸವವ ಬೀರುತ್ತಿದೆ. ಇದರಂತೆ ಅನುಭವಿಯಾದರೂ ಶಾಸ್ತ್ರಕಾರನ ಅಪ್ಪಣೆ ಪಡೆಯಬೇಕಾಗಿಲ್ಲ. ಅವನು ತಾನು ಕಂಡುಂಡ ಅನುಭವವನ್ನು ತನಗಿರುವ ವಿಚಾರ ಸ್ವಾತಂತ್ರ್ಯದಿಂದ ಸಮಯವರಿತು ನುಡಿಯುತ್ತಾನೆ. ಇಂತಹ ವ್ಯಕ್ತಿಗಳ ನುಡಿಗಡಣವೇ ಮುಂದೆ ಸಕಲರಿಂದ ಶಾಸ್ತ್ರವಾಗಬಹುದಾಗಿ ತೋರುತ್ತದೆ. ಹೇಗಾದರೂ ಲೋಕಾನುಭವ (ಅನುಭವಿಯ) ವಾಕ್ಯವನ್ನು ಬಿಟ್ಟು ಶಾಸ್ತ್ರವಾಗಲಾರದು. ಮಾಲೆಗಾರನಂತೆ ಶಾಸ್ತ್ರಕಾರನಿಗೂ ಸ್ವಾತಂತ್ರ್ಯವಿಲ್ಲ.



ಅನುಭವಿಯು ಮಾತ್ರ ಸರ್ವ ತಂತ್ರ ಸ್ವತಂತ್ರ. ಆದರೀ ಸ್ವಾತಂತ್ರ್ಯವು ಲೋಕಸುಖಕ್ಕೆ ಹೊರತಾದುದಲ್ಲ. ಬಸವಣ್ಣನವರು ಅನುಭವಿಗಳಿನಿತಲ್ಲ; ಮಹಾನುಭವಿಗಳು. ಅಂತೆಯೇ ಅವರು ಸಮಾಜ ಸುಧಾರಣೆಗೆ ತೊಡಗಿ ಜಾತಿ ನಿಷ್ಕರ್ಷೆ ಮಾಡುವಾಗ ನೀತಿಗೆ ಮಹತ್ತ್ವವಿತ್ತರು. "ಜಾತಿವಿಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯನರಸುವೆ. ಇದೇಕೋ ಮರುಳು ಮಾನವಾ?" ಎನ್ನುತ್ತಾರೆ. ಜಾತಿವಿಡಿದರೆ, ಸೂತಕ (ಅಸ್ಪೃಶ್ಯತೆ) ಸಿಗುವದಿಲ್ಲ. ಜ್ಯೋತಿ (ದೀಪ) ಹಿಡಿದರೆ ಕತ್ತಲೆ ಸಿಗುವದಿಲ್ಲ. "ಕುಲಜನೆಂಬುದಕ್ಕೆ ಏನು ದೃಷ್ಟ? ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ। ಆತ್ಮಜೀವ ಸಮುತ್ಪನ್ನಂ ವರ್ಣಾನಾಂ ಕಿಂ ಪ್ರಯೋಜನಂ?" (ಬ. ವ. ಪುಟ ೯೧) 'ಹೊಲೆಯೊಳಗೆ ಹುಟ್ಟಿ ಕುಲವನರಸುವಿರಿ', ಎಂದರೆ ಹುಟ್ಟುವಲ್ಲಿ ಎಲ್ಲರೂ ಹೊಲೆಯರು. 'ಕೊಲ್ಲುವನೇ ಮಾದಿಗ; ಹೋತ ತಂದು ನೀವು ಕೊಲ್ಲುವಿರಿ. ಹೋತು ಒಂದೆಡೆ ಇರಲಿ. 'ಕೂಡಲಸಂಗಮದೇವಯ್ಯ, ಹೊಲೆಯರ ಬಸಿರಲ್ಲಿ ವಿಪ್ರರು ಹುಟ್ಟಿ ಗೋಮಾಂಸ ತಿಂಬರು. ೧' ಪಾಪ, ಆ 'ಸತ್ತುದನೆಳೆವನೆತ್ತಣ ಹೊಲೆಯ?' (ಬ. ವ. ಪುಟ ೮೮) ಇನ್ನು ನಿಮ್ಮ ದೇವಭಕ್ತಿಯನ್ನು ನೋಡಿದರೆ "ಕಿಚ್ಚು ದೈವವೆಂದು ಹವಿಯನಿಕ್ಕುವಾಗ ಕಿಚ್ಚೆದ್ದು ಸುಡಲು, ಬಚ್ಚಲ ನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವಿರಿ. ವಂದನೆಯ ಮರೆದು ನಿಂದಿಸುತ್ತಿರುವಿರಿ." (ಬ. ವ. ಪುಟ ೮೯) ಹೀಗೆ ಹೇಳುವ ಬಸವಣ್ಣನವರಲ್ಲಿ ಮತಾಸೂಯೆಯ ಮುನಿಸಿತ್ತೆಂದು ತಿಳಿಯಲಿಂಬಿಲ್ಲ. ಏಕೆಂದರೆ "ಏನಯ್ಯ! ವಿಪ್ರರು ನುಡಿದಂತೆ ನಡೆಯರು. ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ. ಇದೆಂತಯ್ಯ?" ಎಂಬ ಚಿಂತೆ ಬಸವಣ್ಣನವರಿಗೆ. ಹೀಗೆ ವಿಪ್ರವರ್ಣದವರನ್ನು ಕುರಿತು ಅವರ ಸಂಬಂಧವೇ ಆದ ಎಷ್ಟೋ ದೋಷೋದ್ಘಾಟನ ಪ್ರಶ್ನಗಳನ್ನು ಮಾಡಿದ್ದಾರೆ. ಯಾರಾದರೂ ಇದರಿಂದ ಬಸವಣ್ಣನವರಿಗೆ ಉಚ್ಚ ಕುಲದವರೆಂದುಕೊಳ್ಳುವ ವಿಪ್ರರನ್ನು ಕೆಳಗೊತ್ತಬೇಕೆಂಬ ಅಸೂಯೆ ಇದ್ದಿತೆನ್ನುವುದಾದರೆ, ಗುಣಿಯಾದ ಗುಪ್ತಭಕ್ತನಾದ ಹೊಲೆಯನನ್ನು ಅದೆಂದೂ ಮೇಲಕ್ಕೊಯ್ಯುತ್ತಿದ್ದಿಲ್ಲ. ಆದರೆ ಉಚ್ಚ ಕುಲವೆನ್ನುವಲ್ಲಿ ಈ ತುಚ್ಛ ಕರ್ಮದ ಹೊಲೆಯೇಕೆ? ಜಾತಿಮಾತ್ರಕ್ಕೆ ಹೊಲೆಯನಾಗಿ ಉಚ್ಚ ವಿಚಾರ ಆಚಾರ

(೧) ವೇದಕಾಲದಲ್ಲಿ ಎಲ್ಲ ಪ್ರಾಣಿಗಳ ಮಾಂಸಭಕ್ಷಣ ರೂಢಿಯಲ್ಲಿದ್ದಿತು.

ಗಳುಳ್ಳವನಲ್ಲಿ ತುಚ್ಛತೆಯೇಕೆ?" ಎಂಬುದೇ ಬಸವಣ್ಣನವರ ಪ್ರಶ್ನೆಯ ಉದ್ದೇಶ. ಆಧುನಿಕ ಕಾಲದಲ್ಲೇ ಇಂತಹ ವಿಚಾರಗಳಿಗೆ ಇನ್ನೂ ವಿರೋಧಿಸುವವರು ಎಷ್ಟೋ ಜನರಿದ್ದರೆಂದು ಮೇಲೆ ಲೋಕವೇ ಅಂದು ಬಸವಣ್ಣನವರಿಗೆ ವಿರೋಧಿಸೀಬಹುದೆನ್ನುವಲ್ಲಿ ಅಚ್ಚರಿಯಾದರೂ ಏನು? ಆದರೆ ಸತ್ಯವ ನುಡಿವುದೇ ದೇವಲೋಕವೆಂದುಸುರಿದ ಬಸವಣ್ಣನವರು "ನ್ಯಾಯನಿಷ್ಠುರ, ದಾಕ್ಷಿಣ್ಯಪರ ನಾನಲ್ಲ", "ಲೋಕವಿರೋಧಿ ಶರಣನಾರಾರಿಗೂ ಅಂಜುವವನಲ್ಲ, ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ" ಎಂದು ಉದ್ಘೋಷಿಸಿದರು. ಸತ್ಯಕ್ಕೆ ಹೆದರಿಕೆಯೇ ಎಂದು ಮತ್ತೆಮತ್ತೆ ಉಪದೇಶಿಸಿದರು; ವ್ಯವಹರಿಸಿದರು. ಆಗ ಬಹುಜನ ವಚನಕಾರರಿಂದ ವೇದಾಗಮಗಳು ವಿಮರ್ಶಿಸಲ್ಪಡಬೇಕಾದವು. ಇವಕ್ಕೆ ವಚನಗ್ರಂಥಗಳೇ ಉದಾಹರಣೆ. ಆದರೂ ವಚನಕಾರರು ಪ್ರಾಯಶಃ ಪಂಡಿತರಿದ್ದಿಲ್ಲವೆಂದು ಪ್ರತಿಪಾದಿಸುವದಕ್ಕಾಗಿ, ಅಲ್ಲೊಬ್ಬ ಇಲ್ಲೊಬ್ಬರು ಗುಸುಗುಟ್ಟುವಂತೆ ತೋರುತ್ತದೆ. ಆದರವರು ವಿಮರ್ಶೆಯಲ್ಲಿ ಜಯಶೀಲರಾಗಲೆಂದೇ ನನ್ನ ಮತ. ಆಚಾರ್ಯ ಬಸವಣ್ಣನವರೊಡನೆ ತರ್ಕ, ಮೀಮಾಂಸ ಮೊದಲಾದ ಶಾಸ್ತ್ರದವರು ಶಾಸ್ತ್ರಾರ್ಥ ಮಾಡಿ ಪರಾಭವವನ್ನು ಹೊಂದಿದರೆನ್ನಲು ಬಸವಣ್ಣನವರ ವಚನಗಳೂ ಮೊದಲಿನ ಅವರ ಚರಿತ್ರಗ್ರಂಥಗಳೂ ಸಾಕ್ಷಿಯಾಗಿವೆ. ಒಂದು ಪಕ್ಷ ಬಸವಣ್ಣ ಮೊದಲಾದ ವಚನಕಾರರು ಶಾಸ್ತ್ರವರಿಯದವರಾಗಿದ್ದರೆ ಆಗಿನ ಕಾಲದಲ್ಲಿ ಮಾತ್ರ ಈ ಮತ. ಪ್ರಚಾರ ಪ್ರವಾಹವು ಅದೆಂದೂ ಮುಂದುವರಿಯುತ್ತಿದ್ದಿಲ್ಲ. ಆದಿಯಿಂದಲೂ ಸ್ವಮತೋತ್ಕರ್ಷಕ್ಕಾಗಿಯೇ ಹೆಣಗಾಡುತ್ತಿರುವ ನಮ್ಮ ಕರ್ಮಠ ಬ್ರಾಹ್ಮಣ ಬಂಧುಗಳು ಇದನ್ನು ಬಂಧಿಸದೆ ನಿಂದಿಸದೆ ಸುಮ್ಮನೇ ಸಮಾಧಾನಿಗಳಾಗುತ್ತಿರಲಿಲ್ಲ.

ಜೈನಮತದಂತೆ ವೀರಶೈವ ಮತವೂ ಅಹಿಂಸಾ ತತ್ವಕ್ಕೆ ನಡೆನುಡಿಗಳಲ್ಲಿ ಬಹು ಪ್ರಧಾನ್ಯವಿತ್ತಿದೆ. ಒಂದು ದಿನ ಯಜ್ಞದ ಸಲುವಾಗಿ ಕೊಲ್ಲಲು ಕಟ್ಟಿದ ಹೋತಿನ ಕಳವಳದ ಕೂಗನ್ನು ಕೇಳಿದ ದಯಾವೀರರಾದ ಬಸವಣ್ಣನವರ ಚಿತ್ತವು ಕರಗಿ ಕೋಡಿವೊಡೆದು ತೆರೆತೆರೆಯಾಗಿ ಎಂತು ಹರಿದಿದೆ ನೋಡಿ. "ಮಾತಿನ (೧) ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ

(೧) ಟಿ:— ಮಾತಿನ ಮಾತಿಂಗೆ ಎಂದರೆ ವೇದಶಾಸ್ತ್ರಗಳ ಮಾತನ್ನು ಓದಿದ್ದಕ್ಕಾಗಿ ಎಂದರ್ಥ.



ಹೋತೇ ಅಳು ಕಂಡೆಯಾ! ವೇದವನೋದಿದವರ ಮುಂದೆ ಅಳು ಕಂಡೆಯಾ!! ಎಲೆ ಹೋತೇ ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ!!! ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ" ಎಂದು ಉಪದೇಶಿಸುವಾಗ ಸಹಿಸಲಾಗದ ದುಃಖದಾವೇಶದಿಂದ ಆತುರತೆಯಿಂದ ಕಣ್ಣೀರ ಸುರಿಸುತ್ತ ಹರಿಸುತ್ತ "ದಯವಿಲ್ಲದ ಧರ್ಮವಾವುದಯ್ಯ?" ಎಂದು ತಮ್ಮ ಕೂಡಲಸಂಗಮನಲ್ಲಿ ಮೊರೆ ಇಟ್ಟಿದ್ದಾರೆ. "ವೇದ ಪುರಾಣ ಹೋತಿಂಗೆ ಮಾರಿ (ರಕ್ಕಸಿ) ಯಾದ ಕಾರಣ ಎಂತು ನಂಬುವೆನಯ್ಯ?" ಎಂದಿದ್ದಾರೆ. ಉತ್ತಮ ಕುಲ ಬೇಕಾಗಿದ್ದರೆ, ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕು; ಇದು ದೇವನೊಲೆಯುವ ಮಾರ್ಗ.

ದೇವನೊಲಿದಾತನೇ ಕುಲಜ. ಆ ದೇವನೊಲುಮೆಗೆ ಕುರಿ ಬೇಡ, ಮರಿ ಬೇಡ, ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು. ಪೂಜಿಸುವ ಪೂಜೆಯಲ್ಲಿ ಕೊಳಕು ವಿಚಾರಗಳನ್ನಿಟ್ಟುಕೊಂಡು (ಅಂತರಂಗ ಶುದ್ಧಿಯಿಲ್ಲದೆ) ಹೊರಗಿನ ಬರಿಯ ಸ್ನಾನ ಮೌನ ತಪೋಪವಾಸಾದಿಗಳನ್ನಾಚರಿಸಿದರಾಗದು. ಏಕೆಂದರೆ ಹುತ್ತವ ಬಡಿದರೆ ಒಳಗಣ ಹಾವು ಸಾಯದು. ದೇಹಶುದ್ಧಿಗಿಂತಲೂ ಮೊದಲು ಅಂತರಂಗ ಶುದ್ಧಿಯು ಬೇಕು. ಇದರ ಶುದ್ಧಿಯ ಬಗೆಯನ್ನಾದರೂ ಬಲ್ಲೆಯಾ? ಕೇಳು— "ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ. ಇದೇ ನಮ್ಮ ಕೂಡಲಸಂಗಮದೇವನ ನೊಲಿಸುವ ಪರಿ," ಇಂಥವನ ಹುಟ್ಟು ಎಲ್ಲಿಯೇ ಆಗಲಿ; ಅವನೇ ಸತ್ಕುಲಜ. ದುರ್ವಾಸನು ಮಚ್ಚಿಗನಾಗಿ, ಕಶ್ಯಪನು ಕಮ್ಮಾರನಾಗಿ, ವಾಲ್ಮೀಕಿಯು ವ್ಯಾಸನಾಗಿ ಹುಟ್ಟಿದ್ದಿಲ್ಲವೆ? ಆದರೆ ಅವರೆಲ್ಲ ಭವಿಗಳೇ? ಅಲ್ಲ. ಪರಹಿಂಸೆ ಪರಸ್ತ್ರೀಗಮನ, ಪರದ್ರವ್ಯಾಪಹರಣವುಳ್ಳೊಡೆ, ಅವನಾದರೂ ಭವಿಯು. ಅಂತೂ ವೀರಶೈವ ಮತದ, ಬಸವಣ್ಣನವರ, ಅಥವಾ ವಚನಕಾರರ ದೃಷ್ಟಿಯಲ್ಲಿ ಸೃಷ್ಟಿಯಲ್ಲಿ ಕುಲಗಳೆರಡೇ. ಒಂದು ಸತ್ಕುಲ, ಇನ್ನೊಂದು ದುಷ್ಕುಲ. ಮೊದಲನೆಯದಕ್ಕೆ ಭಕ್ತನೆನ್ನಿ; ಶರಣನೆನ್ನಿ; ಇಷ್ಟವಿದ್ದರೆ ಬ್ರಾಹ್ಮಣನೆನ್ನಿ; ಅಥವಾ ವೀರಶೈವನೆನ್ನಿ. ಇನ್ನೊಂದಕ್ಕೆ ಭವಿ ಎನ್ನಿ; ಅಥವಾ ಮಾದಿಗನೆನ್ನಿ; ಚಂಡಾಲನೆನ್ನಿ. ಇದರ ನಿರ್ಣಯವು ಮಾತ್ರ ಕರ್ಮದಿಂದ;

ಹುಟ್ಟಿನಿಂದಲ್ಲ. ಇವರಂತೆಯೇ ಬಸವಣ್ಣನವರು ಅನಂತ ದೇವತಾರಾಧನೆಗಳನ್ನು ಖಂಡಿಸಿ ಏಕೇಶ್ವರ ವಾದವನ್ನು ಮಂಡಿಸಿದ್ದಾರೆ. ಈ ವಿಚಾರಗಳೆಲ್ಲ ರಾಷ್ಟ್ರದ ಸಂಘಟನೆಗೆ ಸ್ವಾತಂತ್ರ್ಯಕ್ಕೆ ಬಹು ಮುಖ್ಯವಾಗಿವೆ. ಒಟ್ಟು ಬಸವಣ್ಣನವರು ಸಮತಾವಾದಿಗಳೂ ಸ್ವಾತಂತ್ರ್ಯಪ್ರಿಯರೂ ಸತ್ಯದ ಪ್ರೇಮಿಗಳೂ ಆಗಿದ್ದಾರೆ.

"ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ ? |
ಜಾತಿ ವಿಜಾತಿ ಎನಬೇಡ ದೇವನೊಲಿ |
ದಾತನೇ ಜಾತ ಸರ್ವಜ್ಞ" (ಸರ್ವಜ್ಞ ಪದಗಳು)

"ಕುಲದಲ್ಲಿ ಶೂದ್ರನಾದರೇನು? ಮನದಲ್ಲಿ ಮಹಾದೇವ ನೆಲೆಗೊಂಡವನೇ ವೀರಶೈವ ನೋಡಾ. ಕಾಂಚನಂ ರಜಿತಂ ತಾಮ್ರಂ ರಸಯೋಗಾತ್ ಸುವರ್ಣತಾಂ | ತಥಾ ಶಿವಜ್ಞಾನರಸಾಚ್ಛೂದ್ರಾದ್ಯಾಃ ಶಿವತಾಂ ವ್ರಜೇತ್|| ಎಂಬುದು ಸಟೆ ಏನೈ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೇ? ||

(ಸಿದ್ಧರಾಮೇಶ್ವರ ವಚನ ಪು. ೧೧೫)

(ಈ ವಚನದಲ್ಲಿ ಉದಾಹರಿಸಿರುವ ಸಂಸ್ಕೃತ ಶ್ಲೋಕವು ಸೂಕ್ಷ್ಮ ತಂತ್ರದ ಐದನೆಯ ಪಟಲದಲ್ಲಿ ೬೨ನೆಯ ಶ್ಲೋಕವಾಗಿದೆ)

ಇನ್ನು ವೀರಶೈವ ಶಾಸ್ತ್ರವು ಮನ್ವಾದಿಸ್ಮೃತಿಗಳಂತೆ ಕೇವಲ ಹೊಟ್ಟೆ ಹೊರೆವುದಕ್ಕಾಗಿ ಜಾತಿಕರ್ಮನಿರತನಾಗಬೇಕೆಂದು ಹೇಳುವದಿಲ್ಲ. ವೀರಶೈವನು ಪರಮಾತ್ಮನ ಪ್ರಸಾದಕ್ಕಾಗಿ ಯಾವುದಾದರೊಂದು ಕರ್ಮನಿರತನಾಗಬೇಕು. ಇವನ ಬಾಳು ಲಿಂಗಕ್ಕಾಗಿ, ಅಂಗಕ್ಕಲ್ಲ. ಅಂತೆಯೇ ಇಲ್ಲಿ ಜೀವ (ಭಕ್ತ)ನು ಶಿವಸಂತೃಪ್ತಿಗಾಗಿ ಸಾಮರಸ್ಯಕ್ಕಾಗಿ ದುಡಿಯುತ್ತ ದುಡಿಯುತ್ತ, ಆ ಮಾಟದ (ದುಡುಮೆಯ) ಲ್ಲಿ ಶಿವನ ಕೂಟ (ಐಕ್ಯ) ವನ್ನು ಸಾಧಿಸುತ್ತಾನೆ; ಸಂಪಾದಿಸುತ್ತಾನೆ. ಈಗಿವನ ಕರ್ಮವೆಲ್ಲ ಶಿವಮಯವಾಗುತ್ತದೆ. ಆದ್ದರಿಂದ ಜೀವನಿಗಿಲ್ಲಿ ಕರ್ಮದ ಯಾವ ಲೋಪವೂ ಇಲ್ಲ; ತಾಪವೂ ಇಲ್ಲ. ಎಂದರೆ ಪಾಪವಿಲ್ಲದೆ, ಪುಣ್ಯವಿಲ್ಲದೆ, ಆ ವಿಶ್ವಮೂರ್ತಿಯ (ಚಿತ್ ಸ್ವರೂಪನ) ಹೃದಯಕಮಲದಲ್ಲಿ ಜ್ಞಾನಪಾನ ಮಾಡುತ್ತ ಉನ್ಮತ್ತ ಭೃಂಗದಂತೆ ಆಡುತ್ತ ಹಾಡುತ್ತ ಐಕ್ಯನಾಗುತ್ತಾನೆ. ಈ ಸ್ಥಿತಿಗೆ 'ಮಾಟಕೂಟ' 'ಐಕ್ಯ' ವೆಂದೂ 'ನಿರ್ವಯಲು' ವೆಂದೂ ವೀರಶೈವರು ಕರೆಯುತ್ತಾರೆ. ಇದಕ್ಕೆ ವೇದಾಂತಿಗಳು 'ಮುಕ್ತಿ', 'ಕೈವಲ್ಯ' ಎನ್ನುತ್ತಾರೆ. ವೇದಾಂತಿ



ಗಳ ದೃಷ್ಟಿಯಲ್ಲಿ ಈ ಮುಕ್ತಿ ಪ್ರಾಪ್ತಿಯಾಗಬೇಕಾದರೆ 'ಕರ್ಮಯೋಗ'ಕ್ಕೆ ಎಷ್ಟೊಂದು ಪ್ರಾಧಾನ್ಯ ಬಂದಿದೆಯೋ ಬಸವಾದಿ ವಚನಕಾರರ ದೃಷ್ಟಿಯಲ್ಲಿ ಈ ಮಾಟ ಕೂಟ (ಲಿಂಗೈಕ್ಯ) ದೊರೆಯಬೇಕಾದರೆ ಕಾಯಕಕ್ಕೂ ಅಷ್ಟೇ ಪ್ರಾಧಾನ್ಯ ಬಂದಿದೆ. "ಕರ್ಮಯೋಗ"ವೆಂಬ ಪದವು ಎಷ್ಟು ಪವಿತ್ರವಾಗಿ ಎಂತಹ ವಿಸ್ತೃತಾರ್ಥವನ್ನೊಳಗೊಂಡಿದೆಯೋ 'ಕಾಯಕ' ವೆಂಬ ಪದವು ಅಷ್ಟೇ ಪಾವಿತ್ರ್ಯವನ್ನೂ ಅಂತಹ ವಿಸ್ತೃತಾರ್ಥವನ್ನೊಳಗೊಂಡಿದೆ. ಸಿದ್ಧವೀರಣ್ಣೊಡೆಯನ 'ಶೂನ್ಯಸಂಪಾದನೆ' ಎಂಬ ಗ್ರಂಥವಂತೂ ಈ 'ಕಾಯಕ'ದ ಮಹತ್ವವನ್ನು ತೋರುವುದಕ್ಕಾಗಿ ಸಾರುವದಕ್ಕಾಗಿ ರಚಿತವಾಗಿರಬೇಕು. ಆದರೆ ಈಗಿನ ವೀರಶೈವ ಸಮಾಜವು ಈ ಕಾಯಕದ ಉಚ್ಚ ವಿಚಾರವನ್ನಾಗಲಿ, ಹೆಚ್ಚು ಪ್ರಚಾರವನ್ನಾಗಲಿ ಮಾಡುತ್ತಿರುವಂತೆ ತೋರುವದಿಲ್ಲ.

ಮತ್ತು ಆರ್ಥಿಕ ಸುಧಾರಣೆಗೂ ಕೂಡ 'ಕಾಯಕ'ವು ಸಹಾಯಕವಾಗುತ್ತದೆಂಬುದು ಬಸವಣ್ಣನವರ ಉದ್ದೇಶವಾಗಿತ್ತು. ಇಹಪರಗಳ ಸುಖಶಾಂತಿಗಳಿಗೆ ಸ್ವಾರ್ಜಿತ ಸಂಪತ್ತೇ ಸರ್ವೋತ್ಕೃಷ್ಟವಾದುದು. ಆದ್ದರಿಂದ ಧನಿಕನಾಗಲಿ, ದರಿದ್ರನಾಗಲಿ, ಸದ್ವಿನಿಯೋಗದ ಸಲುವಾಗಿ ಜಾತಿ ನಿಯಮವಿಲ್ಲದೆ ಯಾವುದಾದರೊಂದು ಹೋರೆಯನ್ನು ನಿಯತದಿಂದ ಮಾಡಬೇಕು. "ಹೊಲೆಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈ ಕೂಲಿಯ ಮಾಡುವೆ" ಎಂದು ಹಾಡಿದ ಬಸವಣ್ಣನವರು ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕೆಲಸ ಮಾಡಿದರು. ಮಾಡುವಾ ಕಾಯಕವನ್ನು ಮನಮುಟ್ಟಿ, ತನು ಮುಟ್ಟಿ, ಪ್ರಾಮಾಣಿಕತನದಿಂದ ಮಾಡಬೇಕು. ಅದೇ ಕಾಲದಲ್ಲಿದ್ದ ಆಯದಕ್ಕಿ ಮಾರಯ್ಯಗಳೆಂಬ ಶರಣರು ಕಾಯಕದಲ್ಲಿರುವ ತತ್ಪರತೆಯನ್ನು ಅದರ ಮಹತ್ವವನ್ನು ಹೀಗೆ ಹೇಳಿದ್ದಾರೆ—

"ಕಾಯಕದಲ್ಲಿ ನಿರುತನಾದೊಡೆ ಗುರುದರುಶನವಾದರೂ ಮರೆಯಬೇಕು; ಲಿಂಗಪೂಜೆಯಾದರೂ ಮರೆಯಬೇಕು; ಜಂಗಮ ಮುಂದಿದ್ದಡೆಯೂ ಹಂಗುಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು."

(ಶೂನ್ಯಸಂಪಾದನೆ ಪುಟ ೨೩೪)

ಕೇವಲ ಭೌತಿಕ ದೃಷ್ಟಿಯನ್ನಿಟ್ಟುಕೊಂಡಿರುವ ಪಾಶ್ಚಿಮಾತ್ಯರಲ್ಲಿ ಉದ್ಯೋಗದಲ್ಲಿರಬೇಕಾದ ಈ ಪವಿತ್ರ ಧ್ಯೇಯವಿಲ್ಲದಿರಬಹುದಾದರೂ ಈ ಕಾರ್ಯತತ್ಪರತೆ, ಈ ಪ್ರಾಮಾಣಿಕತೆ, ಈ ಸತತೋತ್ಸಾಹವೀಗ ಅವರಲ್ಲಿ ಪ್ರಸಾರವಾಗಿದೆ; ಪ್ರವೃದ್ಧಿಯಾಗಿದೆ. ಅಂತೆಯೇ ಅವರೀಗ ಸಿರಿಯ ಗೋಪುರವನ್ನು ಕಟ್ಟಿದ್ದಾರೆ. ಅವಕ್ಕೆ ರತ್ನ ಕಲಶವನ್ನಿಟ್ಟಿದ್ದಾರೆ. ಕಾಯಕವು ಬಸವಣ್ಣನವರ ಕಾಲದಲ್ಲಿ "ಕಾಯಕವೇ ಕೈಲಾಸ" ವೆನ್ನುವಷ್ಟು ಉದಾತ್ತ ಭಾವನೆಯಿಂದ ಉಚ್ಚ ಪದವಿಯನ್ನು ಹೊಂದಿತ್ತು. ಈ ಕಾರಣ ವೀರಶೈವ ಸಮಾಜವಾಗ ಸಮೃದ್ಧಿಯಾಗಿತ್ತು. ಆದರೆ ಉನ್ನತಾರ್ಥವುಳ್ಳ ಈ ಕಾಯಕದ ಸಲುವಾಗಿ ವೀರಶೈವರು ಪುನಃ ಪರಿಶ್ರಮವನ್ನೂ ಪ್ರಚಾರವನ್ನೂ ಮಾಡತೊಡಗಿದರೆ 'ಗತವೈಭವಶಾಲಿ'ಗಳೆಂಬ ಹೇಡಿ ಬಿರುದನ್ನಳುಕಿಸಬಹುದಲ್ಲವೆ? ಈ ಉದಾತ್ತ ಮಾರ್ಗವನ್ನು ಸಮಗ್ರ ಭಾರತವೇ ಅನುಮೋದಿಸಿ ಅನುಸರಿಸಬಹುದಲ್ಲವೆ? (ಪಕ್ಷ ವಿಪಕ್ಷಗಳನ್ನು ಸ್ಥಾಪಿಸಿ, ಕಲಹ ಲಂಪಟರಾಗಿ ಕೋರ್ಟುಕಚೇರಿಗಳ ಕಟ್ಟೆಯನ್ನೇರಿಳಿದು, ಸುಳ್ಳು ಸಾಕ್ಷಿಗಳಿಂದ ಸೋತು ಸಾಕಾಗಿರುವ ಇಂದಿನ ಗುರುವಿರಕ್ತರು ಸ್ವಕರ್ತವ್ಯ ಸಂಪಾದನೆಗಾಗಿ ಇತ್ತ ಮನವಿತ್ತು ತನು ತೆತ್ತು ಪುಣ್ಯಶಾಲಿಗಳಾಗಿ ಪೂಜ್ಯರೇಕಾಗಬಾರದು?)

ನಮ್ಮ ಹಿಂದುಸ್ಥಾನದಲ್ಲಿ 'ನಾರೀ ಪ್ರತ್ಯಕ್ಷ ದೇವತಾ" ಎಂದು ಮಹಿಳೆಯರಿಗೆ ಮನ್ನಣೆಯನ್ನೀಯುವ ಉಕ್ತಿಗಳು ದೊರೆಯುತ್ತವೆಯಾದರೂ ಅವರ ಧಾರ್ಮಿಕ ಜೀವನದ ಸ್ವಾತಂತ್ರ್ಯವನ್ನು ನಮ್ಮ ಶಾಸ್ತ್ರಕಾರರು ಬಲು ಮಟ್ಟಿಗೆ ಕೆಳಗಿಟ್ಟಿದ್ದಾರೆ; ತಲೆ ಮೆಟ್ಟಿದ್ದಾರೆ. ಒಮ್ಮೊಮ್ಮೆ ವಿಚಾರಿಸುವುದಾದರೆ, ಬೊಮ್ಮನು ಇವರ ವಿನೋದಕ್ಕಾಗಿ ವಿಹಾರಕ್ಕಾಗಿ ಮಾಡಿಕೊಟ್ಟ ಗೊಂಬೆಯ ಸ್ಥಿತಿಯೇ ಸ್ತ್ರೀಯರ ಗತಿಯಾಗಿರುವದು ಕಂಡುಬರುತ್ತದೆ. ಆದರೆ ವೀರಶೈವ ಮತದಲ್ಲಿ ಮಾತ್ರ ಆ ಸಂಕೋಚಕ್ಕೆ ಎಡೆಯಿಲ್ಲ. ಅವರ ಧಾರ್ಮಿಕ ಸ್ವಾತಂತ್ರ್ಯಕ್ಕೆ ತಡೆಯಿಲ್ಲ. ವೀರಶೈವರು ಜಾತಿಭೇದವನ್ನೆಂತು ಮಾಡಲಾರರೋ ಅಂತೆಯೇ ಧರ್ಮದಲ್ಲಾಗಲಿ, ಕರ್ಮದಲ್ಲಾಗಲಿ, ವಿದ್ಯೆಯಲ್ಲಾಗಲಿ, ವಿವೇಕದಲ್ಲಾಗಲಿ ಸ್ತ್ರೀಪುರುಷರೆಂಬ ಭೇದಭಾವವನ್ನು ಮಾಡುವುದಿಲ್ಲ. ಸ್ತ್ರೀ ಪುರುಷರೆಂಬುದು ಕೇವಲ ಒಂದು ಗುರುತಷ್ಟೆ. ಇದೆ ಕೇಳಿ ವಚನಕಾರನ ಉಪದೇಶವ:— "ಶುಕ್ಲ ಶೋಣಿತ ಪಿಂಡದಲ್ಲಿಯೇ ಉತ್ಪತ್ತಿ. ಚಿತ್ತ ವಾಯು ಪ್ರಾಣ ಅಷ್ಟದಳ ಪದ್ಮದಲ್ಲಿಹುದು. ಮೊಲೆ ಮುಡಿ ಮೂಡಿ



ದರೆ ಹೆಣ್ಣೆಂಬರು. ಗಡ್ಡ ಮೀಸೆಯಾಗಲು ಗಂಡೆಂಬರು. ನಡುವೆ ಸುಳಿವಾತನು ಗಂಡಲ್ಲ, ಹೆಣ್ಣಲ್ಲ. ಇದರಂತುವ ತಿಳಿಯಲ್ಕೆ ಶ್ರುತಿಗಗೋಚರವೆಂದಾತನಂಬಿಗರ ಚೌಡಯ್ಯ" (ಅಂಬಿಗರ ಚೌಡಯ್ಯನ ವಚನ ಪು. ೧೨೪) ಹೆಣ್ಣು ಗಂಡೆಂಬ ಶಬ್ದಗಳು ಉಪಾಧಿವಶದಿಂದ ಬರುತ್ತವೆ. ಆ ಉಪಾಧಿಯಾವುದು, ಎಂದರೆ--- ಮೊಲೆ ಮುಡಿ ಮೂಡಿದರೆ ಹೆಣ್ಣು, ಗಡ್ಡ ಮೀಸೆಯಾಗಲು ಗಂಡು ಎಂಬುದು. ಆದರೆ ಒಳಗೆ ಸುಳಿವಾತ (ಆತ್ಮ) ನು ಈರ್ವರಲ್ಲಿಯೂ ಓರ್ವನೇ, ಆತ ಹೆಣ್ಣಲ್ಲ, ಗಂಡಲ್ಲ. ಕಾರಣ ಧಾರ್ಮಿಕ ವಿಚಾರದಲ್ಲಿ ಭೇದದ ವಾದವೇಕೆ, ಬೋಧೆಯೇಕೆ, ಎಂಬುದು ವೀರಶೈವ ತತ್ವ. "ಇದರಂತುವ ತಿಳಿಯಲ್ಕೆ ಶ್ರುತಿಗಗೋಚರವೆಂದಾತನಂಬಿಗರ ಚೌಡಯ್ಯ" ಎಂಬ ಮಾತಿನಲ್ಲಿ ವಚನಕಾರರು ವೀರಶೈವರ ಈ ಉದಾತ್ತ ವಿಚಾರದ ಉನ್ನತ ತತ್ವದ ಆಳವನ್ನು ಆಧಿಕ್ಯವನ್ನು ಸೂಚಿಸಿದ್ದಾರೆ. ಈ ತತ್ವದ ವಿಕಾಸಕ್ಕೆ ಪ್ರಕಾಶಕ್ಕೆ ಕಾರಣವಾವುದು? ಬಸವಣ್ಣನು ಅನುಭವಮಂಟಪದಲ್ಲಿ ಮಹಾದೇವಿಯಕ್ಕ, ನಾಗಲಾಂಬಿಕೆ, ನೀಲಾಂಬಿಕೆ, ಗಂಗಾಂಬಿಕೆ, ಲಕ್ಕಮ್ಮ ಮೊದಲಾದ ಶಿವಶರಣೆಯರಿಗೆ ಇಂಬುಗೊಟ್ಟು ಶಿವಾನುಭವ ಪ್ರಸಂಗದ ಅವರ ಜಾಣ್ನುಡಿಗಳಿಗೆ ತನು ತೂಗಿ, ಮನ ಬಾಗಿ, ಶರಣರಿಗೆ ಸಮಾನವಾಗಿ, ಇಷ್ಟೇ ಅಲ್ಲ, ಅದಕ್ಕೂ ಹೆಚ್ಚು ಅವರನ್ನು ಎಂದು ಗೌರವಿಸಿದನೋ ಅಂದಿನಿಂದ ಸ್ತ್ರೀ ಸ್ವಾತಂತ್ರ ವಾದವು ವೀರಶೈವರಲ್ಲಿ ಬಳೆದು ಬಂದಿದೆ; ಬಾಳಿ ನಿಂದಿದೆ. ವೀರಶೈವ ಸ್ತ್ರೀಯರಾದರೂ ಸ್ವಾತಂತ್ರ್ಯದ ಉಪಯೋಗವನ್ನು ಯಾವ ರೀತಿಯಲ್ಲಿ ನೀತಿಯಲ್ಲಿ ಬಳೆಯಿಸಿಕೊಂಡಿದ್ದಾರೆಂಬುದಕ್ಕೆ ಈ ಮೇಲೆ ಉದಾಹರಿಸಿದ ಶಿವಶರಣೆಯರ ವಚನಗಳನ್ನು ಅವಶ್ಯವಾಗಿ ಸರ್ವ ಸಮಾಜದ ಮಾತೆಯರೂ ಪರಿಕಿಸಿ ನೋಡಬೇಕು. ಮಹಾದೇವಿಯಕ್ಕನ ಸಾಮರಸ್ಯಜ್ಞಾನ, ಲಕ್ಕಮ್ಮನ ಕರ್ಮಯೋಗದಲ್ಲಿಯ ಕೌಶಲ್ಯ, ಇವುಗಳನ್ನು ಚೆನ್ನಾಗಿ ಪರಾಮರ್ಶಿಸಬೇಕು.

ಹೀಗೆ ಬಸವಣ್ಣನವರು ಹೋದ ಮಾರ್ಗವು ಬಹು ವಿಶಾಲವಾದುದು; ವಿಮಲವಾದುದು. ಅದನ್ನೆಲ್ಲ ಅರಿದ ಆ ಹರಿಹರದೇವನು "ಬಸವಣ್ಣನ ಬಟ್ಟೆ ಬಟ್ಟೆ" (ಬಸವನ ಮಾರ್ಗವೇ ಮಾರ್ಗ) ಎಂದು ಕಹಳೆಯೂದಿದನು. ನಾನಿದು ವರೆಗೂ ಹೇಳಿದಂಥ ವಿಚಾರಗಳಲ್ಲಿ ಬಸವಣ್ಣನವರ ಬಟ್ಟೆಯ ಹೊರಮೈಯಲ್ಲಿಯ ಒಂದು ಅಣುವನ್ನಾದರೂ ಮುಟ್ಟಿರು

ವೆನೋ ಇಲ್ಲವೋ ಇದೇ ನನಗೆ ಧೈರ್ಯವಿಲ್ಲ. ಬಸವಣ್ಣನವರ "ಯೋಗ" ವು ಅತ್ಯಂತ ಮಹತ್ವವಾದುದು. ಅವರದು ನನ್ನಂತಹನಿಂದ ಹೇಳಲು ಬಾರದು. ಲೋಕೋಪಕಾರಕ್ಕಾಗಿ ತೊಡಗಿದ ಬಸವಣ್ಣನವರ ಈ ಎಲ್ಲ ಉದ್ದೇಶಗಳಿಗೆ, ಉಪದೇಶಗಳಿಗೆ ಅದೆಷ್ಟೋ ಜನವಾಗ ಹೊಗಳಿತು; ಎಷ್ಟೋ ಜನವು ತೆಗಳಿತು. ಆದರೆ ಬಸವಣ್ಣನವರು ಮಾತ್ರ

ಮಿಗೆ ಪಳಿವರೆನ್ನನೆನ್ನದೆ ।
ಪೊಗಳ್ವರ್ ನೆರೆದೆಲ್ಲರೆನ್ನನೆನ್ನದೆ ತನ್ನೊಳ್ ॥
ಬಗೆದುಭಯ ಲೋಕಹಿತದೊಳ್ ।
ನೆಗಳ್ಗೆ, ಜನಂ ಪಳಿಗೆ, ಪೊಗಳ್ಗೆ ತನಗೇನದರೊಳ್ ॥

ಎಂಬ ಉದಾತ್ತವೃತ್ತಿಯ ಬಟ್ಟೆ ಹಿಡಿದು, ನಿಷ್ಠೆ ಕೆಡದೆ, ಹೊಗಳಿಕೆ-ತೆಗಳಿಕೆಗಳಿಗೆ, ಮೈಯ್ಯುಣ್ಣದೆ, ಮನನೊಯ್ಯದೆ ನಡೆಯುತ್ತಿರುವಾಗ ಅಂದು ಆ ಮಹಾದೇವನು ಬಂದು ತನಗೆ ಬೇಕೆಂದು ಎತ್ತಿಕೊಂಡು ಅವರನ್ನು ಹೃದಯಕಮಲದಲ್ಲಿ ಐಕ್ಯ ಮಾಡಿಕೊಂಡನು.

— ಶ್ರೀ ಸ. ಹಾ. ಶಿವಮೂರ್ತಿ
ಮು. ಬನಾರಸಸಿಟಿ

---



## ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಸ್ತ್ರೀಯರ ಹಕ್ಕುಗಳು.

ವೀರಶೈವ ಧರ್ಮವಲ್ಲಿರುವ ಅನೇಕ ವೈಶಿಷ್ಟ್ಯಗಳಲ್ಲಿ ಅದು ಸ್ತ್ರೀಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟಿದ್ದು ಅತ್ಯಂತ ಮಹತ್ವದ್ದಿರುತ್ತದೆ. ಅದು ಈ ದೃಷ್ಟಿಯಿಂದ ವ್ಯಾಪಕಸ್ವರೂಪವನ್ನು ಹೊಂದಿದಷ್ಟು ಬೇರೆ ಯಾವ ಹಿಂದೂ ಮತವೂ ಹೊಂದಿರಲಿಕ್ಕಿಲ್ಲ. ವೀರಶೈವ ಧರ್ಮದ ಪ್ರಕಾರ ಸ್ತ್ರೀಪುರುಷರೆಲ್ಲರೂ ಸಮಾನ ಹಕ್ಕುಳ್ಳವರಾಗಿದ್ದಾರೆ. ಈ ವಿಧದ ವಿಚಾರಗಳನ್ನು ವೀರಶೈವ ವಚನಕಾರರು ತಮ್ಮ ಉಕ್ತಿಗಳಲ್ಲಿ ಅತ್ಯಂತ ಸ್ಪಷ್ಟ ರೀತಿಯಿಂದ ವಿವರಿಸಿದ್ದಾರೆ.

ಬಸವೇಶ್ವರನ ಕಾಲದಲ್ಲಿ ಈ ಪ್ರಕಾರ ಸ್ತ್ರೀಯರಿಗೋಸ್ಕರ ಅತ್ಯಂತ ಉದಾರ ಮತ್ತು ಉಚ್ಚಭಾವವನ್ನು ತಾಳಿದ್ದರಿಂದ ಆಗ ಅನೇಕ ಸ್ತ್ರೀಯರು ಧರ್ಮಕಾರ್ಯಗಳಿಗೆ ಪ್ರೇರಣೆ ಹೊಂದಿ ಅವುಗಳಲ್ಲಿ ತೊಡಗಿದ ಉದಾಹರಣೆಗಳು ಅಸಂಖ್ಯವಾಗಿವೆ. ಸ್ತ್ರೀಯರ ಹಕ್ಕುಗಳ ಬಗ್ಗೆ ಶ್ರೇಷ್ಠ ಶಿವಶರಣನಾದ ದೇವರ ದಾಸಿಮಯ್ಯನು ಕೆಳಗೆ ಕಾಣಿಸಿದ ವಚನವನ್ನು ನುಡಿದಿದ್ದು ಬಹು ವಿಚಾರಾರ್ಹವಾಗಿದೆ.

" ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣವಲಿ ಹಿಡಿಗೋಲ ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ ? "

ಈ ವಚನದ ಅರ್ಥವನ್ನು ಒಬ್ಬ ಪುರಾತನ ಟೀಕಾಕಾರನು ಕೆಳಗೆ ಬರೆದಂತೆ ಮಾಡಿದ್ದಾನೆ. ಅದು ಏನೆಂದರೆಃ—

"ಸ್ತ್ರೀಯಳ ಅಂಗದಲ್ಲಿ ಕಚಕುಚಂಗಳಿರ್ದ ಹಾಗೆ ಅವಳ ಪ್ರಾಣಕ್ಕೆ ಕಚಕುಚಂಗಳುಂಟೇ ? ಇಲ್ಲ. ವಿಪ್ರನಂಗದಲ್ಲಿ ಶಿಖಾಯಜ್ಞೋಪವೀತ ಇದ್ದ ಹಾಗೆ, ಆವನ ಪ್ರಾಣಲ್ಲಿ ಶಿಖಾಯಜ್ಞೋಪವೀತವಿಲ್ಲ. ಊರಿಂದ ಹೊರಗಿರ್ದ ಹೊಲೆಯನು ಕೆಯ್ಯಲ್ಲೊಂದಾಯುಧವ ಹಿಡಿದ ಹಾಗೆ ಆತ್ಮನಲ್ಲಿ ಹಿಡಿದಿಪ್ಪನೇ ? ಇಲ್ಲ. ಪರಶಿವನು ತನ್ನಂಶವಾದ ಆತ್ಮಂಗೆ ಶರೀರ ಸಂಬಂಧ ಮಾಡಿರಲು ಹೆಣ್ಣೆಂದು ಗಂಡೆಂದು ವಿಪ್ರನೆಂದು ಹೊಲೆಯನೆಂದು

ನೂರೊಂದು ಕುಲ ಹದಿನೆಂಟು ಜಾತಿಯನುಂಟುಮಾಡಿ ಒಬ್ಬರಿಗೊಬ್ಬರು ಹೋರಾಡುವ ಬಂಧನದ ಈ ಜಗದ ಅಚೇತನರಾದ ಜೀವರು ಎತ್ತ ಬಲ್ಲರು ಅರಿಯರೆಂದರ್ಥ"

ಈ ವಚನ ಭಾವವು ಸ್ಪಷ್ಟವಿದೆ. ಜಗತ್ತಿನಲ್ಲಿ ವಾಡಿಕೆಯಾಗಿ ಜನರು ಸ್ತ್ರೀಪುರುಷರೆಂದು ಭಾವಿಸಿ ಅವರಲ್ಲಿ ಹಿರಿದು ಕಿರಿದೆಂದು ಎಣಿಸುತ್ತಾರೆ. ಅದರಂತೆ ಕುಲ ಹದಿನೆಂಟು ಜಾತಿಗಳನ್ನು ಮಾಡಿಕೊಂಡು ಇಂಥವನು ಕೀಳನು, ಇಂಥವನು ಉಚ್ಚನು ಎಂದು ಹೋರಾಡುತ್ತಲಿರುವರು. ಆದರೆ ಮೇಲ್ಕಂಡ ವಚನಕಾರನು ಅನ್ನುವದೇನಂದರೆ, ಈ ತೆರದ ಭೇದ ಭಾವಗಳು ಮನುಷ್ಯನ. ಬಹಿರಂಗ ಕೃತಿ ಅಥವಾ ಶರೀರಕ್ಕೆ ಸಂಬಂಧಪಟ್ಟವಿರುತ್ತವೆ. ಇವುಗಳು ಕ್ಷಣಿಕವಾದವುಗಳು. ಆದರೆ ಮನುಷ್ಯನ ಪ್ರಾಣವು ಮಾತ್ರ ಪರಮಾತ್ಮನ ಅಂಶವಾದದ್ದರಿಂದ ಅದು ಸ್ಥಿರವಾಗಿ ಬಾಳುವಂಥಾದ್ದು. ಇವರಲ್ಲಿ ಈ ಬಗೆಯ ಭೇದಗಳು ತೋರಿಬರುವದಿಲ್ಲ. ಅದು ಎಲ್ಲರಲ್ಲಿಯೂ ಒಂದೇ ಸ್ವರೂಪದಿಂದ ವಾಸಿಸುತ್ತದೆ. ಅದರ ವಿಕಾಸದ ಮೇಲಿಂದಲೇ ಮನುಷ್ಯನಲ್ಲಿ ತಾರತಮ್ಯ ಭಾವವನ್ನು ಎಣಿಸಬೇಕೇ ಹೊರ್ತು ಅವನ ಬಾಹ್ಯ ಆಚರಣೆ, ಬಾಹ್ಯ ಶರೀರ ಇವುಗಳ ಮೇಲಿಂದ ಎಣಿಸಕೂಡದೆಂದು ಈ ವಚನಕಾರನು ಹೇಳುತ್ತಾನೆ. ಈ ತರದ ವಿಚಾರಗಳನ್ನು ಆಗಮ ಗ್ರಂಥಗಳಲ್ಲಿಯೂ ಕಾಣಬಹುದಾಗಿದೆ.

ಪಾರಮೇಶ್ವರಾಗಮ ೫ ನೇ ಪಟಲದಲ್ಲಿ ಹೇಳಿದುದೇನಂದರೆ:—

ಯೇ ಸಂತಿ ಜಾತಿ ಭೇದಾಸ್ತಾನೇಕವಚ್ಛೈವ ಯೋಗಿನಃ। ಪಶ್ಯೇದಖಿಲ ಜಾತಿಸ್ಥಾನೇಕ ಮಾತೃ ಸಹೋದರಾನ್ ॥ ೪೦ ॥ ನ ಸ್ತ್ರೀಭೇದೋ ನ ಪುಂ ಭೇದೋ ಜಾತಿ ವರ್ಣಾಶ್ರಮಾದಿಕಂ। ಸರ್ವಾತೀತಮಿದಂ ವಿದ್ಧಿ ವೀರಶೈವ ಮತಂ ಮಮ ॥ ೪೧ ॥

ಈ ಉಕ್ತಿಯಲ್ಲಿ ಆಗಮಕಾರನು ವೀರಶೈವ ಧರ್ಮದ ಈ ವೈಶಿಷ್ಟ್ಯವನ್ನು ಬಹು ಚೆನ್ನಾಗಿ ವಿವರಿಸಿರುವನು. ವೀರಶೈವನು ಇತರ ಎಲ್ಲ ಜಾತಿ ಬಾಂಧವರನ್ನು ತನ್ನ ಮಾತೆಯಿಂದ ಜನಿಸಿದವರಂತೆಯೇ ಕಾಣತಕ್ಕದ್ದು. ಇದೇ ಮೇರೆಗೆ ಅವರು ಸ್ತ್ರೀಪುರುಷ ಭೇದವನ್ನೂ ಎಣಿಸತಕ್ಕದ್ದಲ್ಲ. ಜಾತಿ ವರ್ಣಾಶ್ರಮಗಳನ್ನೂ ಹಿಡಿಯತಕ್ಕದ್ದಲ್ಲ. ಇವೆಲ್ಲಕ್ಕೂ



ವೀರಶೈವವು ಮೀರಿದ್ದಿರುತ್ತದೆಂದು ಈ ಆಗಮವು ಹೇಳುತ್ತಿದೆ. ಈ ತತ್ವವನ್ನು ಅನುಸರಿಸಿಯೇ ವೀರಶೈವ ವಚನಕಾರರೂ ಅನೇಕ ವಚನಗಳನ್ನು ರಚಿಸಿದ್ದಾರೆ.

ಆದರೆ ಈ ಬಗೆಯ ವಿಚಾರಗಳು ಬ್ರಾಹ್ಮಣ ಪದ್ಧತಿಯ ಧರ್ಮ ಗ್ರಂಥಗಳಲ್ಲಿ ಕಂಡು ಬರುವದಿಲ್ಲ. ಉಪನಿಷತ್ ಕಾಲದಲ್ಲಿ ಮೇಲ್ಕಂಡ ಬಗೆಯ ಉದಾರ ವಿಚಾರಗಳು ಸಮಾಜದಲ್ಲಿ ರೂಢವಾಗಿದ್ದರೂ ಮುಂದೆ ಅವು ಸ್ಮೃತಿಕಾಲದಲ್ಲಿ ಅಕುಂಚಿತ ಸ್ವರೂಪವನ್ನು ಹೊಂದಿ ಸ್ತ್ರೀಯರಿಗೆ ಮೊದಲಿಗೆ ಇದ್ದ ಉಚ್ಚಸ್ಥಾನವು ಹೋಗಲಾಡಿಸಲ್ಪಟ್ಟಿತು. ಸ್ಮೃತಿಕಾರರು ಸ್ತ್ರೀಯು ಪುರುಷನಿಗೆ ಕೇವಲ ಅಧೀನಳಾಗಿ ವರ್ತಿಸಬೇಕೆಂತಲೂ ಆಕೆಗೆ ವೇದಾಧಿಕಾರವಿಲ್ಲೆಂತಲೂ ಹೇಳಿ ಆಕೆಯು ಕೇವಲ ಶೂದ್ರಳೆಂಬ ವಿಚಾರಗಳನ್ನು ಪ್ರಸಾರಮಾಡಹತ್ತಿದರು. ಸ್ತ್ರೀಯರ ನಿಜ ಧರ್ಮವೆಂದರೆ ಕೇವಲ ಪತಿಯನ್ನಾಶ್ರಯಿಸಿ ಅವನ ಸೇವೆಯಲ್ಲಿ ಕಾಲಕಳೆಯುವದೇ ಇರುತ್ತದೆಂಬ ವಿಚಾರಗಳು ಸಮಾಜದಲ್ಲಿ ರೂಢವಾಗುತ್ತ ಹೋದವು. ಇದರಿಂದ ಈ ಕಾಲಕ್ಕೆ ಹಿಂದೂ ಸಮಾಜವು ಮುಂದುವರಿಯುವ ಸ್ಥಿತಿಯನ್ನು ಹೋಗಲಾಡಿಸಿಕೊಂಡು ಹಿಂದೆಗೆಯಹತ್ತಿತೆಂದು ಹೇಳಬಹುದು.

ಆದರೆ ವೀರಶೈವ ಧರ್ಮದಲ್ಲಿ ಹೀಗಿರದೆ ಅದು ಸ್ತ್ರೀಯರಿಗೆ ಪುರುಷನಷ್ಟೇ ಸಾಮಾಜಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟಿರುವದು. ಇದಕ್ಕೆ ಸ್ತ್ರೀಯರಿಗೆ ಲಿಂಗಧಾರಣೆ ಇರುವದೇ ಮುಖ್ಯ ಗುರುತಾಗಿದೆ. ಸ್ತ್ರೀಯಳು ಗುರುವಿನಿಂದ ಹೀಗೆ ಲಿಂಗಧಾರಣೆಯನ್ನು ಹೊಂದಿದ ಬಳಿಕ ಆಕೆಯು ಷಟ್‌ಸ್ಥಲ ಶಾಸ್ತ್ರವನ್ನು ಅಭ್ಯಾಸ ಮಾಡಿ ಅವರ ತತ್ವಗಳಿಗನುಸರಿಸಿ ತನ್ನ ಧಾರ್ಮಿಕ ವಿಕಾಸವನ್ನು ಮಾಡಿಕೊಳ್ಳುವದು ಆಕೆಯ ಕಾರ್ಯವಾಗಿರುತ್ತದೆ. ಈ ವಿಕಾಸಯನ್ನು ಆಕೆಯು ಸ್ವಪ್ರಯತ್ನದಿಂದಲೇ ಜರಗಿಸಿಕೊಳ್ಳತಕ್ಕದ್ದು. ಇದರಲ್ಲಿ ಆಕೆಯು ತನ್ನ ಗಂಡನ ಮೇಲೆ ಅವಲಂಬಿಸುವ ಕಾರಣವಿಲ್ಲ. ಅವನು ಮಾಡುವ ಕ್ರಿಯಾ ಕರ್ಮಗಳ ಫಲವನ್ನು ಅವನೇ ಭೋಗಿಸುವನೇ ಹೊರ್ತು ಅದರಲ್ಲಿ ಹೆಂಡತಿಯ ಪಾಲು ಇರಲಾರದು. ಆದ್ದರಿಂದ ಸ್ತ್ರೀಯು ಲಿಂಗಧಾರಣೆಯನ್ನು ಹೊಂದಿದ ಬಳಿಕ ಷಟ್‌ಸ್ಥಲದ ಮೆಟ್ಟಿಲುಗಳನ್ನು ಸ್ವಸಾಮರ್ಥ್ಯದಿಂದಲೇ ಹತ್ತುತ್ತ ಮುಂದೆ ಹೋಗಬೇಕು. ಆರಂಭದಲ್ಲಿ ಆಕೆಯು ಭಕ್ತ ಮಾಹೇಶ್ವರ ಸ್ಥಲಗಳನ್ನು

ಹೊಂದಿ, ಮುಂದೆ ಪ್ರಸಾದಿ ಪ್ರಾಣಲಿಂಗಿ ಸ್ಥಲಗಳನ್ನು ಒಳಕೊಂಡು, ತರುವಾಯ ಶರಣೆಯಾಗಿ ಐಕ್ಯಸ್ಥಿತಿಯನ್ನು ಹೊಂದಲು ಬಾಧ್ಯಳಾಗಿರುವಳು. ಆದ್ದರಿಂದ ಸ್ತ್ರೀಯು ಕಡಿಮೆ ಮತ್ತು ಪುರುಷನು ಹೆಚ್ಚು ಎಂಬ ಭಾವವೇ ವೀರಶೈವ ಧರ್ಮದಲ್ಲಿ ಇರುವದಿಲ್ಲ.

ಶ್ರೀ ಬಸವೇಶ್ವರನು ತನ್ನ ಒಂದು ವಚನದಲ್ಲಿ ಅಂದಿರುವದೇನೆಂದರೆ: —

" ಗಂಡ ಶಿವಲಿಂಗದೇವರ ಭಕ್ತ. ಹೆಂಡತಿ ಕೊಂಬುದು ಸುರೆಮಾಂಸ. ಭಾಂಡಭಾಜನ ಶುದ್ಧಿ ಇಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗ ತೊಳೆದಂತೆ ಕೂಡಲಸಂಗಮದೇವಾ."

ಇದರಲ್ಲಿ ಬಸವೇಶ್ವರನು ಪತಿಯು ತನ್ನ ಪತ್ನಿಯೊಡನೆ ಯಾವ ರೀತಿಯಾಗಿ ವರ್ತಿಸಬೇಕೆಂಬುದನ್ನು ಬಹು ಸರಸಾಗಿ ವ್ಯಕ್ತಪಡಿಸಿದ್ದಾನೆ. ಪತಿಯು ತನ್ನ ಸ್ತ್ರೀಯಳನ್ನು ಯಾವಾಗಲೂ ಒಳಕೊಂಡು ವರ್ತಿಸಬೇಕಾದುದರಿಂದ ಆಕೆಯನ್ನು ಶುದ್ಧ ಧಾರ್ಮಿಕ ವರ್ತನೆಗೆ ಹೊರತಾಗಿ ಇಟ್ಟು ತಾನೊಬ್ಬನೇ ಭಕ್ತನಂತೆ ಆಚರಿಸಿದರೆ ಇದು ಹೆಂಡವನ್ನು ತಂದು ಒಂದು ಗಡಿಗೆಯಲ್ಲಿಟ್ಟು ಅದು ಶುದ್ಧವಾಗಬೇಕೆಂದು ಅದನ್ನು ಹೊರಗೆ ತೊಳೆದಂತೆಯೇ ಸರಿ ಎಂದು ನುಡಿದಿದ್ದಾನೆ. ಇದರಿಂದ ಸ್ತ್ರೀಯು ಕೇವಲ ಒಂದು ತ್ಯಾಜ್ಯವಸ್ತು ಅಥವಾ ಒಂದು ಭೋಗ್ಯವಸ್ತು ಎಂದು ತಿಳಿದು ಹೇಗೆ ಬ್ರಾಹ್ಮಣ ಶಾಸ್ತ್ರಗಳು ಅವಳನ್ನು ವರ್ಣಿಸುತ್ತವೆಯೋ ಹಾಗೆ ವೀರಶೈವ ಧರ್ಮಗ್ರಂಥಗಳು ಆಕೆಯನ್ನು ವರ್ಣಿಸದೆ ಅವಳಿಗೆ ಅವು ಅತ್ಯಂತ ಶ್ರೇಷ್ಠಸ್ಥಾನವನ್ನು ಕೊಟ್ಟಿರುತ್ತವೆ.

ಬಸವೇಶ್ವರನಂತೆ ಇನ್ನೂ ಅನೇಕ ವಚನಕಾರರು ಇದೇ ಅಭಿಪ್ರಾಯವನ್ನು ಸಮರ್ಥಿಸಿರುತ್ತಾರೆ. ದೇವರ ದಾಸಿಮಯ್ಯನು ತನ್ನ ಒಂದು ವಚನದಲ್ಲಿ ಅನ್ನುವದೇನಂದರೆ:—

" ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ "



ಇದರಲ್ಲಿ ತನ್ನ ಸ್ತ್ರೀಯಳ ಸುಧಾರಣೆಯ ವಿಷಯದಲ್ಲಿ ಗಂಡನ ಮೇಲೆ ಎಷ್ಟು ಮಹತ್ತರ ಜವಾಬುದಾರಿಯು ಇರುತ್ತದೆಂಬುದನ್ನು ವಚನಕಾರನು ಬಹಳ ಚೆನ್ನಾಗಿ ಉಲ್ಲೇಖಿಸಿರುತ್ತಾನೆ. ಯಾವನು ಹೀಗೆ ವರ್ತಿಸದೆ ತನ್ನ ಸ್ತ್ರೀಯಳು ಅಧರ್ಮದಿಂದ ನಡೆಯಲು ಅವಕಾಶ ಕೊಡುತ್ತಾನೋ ಅವನು ಮಾಡುವ ಭಕ್ತಿ ಎಲ್ಲವೂ ವ್ಯರ್ಥವೆಂದು ಈತನ ಭಾವವು. ಅವನು ಪುನಃ ಮತ್ತೊಂದೆಡೆಯಲ್ಲಿ ಅನ್ನುವದೇನೆಂದರೆ:—

" ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ ದಂಪತಿ ಏಕ ಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು "

ಇದರಲ್ಲಿ ವಚನಕಾರನು ದಂಪತಿಗಳನ್ನು ಎರಡು ಕಣ್ಣುಗಳಿಗೆ ಹೋಲಿಸಿ ಹೇಗೆ ಈ ಕಣ್ಣುಗಳಲ್ಲೊಂದು ಲೋಪವಾದಲ್ಲಿ ನೋಡುವ ಕಾರ್ಯವು ಸರಿಯಾಗಿ ಜರಗಲಾರದೋ ಹಾಗೆಯೇ ತನ್ನ ಸ್ತ್ರೀಯಳು ಅಧರ್ಮದಲ್ಲಿದ್ದರೆ ಪುರುಷನು ಮಾಡುವ ಧರ್ಮವು ಕೆಟ್ಟು ಹೋಗುವದೆಂದು ವಿವರಿಸಿದ್ದಾನೆ.

" ಗಂಡ ಭಕ್ತನಾಗಿ, ಹೆಂಡತಿ ಭವಿಯಾದರೆ ಉಂಡ ಊಟ ಇಬ್ಬರಿಗೂ ಸರಿಭಾಗ. ಸತ್ತನಾಯ ತಂದು ಅಟ್ಟದ ಮೇಲಿಳುಹಿ ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ ಕಾಣಾ ರಾಮೂನಾಥಾ "

ಈ ವಚನದಲ್ಲಿಯೂ ಕೂಡ ಇದೇ ಭಾವವು ವ್ಯಕ್ತವಾಗಿದ್ದು, ಹೆಂಡತಿಯು ಅನಾಚಾರಿಯಾಗಿ ವರ್ತಿಸಿದರೆ ಉಭಯ ದಂಪತಿಗಳು ಒಂದು ಸತ್ತ ನಾಯನ್ನು ತೆಗೆದುಕೊಂಡು ಹೋಗಿ ಪ್ರತಿಯೊಬ್ಬರು ಅದನ್ನು ಅರ್ಧ ಅರ್ಧ ತಿಂಬಂತೆಯೇ ಎಂದು ಹೇಳಿದ್ದಾನೆ.

ಬ್ರಾಹ್ಮಣ ಧರ್ಮಗ್ರಂಥಗಳು ಸತಿಗೆ ಪತಿಯೇ ದೈವವೆಂದು ಪ್ರತಿಪಾದಿಸಿ ಅವನ ಸೇವೆಯನ್ನೇ ಅವಳು ಮಾಡಬೇಕು, ಅದೇ ಆಕೆಯ ಮುಖ್ಯ ಧರ್ಮವು ಎಂದು ಬಹು ಕಠೋರವಾಗಿ ಹೇಳುವದುಂಟು. ಆದರೆ ಈ ತತ್ವಗಳು ವೀರಶೈವ ಸ್ತ್ರೀಧರ್ಮಕ್ಕೆ ಹೊರತಾದವುಗಳು. ಈ ಧರ್ಮದ ಪ್ರಕಾರ ಸ್ತ್ರೀಯಳಿಗೆ ಲಿಂಗಧಾರಣವಿರುವದರಿಂದ, ಆಕೆಯು ತನ್ನ ಲಿಂಗದೊಡನೆ ಸತಿಪತಿ ಭಾವದಿಂದ ವರ್ತಿಸತಕ್ಕದ್ದು. ಆಕೆಗೆ ಲಿಂಗವೇ ನಿಜವಾದ ಪತಿಯು. ಆ ಲಿಂಗದಿಂದಲೇ ಆಕೆಯು ಮೋಕ್ಷ

ಪದವನ್ನು ಹೊಂದತಕ್ಕದ್ದು. ವೀರಶೈವನು ಲಿಂಗಧಾರಿಯಾದ ಬಳಿಕ ಅವನು ತನ್ನ ಲಿಂಗದೊಡನೆ ಸತಿಪತಿ ಭಾವದಿಂದ ವರ್ತಿಸಬೇಕೆಂದು ವೀರಶೈವ ಶಾಸ್ತ್ರಗಳು ಉದ್ಘೋಷಿಸುತ್ತವೆ. ಅನೇಕ ವಚನಕಾರರು ಈ ದೃಷ್ಟಿಯನ್ನಿಟ್ಟುಕೊಂಡು ಅಸಂಖ್ಯ ಸತಿಪತಿ ಭಾವದ ವಚನಗಳನ್ನು ರಚಿಸಿದ್ದಾರೆ. ಈ ತತ್ವವಾದರೂ ಸ್ತ್ರೀಯಳಿಗೂ ಅನ್ವಯಿಸುತ್ತದೆ. ಆದ್ದರಿಂದ ಅವಳು ತನಗೆ ಲಿಂಗವೇ ಪತಿ ಎಂದು ತಿಳಿದು ಅದರೊಡನೆ ಅತ್ಯಂತ ಭಕ್ತಿಯುತಳಾಗಿ ವರ್ತಿಸುವದು ಅವಳ ಕರ್ತವ್ಯವಾಗಿದೆ. ಹೀಗೆ ಆಕೆಯು ನಡೆಯದೆ ಹೋದರೆ ಆಕೆಯ ಷಟ್‌ಸ್ಥಲಾಚರಣೆಯು ಕಾರ್ಯಗಳಿಗೆ ಭಂಗವು ಉಂಟಾಗುವದು. ಈ ವಿಷಯವಾಗಿ ಅಲ್ಲಮಪ್ರಭುವು ತನ್ನ ಒಂದು ವಚನದಲ್ಲಿ ಹೇಳಿರುವದೇನೆಂದರೆ:—

“ಸತಿ ಭಕ್ತಿಯಾದಡೆ ಹೊಲೆಗಂಜಲಾಗದು. ಸತಿ ಪತಿ ಎಂಬ ಅಂಗ ಸುಖ ಹಿಂಗಿ ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೇ? ಪತಿಗೆ ಸತಿಯುಂಟೇ ? ಪಾಲುಂಡು ಮೇಲುಂಬರೇ ಗುಹೇಶ್ವರಾ? ”

ಈ ಪ್ರಕಾರ ಸ್ತ್ರೀಯಳು ಬಾಹ್ಯ ಅಂಗಭೋಗಗಳನ್ನು ತ್ಯಜಿಸಿ ಲಿಂಗಭೋಗಿಯಾಗಿ ವರ್ತಿಸುವದು ಅವಳ ಕರ್ತವ್ಯವಾಗಿರುತ್ತದೆ. ಹೀಗೆ ವರ್ತಿಸುವ ಸತಿಗೆ ಲಿಂಗವೇ ಪತಿಯು. ಅವುಗಳಿಗೆ ಬಾಹ್ಯ ಅಂಗಭೋಗದ ಪತಿಯು ನಿಜವಾದ ಪತಿಯಲ್ಲ. ಅವಳು ಒಂದು ವೇಳೆ ಆತನೇ ತನ್ನ ನಿಜವಾದ ಪತಿ ಎಂದು ಭಾವಿಸಿ ವರ್ತಿಸಿದರೆ, ಇದು ಹಾಲು ಉಂಡ ಬಳಿಕ ಮೇಲುಂಡಂತೆ ಎಂದು ಅಲ್ಲಮಪ್ರಭುವು ಹೇಳಿರುವನು. ವೀರಶೈವರಲ್ಲಿ ಈ ವಿಚಾರಗಳು ಇರುವದರಿಂದ ಸ್ತ್ರೀ ಪುರುಷರಲ್ಲಿ ಹೆಚ್ಚು ಕಡಿಮೆ ಭಾವಗಳು ಉಂಟಾಗಿರುವದಿಲ್ಲ.

ಈ ವಿಚಾರಗಳು ಷಟ್‌ಸ್ಥಲದಲ್ಲಿ ಇರುವದರಿಂದ. ಬ್ರಾಹ್ಮಣ ಸಮಾಜ ಮತ್ತು ವೀರಶೈವ ಸಮಾಜ ಇವುಗಳಲ್ಲಿಯ ರೂಢಿಗಳಲ್ಲಿ ಮಹದಂತರ ವುಂಟಾಗಿರುತ್ತದೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾನು ಇಲ್ಲಿ ವಿವರಿಸುತ್ತೇನೆ.

ಬ್ರಾಹ್ಮಣ ಶಾಸ್ತ್ರಗಳಲ್ಲಿ ಸ್ತ್ರೀಯು ಲಗ್ನವಾಗಲೇಬೇಕು. ಆಕೆಯು ಅವಿವಾಹಿತಳಾಗಿ ಎಂದೂ ಉಳಿಯಕೂಡದು. ಒಂದು ವೇಳೆ ಹೀಗೆ ಉಳಿ



S. S. High School, Belgaum
Regd No.: 50/124
Section Lit
Dt:
LIBRARY

ದಲ್ಲಿ ಆಕೆಗೆ ಮೋಕ್ಷವು ಎಂದೂ ಉಂಟಾಗಲಾರದೆಂಬ ಸಿದ್ಧಾಂತಗಳು ಉಂಟಾಗಿರುತ್ತವೆ. ಆದರೆ ಇವುಗಳು ಷಟ್‌ಸ್ಥಲ ಶಾಸ್ತ್ರಕ್ಕೆ ಸಮ್ಮತವಾದವುಗಳಲ್ಲ. ಯಾಕಂದರೆ ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಸ್ತ್ರೀಯು ತನ್ನ ಸ್ವಂತ ಆಚರಣೆಯಿಂದ ಮೋಕ್ಷಪದವನ್ನು ಹೊಂದುವವಳಾದ್ದರಿಂದ, ಆಕೆಯು ಗಂಡನನ್ನು ಮಾಡಿಕೊಳ್ಳಲೇಬೇಕೆಂಬ ನಿರ್ಬಂಧವಿರಲಾರದು. ಆಕೆಯು ಲಗ್ನವಾಗುವದು ಆಕೆಯ ಇಚ್ಛೆಯ ಮೇಲೆ ಇರುತ್ತದೆ. ವೀರಶೈವ ಸ್ತ್ರೀಪುರುಷರು ಯಾವಾಗಲೂ ಲಿಂಗಭೋಗೋಪಭೋಗಿಗಳಾಗಿ ತಮ್ಮ ಧರ್ಮಾಚಾರಗಳನ್ನು ನಿರ್ವಹಿಸುವದು ಮುಖ್ಯ ತತ್ವವಾಗಿದ್ದರಿಂದ ಸ್ತ್ರೀಯಳು ಲಗ್ನವಾಗಬೇಕೆಂಬ ಇಚ್ಛೆಯು ಪೂರ್ತಿಯಾಗದೆ ಇದ್ದಲ್ಲಿ ಅವಳ ಲಿಂಗಧ್ಯಾನಕ್ಕೆ ಬಾಧೆಯುಂಟಾಗುತ್ತದೆ. ಆಗ ಆಕೆಯು ಲಗ್ನವಾಗಿ ಲಿಂಗಾರ್ಪಣಭಾವದಿಂದ ತನ್ನ ಇಚ್ಛೆಯನ್ನು ಪೂರೈಸಿಕೊಂಡು ಲಿಂಗಧ್ಯಾನದಲ್ಲಿ ಆಸಕ್ತಳಾಗಿರತಕ್ಕದ್ದು. ಒಂದು ವೇಳೆ ಅವಳು ಲಗ್ನವಾಗದೆ ಇರುವಷ್ಟು ದೃಢ ಮನಸ್ಸಿನವಳಾಗಿದ್ದರೆ, ಅವಳು ಲಗ್ನವಾಗುವದನ್ನು ಬಿಟ್ಟುಕೊಡಬಹುದು. ಆದ್ದರಿಂದ ವೀರಶೈವ ಸ್ತ್ರೀಯಳು ಲಗ್ನವಾಗುವದು ಅಥವಾ ಬಿಡುವದು ಆಕೆಯ ಇಚ್ಛೆಯ ಮೇಲೆ ಇರುತ್ತದೆ. ಹೀಗೆ ಈ ವಿಷಯದಲ್ಲಿ ಬ್ರಾಹ್ಮಣ ಸ್ತ್ರೀಗೂ ವೀರಶೈವ ಸ್ತ್ರೀಗೂ ಮಹದಂತರವಾಗಿರುತ್ತದೆ.

ಈ ವಿಚಾರಗಳ ಮೂಲಕ ವೀರಶೈವ ಸ್ತ್ರೀಯಳು ಸ್ವತಂತ್ರಳಾಗಿರುತ್ತಾಳೆ. ಬಸವೇಶ್ವರನ ಕಾಲದಲ್ಲಿ ಈ ತರದ ಸ್ವಾತಂತ್ರ್ಯವು ಅವಳಿಗೆ ಸಂಪೂರ್ಣವಾಗಿ ಸಲ್ಲುತ್ತಿದ್ದುದರಿಂದ ಆಗ ಅನೇಕ ಸ್ತ್ರೀಯರು ಅವಿವಾಹಿತರಾಗಿ ಉಳಿದು ಕೇವಲ ಧರ್ಮ ಕೃತ್ಯಗಳಲ್ಲಿ ತಮ್ಮ ಆಯುಷ್ಯವನ್ನು ಕಳೆದಿದ್ದು ತೋರಿಬರುತ್ತಿದೆ. ಇಂಥ ಸ್ತ್ರೀಯರಲ್ಲಿ ಮಹಾದೇವಿಯಕ್ಕ, ಬೊಂತಾದೇವಿ ಮೊದಲಾದವರು ಅತ್ಯಂತ ಪ್ರಸಿದ್ಧರಾಗಿರುವರು. ಈ ಉಭಯತರು ಕಡೆಯ ವರೆಗೂ ಅವಿವಾಹಿತರಾಗಿ ಉಳಿದು ಧರ್ಮತತ್ವ ವ್ಯಾಸಂಗದಲ್ಲಿಯೇ ತಮ್ಮ ಕಾಲ ಕಳೆದರು. ಹಾಗೆಯೇ ವರದಾನಿ ಗುಡ್ಡಮ್ಮೆಯು ಕೆಲವು ಕಾಲ ಕನ್ನಿಕೆಯಾಗಿ ಉಳಿದು ಆ ಮೇಲೆ ಲಗ್ನವಾಗಿ ವೀರಶೈವ ಧರ್ಮಪ್ರಸಾರ ಕಾರ್ಯದಲ್ಲಿ ತನ್ನ ಶೌರ್ಯ ಧೈರ್ಯಗಳನ್ನು ತೋರಿಸಿದಳು. ಮಹಾದೇವಿಯಕ್ಕನು ಒಂದೆಡೆಗೆ ಹೇಳಿರುವದೇನಂದರೆ:—

"ಕಾಮಾರಿಯ ಗೆಲಿವೆನು ಬಸವ ನಿಮ್ಮ ದಯದಿಂದ. ಸೋಮಧರನ ಹಿಡಿತಪ್ಪೆನು ಬಸವ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡುರೂಪು. ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಎರಡುವರಿಯದೆ ಕೂಡಿವೆನು ಬಸವ ನಿಮ್ಮ ಕೃಪೆಯಿಂದ."

ಇದರಲ್ಲಿ ಮಹಾದೇವಿಯಕ್ಕನು ತಾನು ಸ್ತ್ರೀಯಳಾದರೇನು? ಪುರುಷನಂತೆಯೇ ಸಾಮರ್ಥ್ಯವುಳ್ಳವಳು. ತನ್ನ ಗುರುವಾದ ಬಸವೇಶ್ವರನ ದಯೆಯಿಂದ ನಾನು ಪರಮಾತ್ಮನನ್ನು ಕೂಡೇ ತೀರುವೆನೆಂದು ಅತ್ಯಂತ ದೃಢಭಾವದಿಂದ ಹೇಳಿದ್ದಾಳೆ.

ಈ ಮೇರೆಗೆ ವೀರಶೈವರಲ್ಲಿ ಸ್ತ್ರೀಯಳು ಅವಿವಾಹಿತಳಾಗಿ ಉಳಿಯಲಿಕ್ಕೆ ಅನುಕೂಲವಿರುವದರಿಂದ ಆಕೆಯ ಇಹಲೋಕದ ಪತಿಯು ಮರಣ ಹೊಂದಿದರೆ ಆಕೆಗೆ ವೈಧವ್ಯವು ಪ್ರಾಪ್ತವಾಯಿತೆಂದು ಅವಳಿಗೆ ಕುಂದಿಡ ಕೂಡದು. ಇದರಿಂದ ಆಕೆಯ ಅಧಿಕಾರಗಳೂ ಮಹತ್ವವೂ ಕಡಿಮೆಯಾಗಲಾರವು. ಆದರೆ ಬ್ರಾಹ್ಮಣ ಗ್ರಂಥಗಳಲ್ಲಿ ವಿಧವೆಯು ಅಶುಭಳೆಂದೂ ಅವಳು ಸಾಮಾಜಿಕ ಮತ್ತು ಧಾರ್ಮಿಕ ವ್ಯವಹಾರಗಳಲ್ಲಿ ತ್ಯಾಜ್ಯಳೆಂದೂ ವಿಧಿಗಳಿರುತ್ತವೆ. ಈ ವಿಚಾರಗಳು ಷಟ್‌ಸ್ಥಲ ಶಾಸ್ತ್ರಕ್ಕೆ ಸಮ್ಮತವಲ್ಲವು. ಯಾಕಂದರೆ ಪತಿಯು ಕಾಲವಾದ ಮಾತ್ರದಿಂದ ವೀರಶೈವ ಸ್ತ್ರೀಯಳು ಲಿಂಗಧಾರಿಯಾದ್ದರಿಂದ ಅವಳಿಗೆ ವೈಧವ್ಯವು ಪ್ರಾಪ್ತವಾಗಲಾರದು. ಎಲ್ಲಿಯ ವರೆಗೆ ಶಿವ ಚಿನ್ಹವು ಅವಳ ದೇಹದ ಮೇಲೆ ಇರುತ್ತದೆಯೋ ಅಲ್ಲಿಯ ವರೆಗೆ ಅವಳು ಅಶುಭಳೆಂದು ಹೇಳಲಿಕ್ಕೆ ಬರಲಾರದು. ಆದ್ದರಿಂದ ಈ ವಿಷಯದ ಬಗ್ಗೆ ಒಬ್ಬ ವಚನಕಾರನು ಅನ್ನುವದೇನಂದರೆ:—

"ಶಿವಭಕ್ತರು ತಮ್ಮ ನಿಜಕೈಲಾಸಕ್ಕೆ ಹೋದಡೆ, ಅವರರಸಿಯ ಪಾರ್ವತಿಯ ಸರಿ ಎಂದು ಕಾಣಬೇಕು. ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ ಮಾತನಾಡುವ ಕಟಕಿಗಳನೇನೆಂಬೆ ರಾಮನಾಥಾ?"

ಈ ವಚನದಲ್ಲಿ ವೀರಶೈವ ವಿಧವೆಯು ಪಾರ್ವತಿಗೆ ಸಮಾನಳೆಂದು ಭಾವಿಸಬೇಕೆಂದು ಹೇಳಿದೆ. ಹೀಗೆ ಭಾವಿಸದೆ ಆಕೆಯನ್ನು ತಿರಸ್ಕಾರ



ಭಾವದಿಂದ ಕಂಡು ಸೊಕ್ಕಿನಿಂದ ಮಾತನಾಡಿದಲ್ಲಿ ಇಂಥವರು ನರಕಕ್ಕೆ ಭಾಜನರಾಗುವರೆಂದು ಈ ವಚನಕಾರನು ನುಡಿದಿದ್ದಾನೆ. ಆದ್ದರಿಂದ ವೀರಶೈವ ಸ್ತ್ರೀಯಳು ವಿಧವೆಯಾದರೂ ಕೂಡ ಸದಾ ಪೂಜ್ಯಳಾಗಿರುವಳು.

ಷಟ್‌ಸ್ಥಲ ಶಾಸ್ತ್ರದಲ್ಲಿ ಈ ವಿಚಾರಗಳಿರುವದರಿಂದ ಸ್ತ್ರೀಯು ಪ್ರತ್ಯಕ್ಷ ದೇವತೆಯು, ಇಷ್ಟೇ ಅಲ್ಲ, ಒಬ್ಬ ವಚನಕಾರನು ಆಕೆಯು ಪ್ರತ್ಯಕ್ಷ ಪರಮಾತ್ಮ ಸ್ವರೂಪಳೆಂದೇ ಭಾವಿಸಿ ಈ ಕೆಳಗಿನ ವಚನವನ್ನು ನುಡಿದಿದ್ದಾನೆ. ಅವನು (ಸಿದ್ಧರಾಮೇಶ್ವರನು) ಅನ್ನುವದೇನಂದರೆ:—

"ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು. ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ."

ಇತರ ಮತಸ್ತರು ಯಾವ ಕಾರಣಗಳನ್ನು ತೋರಿಸಿ ಸ್ತ್ರೀಯು ರಾಕ್ಷಸಿ ಎಂದು ಹೇಳಲು ಮುಂದುವರಿಯುತ್ತಾರೋ, ಅವೇ ಕಾರಣಗಳನ್ನು ಈ ವಚನಕಾರನು ಮುಂದು ಮಾಡಿ ಸ್ತ್ರೀಯಳು ಪ್ರತ್ಯಕ್ಷ ಪರಬ್ರಹ್ಮ ಸ್ವರೂಪಳೆಂದು ಈ ವಚನದಲ್ಲಿ ಹೇಳಿದ್ದಾನೆ. ಇದರ ಮೇಲಿಂದ ವಚನಕಾರರು ಸ್ತ್ರೀಯಳಿಗೆ ಎಷ್ಟು ಉಚ್ಚ ಸ್ಥಾನವನ್ನು ಕೊಟ್ಟಿದ್ದಾರೆಂಬುದು ಸ್ಪಷ್ಟವಾಗುತ್ತದೆ.

ಬಸವೇಶ್ವರನ ಕಾಲದಲ್ಲಿ ಈ ಪ್ರಕಾರ ಸ್ತ್ರೀಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯತೆಯನ್ನು ಕೊಟ್ಟದ್ದರಿಂದ ಆ ಕಾಲಕ್ಕೆ ಅನೇಕ ಶಿವಶರಣೆಯರು ಉತ್ಪನ್ನರಾಗಿ ವೀರಶೈವ ಮತವನ್ನು ಪ್ರಸಾರಪಡಿಸಿದರು. ಮತ್ತು ಅವರಲ್ಲಿ ಅನೇಕರು ಮತಗ್ರಂಥಗಳನ್ನು ಸಹ ರಚಿಸಿದರು. ಇಂಥವರಲ್ಲಿ ಮಹಾದೇವಿಯಕ್ಕ, ನೀಲಾಂಬಿಕೆ, ಅಕ್ಕನಾಗಲಾಂಬಿಕೆ, ಸತ್ಯಕ್ಕ, ಮಹಾದೇವಿಯಮ್ಮ, ಲಕ್ಕಮ್ಮ ಮೊದಲಾದವರು ಪ್ರಸಿದ್ಧರಾಗಿದ್ದಾರೆ.

ಆದರೆ ಸ್ತ್ರೀ ವಿಷಯಕವಾಗಿ ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ಉಂಟಾಗಿರುವ ಮಹದಂತರವನ್ನು ವಾಚಕರು ಲಕ್ಷಕ್ಕೆ ತರುವನು.

ಅವಶ್ಯವಾಗಿದೆ. ಈಗ ನಮ್ಮ ಸಮಾಜದವರು ಬ್ರಾಹ್ಮಣೀ ಧರ್ಮದ ಅಕುಂಚಿತ ವಿಚಾರಗಳನ್ನು ಅನುಕರಣ ಮಾಡುವವರಲ್ಲಿ ತೊಡಗಿದ್ದಾರೆ. ಆದ್ದರಿಂದ ಇವರು ಸ್ತ್ರೀಯರಿಗೆ ಇರುವ ಸ್ವಾಭಾವಿಕ ಅಧಿಕಾರಗಳನ್ನು ಹೊಡೆದುಹಾಕಿ, ಅವರ ಧಾರ್ಮಿಕ ಮತ್ತು ಸಾಮಾಜಿಕ ಶ್ರೇಷ್ಠತೆಗೆ ಕುಂದು ತರುವವರಾಗಿದ್ದಾರೆ. ಇದಕ್ಕೆ ಈಗಿನ ವೀರಶೈವರಲ್ಲಿ ನಿಜವಾದ ಷಟ್‌ಸ್ಥಲ ಜ್ಞಾನವಿಲ್ಲದ್ದೇ ಮುಖ್ಯ ಕಾರಣವೆಂದು ಹೇಳಬಹುದು.

ರಾ॥ ಬ॥ ಫ. ಗು. ಹಳಕಟ್ಟಿ
ಬಿ. ಎ. ಎಲ್. ಎಲ್. ಬಿ. ವಿಜಾಪುರ

---



## ಕನ್ನಡ ಸಾಹಿತ್ಯಕ್ಕೆ ಬಸವಣ್ಣನವರ ಕಾಣಿಕೆ.

ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ಮಾಡಿದ ಸೇವೆ ಅಪಾರವಾದುದು. ಅವರು ಕನ್ನಡ ಭಾಷಾಸೇವೆಯನ್ನು ತಾವೂ ಮಾಡಿದುದಲ್ಲದೆ, ತಮ್ಮ ಅನಂತಾನಂತ ಅನುಯಾಯಿಗಳ ಕೈಯ್ಯಲ್ಲಿ ಮಾಡಿಸಿದರು. ಬಸವಣ್ಣನವರು ವಚನ ಸಾಹಿತ್ಯವೆಂಬ ಒಂದು ನೂತನ ಸಾಹಿತ್ಯವನ್ನು ಸೃಷ್ಟಿಸಿ ರೂಢಿಗೆ ತಂದು, ಬೇರೆ ಬೇರೆ ಶಿವಶರಣರ ಮುಖದಿಂದ ಹೊರಟ ಎರಡೆಂಬತ್ತುಕೋಟಿ ವಚನಗಳಿಗೆ ಕಾರಣರಾಗಿದ್ದಾರೆ. ಬಸವಣ್ಣನವರು ಕನ್ನಡ ಭಾಷೋದ್ಧಾರಕರಷ್ಟೇ ಅಲ್ಲ, ಅವರು ಕನ್ನಡ ಬಾಷಾ ಜನಕರೂ ಹೌದು. ಈ ರೀತಿ ಬಸವಣ್ಣನವರು ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದ ಶ್ರೇಷ್ಠವಾದ ಶೈಲಿ, ಛಂದಸ್ಸು ಮುಂತಾದವುಗಳನ್ನು ಬಿಟ್ಟು ಸರಳವಾದ ಕೇವಲ ಕನ್ನಡ ಭಾಷೆಯಲ್ಲಿ ಒಂದು ಹೊಸ ಸಾಹಿತ್ಯ ಮಾರ್ಗವನ್ನು ಕಂಡು ಹಿಡಿದರು. ಇದಕ್ಕೆ ಕಾರಣವೇನೆಂಬುದನ್ನು ನಾವು ಮೊದಲು ವಿಚಾರ ಮಾಡಬೇಕಾಗಿದೆ.

ಬಸವಣ್ಣನವರ ಪೂರ್ವ ಚರಿತ್ರೆಯನ್ನು ನೋಡಿದರೆ ಅವರು ಬ್ರಾಹ್ಮಣರಲ್ಲಿ ಬ್ರಾಹ್ಮಣರು. ಸತ್ಕುಲ ಪ್ರಸೂತರು. ಸಂಸ್ಕೃತ ಭಾಷಾಜ್ಞಾನಿಗಳು. ವೇದಾಗಮ ಪುರಾಣೇತಿಹಾಸಗಳಲ್ಲಿ ಅದ್ವಿತೀಯ ಜ್ಞಾನವನ್ನು ಪಡೆದ ಮಹಾಪಂಡಿತರು. ಹೀಗೆ ಬ್ರಾಹ್ಮಣ ಸಮಾಜದಲ್ಲಿ ಬಸವಣ್ಣನವರು ಒಂದು ಹಿರಿಯ ಸ್ಥಾನವನ್ನು ಪಡೆದವರಾಗಿದ್ದರು. ಇಂಥ ಬಸವಣ್ಣನವರು ತಮ್ಮ ಕುಲ, ಹಿರಿಮೆ, ಸ್ಥಾನ ಇವುಗಳನ್ನು ನಿರ್ಲಕ್ಷಿಸಿ, ಜನಸಾಮಾನ್ಯದ ಉದ್ಧಾರಕ್ಕಾಗಿ ಕಂಕಣ ತೊಟ್ಟು ನಿಂತು ಕನ್ನಡ ಭಾಷೆಯಲ್ಲಿ ಜನಸಾಮಾನ್ಯವನ್ನು ಸಂಬೋಧಿಸಿದುದನ್ನು ನೋಡಿದರೆ ನಮಗೆ ಅಚ್ಚರಿಯಾಗುತ್ತದೆ. ಬಸವಣ್ಣನವರ ಈ ರೀತಿಯ ಅಚ್ಚರಿಯ ವರ್ತನೆಗೆ ನಾವು ಸ್ಥೂಲವಾಗಿ ಮೂರು ಕಾರಣಗಳನ್ನು ಊಹಿಸಬಹುದಾಗಿದೆ.

(೧) ಜನಸಾಮಾನ್ಯಕ್ಕೆ ಅರಿವನ್ನುಂಟುಮಾಡುವುದು. ಇದುವೆ ಮೊದಲನೆಯ ಕಾರಣ. ಬಸವಣ್ಣನವರ ಕಾಲದಲ್ಲಿ ಯಾವುದಾದರೂ ಒಂದು ಶಾಸ್ತ್ರದ ವಿಚಾರದಲ್ಲಿಯೇ ಆಗಲಿ, ಇತಿಹಾಸದ ವಿಚಾರದಲ್ಲಿಯೇ ಆಗಲಿ, ಒಂದು ಲೋಕಾನುಭವದ ವಿಚಾರದಲ್ಲಿಯೇ ಆಗಲಿ,

ಅಷ್ಟೇಕೆ, ಒಂದು ವೈದ್ಯದ ವಿಚಾರವಲ್ಲಿಯೇ ಆಗಲಿ, ಅರಿವನ್ನು ಪಡೆಯಬೇಕಾಗಿದ್ದರೆ ಸಂಸ್ಕೃತ ಗ್ರಂಥಗಳನ್ನೇ ಆಶ್ರಯಿಸಬೇಕಾಗಿದ್ದಿತು. ಪಂಡಿತರಲ್ಲದೆ ಮತ್ತಾರೂ ಆ ಸಂಸ್ಕೃತ ಗ್ರಂಥಗಳ ಗೋಜಿಗೆ ಹೋಗುವಂತಿರಲಿಲ್ಲ. ಜನಸಾಮಾನ್ಯಕ್ಕೆ ಸಂಸ್ಕೃತ ಬಾರದು. ಇದರಿಂದ ಯಾವುದೇ ವಿಷಯದಲ್ಲಾಗಲಿ ಒಂದು ಅರಿವನ್ನು ಪಡೆಯುವದು ಜನಸಾಮಾನ್ಯಕ್ಕೆ ದುರ್ಲಭವಾಗಿ ಕಂಡಿತು. ಮೇಲಾಗಿ ಆಗಿನ ಕಾಲದಲ್ಲಿ ನೈತಿಕ ವಿಚಾರಗಳನ್ನು ತಿಳಿಯಹೇಳಲು ಸಹ ಸಂಸ್ಕೃತ ಭಾಷೆಯನ್ನೇ ಉಪಯೋಗಿಸಲಾಗುತ್ತಿದ್ದಿತು. ಜನಸಾಮಾನ್ಯವು ಅರಿವಿನ ಅಭಾವದಿಂದ ನೈತಿಕ ಪ್ರಪಂಚಕ್ಕೆ ಬಹು ದೂರ ಉಳಿದಿದ್ದಿತು. ಜನಸಾಮಾನ್ಯಕ್ಕೆ ನೈತಿಕ ವಿಚಾರಗಳನ್ನು ಮನಗಾಣಿಸುವದು ಎಷ್ಟು ಆವಶ್ಯಕವೆಂಬುವನ್ನು ಬಸವಣ್ಣನವರು ಚೆನ್ನಾಗಿ ತಿಳಿದಿದ್ದರು. ಇದಕ್ಕಾಗಿ ಅವರು ಜನಸಾಮಾನ್ಯಕ್ಕೆ ಅರ್ಥವಾಗತಕ್ಕ ಕನ್ನಡ ಭಾಷೆಯಲ್ಲಿ ಅರುಹನ್ನು ಪ್ರಚಾರಮಾಡುವದಕ್ಕೆ ಉಪಕ್ರಮಿಸಿದರು. ಸಹಜವಾದ, ಆಬಾಲವೃದ್ಧರಿಗೂ ತಿಳಿಯುವಂತಹ, ಕನ್ನಡದಲ್ಲಿ ಮನಮುಟ್ಟುವಂತೆ ಅವರು ನೀತಿಯನ್ನು ಬೋಧಿಸಿದರು. ಅವರು ನೀತಿಬೋಧೆಯನ್ನು ಎಷ್ಟು ಪರಿಣಾಮಕಾರಿಯಾಗಿ ನಡೆಸಿದರೆಂಬುವನ್ನು ಈ ಒಂದು ವಚನದಿಂದ ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ. ಬಸವಣ್ಣನವರು ಜನರ ಶುಷ್ಕ ಆಚಾರಗಳನ್ನು ಖಂಡಿಸಿ ಅಂತರಂಗ ಶುದ್ಧತೆಯ ಅವಶ್ಯಕತೆಯನ್ನು ಹೀಗೆ ನಿರೂಪಿಸಿದ್ದಾರೆ.

> " ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ, ತೊರೆಯಿಂ ಭೋ. ತೊರೆಯಿಂ ಭೋ. ಪರವಾದಿಯ ಸಂಗವ ತೊರೆಯಿಂ ಭೋ. ಪರಧನದಾಮಿಷವ ತೊರೆಯಿಂ ಭೋ. ಇವ ತೊರೆಯದೆ ಹೋಗಿ ತೊರೆಯ ಮಿಂದರೆ ಬರು ದೊರೆ ಹೋಹುದು ಕೂಡಲಸಂಗಮದೇವಾ "

ಈ ವಚನ ಎಷ್ಟು ನೇರವಾಗಿ ಮನಕ್ಕೆ ತಾಕುವಂತಿದೆ ಎಂಬುದನ್ನು ನಾವು ನೋಡಬಹುದಾಗಿದೆ. ಕನ್ನಡವಾದರೇನು ? ಜನಸಾಮಾನ್ಯಕ್ಕೆ ಹಿತವನ್ನು ಕೊಡತಕ್ಕ ಸಾಹಿತ್ಯವೇ ಉತ್ತಮ ಸಾಹಿತ್ಯವಲ್ಲವೇ ?

(೨) ಇನ್ನು ವಚನ ಸಾಹಿತ್ಯ ನಿರ್ಮಾಣಕ್ಕೆ ಎರಡನೆಯ ಕಾರಣವನ್ನು ನೋಡುವಾ. ಸ್ಫೂರ್ತಿಯುಳ್ಳವರೆಲ್ಲರೂ ಆವೇಶಹೊಂದಿರತಕ್ಕವರೆಲ್ಲರೂ ಉದಾತ್ತವಾದ ಭಾವಗಳನ್ನು ಉನ್ನತವಾದ ಕಲ್ಪನೆಗಳನ್ನು ಕಟ್ಟತಕ್ಕವರೆಲ್ಲರೂ ತಮ್ಮ ಸ್ಫೂರ್ತಿ, ಆವೇಶ, ಭಾವ, ಕಲ್ಪನೆಗಳನ್ನು ವ್ಯಕ್ತಪಡಿಸಲು ಅವರಿಗೆ ಅವಕಾಶವನ್ನುಂಟುಮಾಡಿಕೊಡುವುದು ಇದು ಎರಡನೆಯ ಕಾರಣ. ಭಾಷೆಯ ಕ್ಲಿಷ್ಟತೆಯಿಂದಲೂ. ವ್ಯಾಕರಣ, ಛಂದಸ್ಸು ಮುಂತಾದ ರೂಢಿಯ ಕಟ್ಟುಪಾಡುಗಳ ಕಕ್ಕುಲತೆಯಿಂದಲೂ ಜನಸಾಮಾನ್ಯವು ಸ್ಫೂರ್ತಿ ಇದ್ದರೂ ಅದನ್ನು ವ್ಯಕ್ತಪಡಿಸುವದಕ್ಕಾಗುತ್ತಿರಲಿಲ್ಲ. ಭಾವವನ್ನು ಹೊಂದಿದ್ದರೂ ಅದನ್ನು ಹೊರಹೊಮ್ಮಿಸುವದಕ್ಕಾಗುತ್ತಿರಲಿಲ್ಲ. ಭಾಷೆಯ ಕೊರತೆಯಿಂದ ಜನಸಾಮಾನ್ಯವು ತಮ್ಮ ತಮ್ಮ ಆವೇಶ ಸ್ಫೂರ್ತಿಗಳನ್ನು ಮೊಟಕು ಮಾಡುವದು ನ್ಯಾಯವಲ್ಲವೆಂದು ಬಸವಣ್ಣನವರು ಮನಗಂಡು ಸರಳವಾದ, ಸಹಜವಾದ, ಲಲಿತವಾದ ಕನ್ನಡ ವಚನ ಶೈಲಿಯನ್ನು ನಿರ್ಮಿಸಿ ಜನಸಾಮಾನ್ಯವು ತಮ್ಮ ತಮ್ಮ ಆವೇಶ, ಭಾವ, ಕಲ್ಪನೆಗಳನ್ನು ಬರೆದಿಡುವಂತೆ ಜನಸಾಮಾನ್ಯಕ್ಕೆ ಪ್ರೋತ್ಸಾಹ ಕೊಟ್ಟರು. ಬಸವಣ್ಣನವರು ಜನಸಾಮಾನ್ಯಕ್ಕೆ ಹೀಗೆ ಕೈ ಎತ್ತಿ ಹೇಳಿದರು.

> " ಆಳಿಗೊಂಡಿಹರೆಂದು ಅಂಜಲದೇಕೆ ? ನಾಸ್ತಿಕವಾಡಿಹರೆಂದು ನಾಚಲದೇಕೆ ? ಆರಾದಡಾಗಲಿ ಶ್ರೀ ಮಹಾದೇವಂಗೆ ಶರಣೆನ್ನಿ. ಏನೂ ಅರಿಯೆನೆಂದು, ಮೌನಗೊಂಡಿರಬೇಡ. ಕೂಡಲಸಂಗಮದೇವರ ಮುಂದೆ ದಂಡಣ ದತ್ತಣ ಎನ್ನಿ, "

ಸಂಸ್ಕೃತ ಭಾಷೆ ಬರುವದಿಲ್ಲವೆಂದು ಯಾರೂ ಹಿಂಜರಿಯಬೇಕಾದುದಿಲ್ಲ. ಗಣ ಮಾತ್ರೆ ಛಂದಸ್ಸುಗಳನ್ನು ಹೊಂದಿಸಿಕೊಂಡು ಕವನಗಳನ್ನು ಬರೆಯುವದಕ್ಕೆ ಬರುವದಿಲ್ಲವೆಂದು ಯಾರೂ ವ್ಯಾಕುಲಪಡಬೇಕಾದುದಿಲ್ಲ. ನಿಮ್ಮ ನಿಮ್ಮ ಭಾವಗಳನ್ನು ಕಲ್ಪನೆಗಳನ್ನು ನಿಮಗೆ ಅರ್ಥವಾಗುವ ಮತ್ತು ಎಲ್ಲರಿಗೂ ಅರ್ಥವಾಗುವ ಲಲಿತವಾದ ಸಹಜವಾದ ಕನ್ನಡ ವಚನ ಶೈಲಿಯಲ್ಲಿ ಬರೆಯಿರಿ, ಎಂದು ಬಸವಣ್ಣನವರು ತಮ್ಮ ಉದಾಹರಣೆಯಿಂದ ಜನಸಾಮಾನ್ಯರ ಬೆನ್ನಿನ ಮೇಲೆ ಕೈ ಚಪ್ಪರಿಸಿದರು. ಹಿಂದೆ ಎಂದೂ ಕಾಣದ, ಕೇಳದ, ಇಂತಹ ಪ್ರೋತ್ಸಾಹಕ್ಕೆ ಜನತೆಯು ಹಿಗ್ಗಿತು, ಕೊಬ್ಬಿತು, ಆವೇಶ ಹೊಂದಿತು. ಅನಂತ ಶರಣರು ಅನುಭವ ಮಂಟಪದಲ್ಲಿ ಸೇರಿ ಅನುಭವಗೋಷ್ಠಿಯನ್ನು ನಡಿಸಿ ನೂತನವಾದ ಸಾಹಿತ್ಯವನು ಸೃಷ್ಟಿಸಿದರು. ಈ ಸಾಹಿತ್ಯವೇ ಇಂದು ನಮ್ಮ ಮುಂದೆ ಜಾಜ್ವಲ್ಯ ಮಾನ

ವಾಗಿರುವ ವಚನ ಸಾಹಿತ್ಯ. ಈ ರೀತಿ ತಮ್ಮ ಪ್ರೋತ್ಸಾಹದಿಂದಲೇ ಹುಟ್ಟಿದ ವಚನ ಸಾಹಿತ್ಯವನ್ನು ಬಸವಣ್ಣನವರು ನೋಡಿ ಅದರ ಪೆರ್ಮೆಯನ್ನು ಮನಗಂಡು ಹಿಗ್ಗಿ, ಈ ರೀತಿ ಕೊಂಡಾಡಿದ್ದಾರೆ.

"ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆ ಅಪ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪು ನೀರನುಂಬುವನ ವಿಧಿಯಂತೆ ಆಯಿತ್ತೆನ್ನ ಕೂಡಲಸಂಗಮದೇವಾ."

ಎಂದು ಬಸವಣ್ಣನವರು ವಚನಕಾರರನ್ನು ಪ್ರೋತ್ಸಾಹಿಸಿ, ಆ ಪ್ರೋತ್ಸಾಹದಲ್ಲೇ ತಮ್ಮ ಸ್ವಾಭಾವಿಕವಾದ ಕಿಂಕರತ್ವವನ್ನು ವ್ಯಕ್ತಪಡಿಸಿ ಜನತೆಯನ್ನು ಮತ್ತಿಷ್ಟು ಹುರಿದುಂಬಿಸಿದರು.

(೩) ಇನ್ನು ವಚನ ಸಾಹಿತ್ಯಕ್ಕೆ ಮೂರನೆಯ ಕಾರಣ—ಜೀವನಕ್ಕೂ ಎಂದರೆ ಜನಜೀವನಕ್ಕೂ ಸಾಹಿತ್ಯಕ್ಕೂ ನಿಕಟವಾದ ಸಂಬಂಧವನ್ನು ಕಲ್ಪಿಸುವದು. ಇದು ಮೂರನೆಯ ಕಾರಣ. ಬಸವಣ್ಣನವರ ಕಾಲದಲ್ಲಿ ಸಾಹಿತ್ಯ ಒಂದು ಕಡೆ ಹರಿಯುತ್ತಿದ್ದರೆ, ಜನಜೀವನ ಮತ್ತೊಂದು ಕಡೆ ಪ್ರವಹಿಸುತ್ತಿದ್ದಿತು. ಜನಕ್ಕೆ ಸಾಹಿತ್ಯದ ಗಂಧವಿಲ್ಲದಿದ್ದರೆ ಅಂತೆಯೇ ಸಾಹಿತಿಗಳಿಗೆ ಜನಜೀವನ ಗಂಧವೇ ಇರುತ್ತಿರಲಿಲ್ಲ. ಅವರ ಸಾಹಿತ್ಯದಲ್ಲಿ ಕಾಲ್ಪನಿಕ ವಿಚಾರಗಳಿಗೆ ಹೆಚ್ಚಿನ ಎಡೆ ಇತ್ತೇ ವಿನಹ, ಜನಜೀವನದ ಚಿತ್ರ ಅವರ ಸಾಹಿತ್ಯದಲ್ಲಿ ಕಂಡು ಬರುತ್ತಿರಲಿಲ್ಲ. ಜನಜೀವನದಲ್ಲಿ ಸುಖ ಶಾಂತಿಗಳನ್ನು ಪಡೆಯಬೇಕೆಂಬುವೇ ಪ್ರತಿಯೊಬ್ಬ ಮಾನವನ ಅಭಿಲಾಷೆಯಾಗಿರುವಲ್ಲಿ ಈ ಸುಖಶಾಂತಿಗಳನ್ನು ಈಡೇರಿಸುವ ಕೆಲಸವನ್ನು ಸಾಹಿತ್ಯ ಕೈಕೊಳ್ಳದಿದ್ದಲ್ಲಿ ಅಂಥ ಸಾಹಿತ್ಯದಿಂದ ಯಾವ ಪ್ರಯೋಜನವೂ ಇಲ್ಲವೆಂದೂ, ಅದು ಅರ್ಥವಿಲ್ಲದ ವ್ಯರ್ಥ ಸಾಹಿತ್ಯವೆಂದೂ, ಬಸವಣ್ಣನವರು ಚೆನ್ನಾಗಿ ಮನಗಂಡರು. ಇದಕ್ಕಾಗಿ ಅವರು ಅನುಭವ ಮಂಟಪವನ್ನು ಸ್ಥಾಪಿಸಿ ಅಲ್ಲಿ ತಮ್ಮ ತಮ್ಮ ಅನುಭವಗಳನ್ನು ಕುರಿತೇ ಸಾಹಿತ್ಯಗಳನ್ನು ನಿರ್ಮಾಣ ಮಾಡಬೇಕೆಂದು ಕಟ್ಟು ಮಾಡಿ ಜನಜೀವನಕ್ಕೂ ಸಾಹಿತ್ಯಕ್ಕೂ ಸಂಬಂಧವನ್ನು ಕಲ್ಪಿಸಿದರು.

"ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ಘಟಸರ್ಪವಯ್ಯ."



ಎಂದು ಬಸವಣ್ಣನವರು ಗೀತೆಯನ್ನು ಹಾಡಿ ಸಾಹಿತ್ಯವನ್ನು ಜನಜೀವನಕ್ಕೆ ಸಂಬಂಧಿಸುವದನ್ನು ಯಾರೂ ಮರೆಯಬಾರದೆಂದು ಒಂದು ಆದರ್ಶ ಸೂಕ್ತಿಯನ್ನು ಪ್ರಪಂಚದ ಮುಂದಿಟ್ಟರು.

ಈ ರೀತಿ ಮೂರು ಕಾರಣಗಳಿಂದ ಶ್ರೀ ಬಸವಣ್ಣನವರು ನಿರ್ಮಿಸಿದ ವಚನ ಸಾಹಿತ್ಯದ ಲಕ್ಷಣಗಳೇನೆಂಬುವನ್ನು ಇನ್ನು ಮುಂದೆ ವಿಚಾರ ಮಾಡಬೇಕಾಗಿದೆ. ಉತ್ತಮ ಸಾಹಿತ್ಯದ ಎಲ್ಲ ಲಕ್ಷಣಗಳನ್ನು ನಾವು ಬಸವಣ್ಣನವರ ವಚನ ಸಾಹಿತ್ಯದಲ್ಲಿ ನೋಡಬಹುದಾಗಿದೆ. ಅನುಭವದ ಮಥನದಿಂದ ಹುಟ್ಟಿದ ಬಸವಣ್ಣನವರ ವಚನಾಮೃತದ ಸವಿ ಎಂತಹದೆಂಬುದನ್ನು ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಮನಗಾಣಬೇಕಾದರೆ ಅವರ ವಚನಗಳನ್ನೇ ನಾವು ವಿಮರ್ಶಿಸಿ ನೋಡಬೇಕಾಗಿದೆ. ಸದ್ಯಕ್ಕೆ ಅವರ ಒಂದೆರಡು ವಚನಗಳನ್ನು ಉದಾಹರಣಾರ್ಥವಾಗಿ ಹೇಳಿ, ಅವರ ವಚನ ಸಾಹಿತ್ಯದ ಮಾಧುರ್ಯವನ್ನು ಕೈಲಾದ ಮಟ್ಟಿಗೆ ನಿರ್ದೇಶಿಸುವದು ನನ್ನ ಕರ್ತವ್ಯವಾಗಿದೆ. ಸಾಹಿತ್ಯದ ಒಂದು ಮುಖ್ಯವಾದ ಗುಣವಿಶೇಷವೆಂದರೆ, ಅದರ ರಮಣೀಯತೆ. ನಿಸರ್ಗದ ಒಂದು ಶೋಭೆಯನ್ನು ಪ್ರಕಾಶಗೊಳಿಸುವದೇ ಆ ರಮಣೀಯತೆ. ನಾವು ಅನೇಕ ವಸ್ತುಗಳನ್ನು ಒಂದು ವಿಶೇಷ ಗುಣವಾಗಲಿ, ಅವುಗಳ ಒಂದು ವಿಲಕ್ಷಣ ರಮ್ಯತೆಯಾಗಲಿ, ಸಾಮಾನ್ಯವಾಗಿ ನಮ್ಮ ಕಣ್ಣಿಗೆ ಬಿದ್ದಿರುವದಿಲ್ಲ. ಆದರೆ ಕವಿಯು ಆ ವಿಶೇಷ ಗುಣಶೋಭೆಗಳನ್ನು ಕಂಡು ಅವನ್ನು ತನ್ನ ಸಾಹಿತ್ಯದಲ್ಲಿ ಚಿತ್ರಿಸುತ್ತಾನೆ. ರವಿ ಕಾಣದುದ ಕವಿ ಕಂಡನೆಂಬುದರ ಅರ್ಥವಾದರೂ ಇದೇ.

ಹುತ್ತವನ್ನೂ—ಹಾವನ್ನೂ—ನದಿಯನ್ನೂ—ಸಮುದ್ರವನ್ನೂ ನಾವು ಎಷ್ಟೋ ಸಲ ನೋಡಿದ್ದೇವೆ. ಆದರೆ ಅವುಗಳ ಒಂದು ವೈಶಿಷ್ಟ್ಯವಾಗಲಿ, ಅವುಗಳ ಒಂದು ವಿಲಕ್ಷಣ ರಮಣೀಯತೆಯಾಗಲಿ ನಮ್ಮ ಕಣ್ಣಿಗೆ ಬಿದ್ದಿರುವದಿಲ್ಲ. ಬಸವಣ್ಣನವರು ಆ ಹುತ್ತ—ಹಾವು—ನದಿ—ಸಮುದ್ರಗಳನ್ನು ನೋಡಿ ಅವುಗಳ ಗೂಢವಾದ ಸಂಬಂಧವನ್ನು ಅವುಗಳ ವಿಲಕ್ಷಣವಾದ ಒಂದು ವೈಶಿಷ್ಟ್ಯವನ್ನು ಹೇಗೆ ಚಿತ್ರಿಸಿದ್ದಾರೆಂಬುದನ್ನು ನೋಡೋಣ.

" ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ. "

ಈ ವಚನದಲ್ಲಿ ಬಸವಣ್ಣನವರು ನಿಸರ್ಗದ ಮಾರ್ಮಿಕ ಅರ್ಥವನ್ನು ಎಷ್ಟು ಮನೋಹರವಾಗಿ ವರ್ಣಿಸಿ, ಕನ್ನಡ ದೇವಿಯ ಕೊರಳಿಗೆ ಎಂತಹ ಅಮೂಲ್ಯವಾದ ಕಂಠಾಭರಣವನ್ನು ಹಾಕಿರುವರೆಂಬುದನ್ನು ನಾವು ನೋಡಬಹುದಾಗಿದೆ.

"All artistic works must be a revelation," ಎಂಬುದರ ತತ್ವವನ್ನು ನಾವು ಈ ವಚನದಲ್ಲಿ ಬಹು ಚೆನ್ನಾಗಿ ಮನಗಾಣಬಹುದಾಗಿದೆ.

ಸಾಹಿತ್ಯದ ಲಕ್ಷಣವೆಂದರೆ 'Suggestiveness' ಸೂಚಕತ್ವ. ಇದನ್ನು ಲಾಕ್ಷಣಿಕರು 'ಧ್ವನಿ' ಎಂದು ಕರೆಯುತ್ತಾರೆ. ಈ ಗುಣವಿಶೇಷವು ಬಸವಣ್ಣನವರ ಸಾಹಿತ್ಯದಲ್ಲಿ ತಾಂಡವವಾಡುತ್ತದೆ. ಉದಾಹರಣೆಗೆ ಈ ಒಂದು ವಚನವನ್ನು ತಮ್ಮ ಮುಂದೆ ಇಡುತ್ತೇನೆ.

" ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬೆಲೆಗೈವರಯ್ಯ. ನೆಲನಾಳ್ವನ ಹೆಣನೊಂದನೆ ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯ. ಮೊಲನಿಂದ ಕರಕಷ್ಟ ನರನ ಬಾಳುವೆ. ಸಲೆ ನಂಬು ನಮ್ಮ ಕೂಡಲ ಸಂಗಮದೇವನ. "

ಈ ವಚನದಲ್ಲಿ 'ಮೊಲನಿಂದ ಕರ ಕಷ್ಟ ನರನ ಬಾಳುವೆ' ಎಂಬ ಚಿಕ್ಕ ಮಾತಿನಲ್ಲಿ ಎಂತಹ ಗೂಢವಾದ ಅರ್ಥವನ್ನು ಬಸವಣ್ಣನವರು ಚಿತ್ರಿಸಿದ್ದಾರೆ! ವಿಶ್ವಕ್ಕೇ ಅನ್ವಯಿಸುವ ಒಂದು ಮಹತ್ತರವಾದ ತತ್ವವನ್ನು ಹೇಳಿದ್ದಾರೆ!

ಕನ್ನಡ ನುಡಿಯ ವಿಚಾರದಲ್ಲಿ ಒಂದು ಆಕ್ಷೇಪಣೆ ಇದ್ದಂತೆ ತೋರುತ್ತದೆ. ಕನ್ನಡ ಸಾಹಿತ್ಯವು ವೀರ್ಯವತ್ತಾದ ಸಾಹಿತ್ಯವಲ್ಲವೆಂದೂ ಕನ್ನಡಿಗರು ಕನ್ನಡದಲ್ಲಿ ಒಂದು ವಾದವನ್ನು ಸಹ ನಡೆಸಲಾರರೆಂದೂ ಕೆಲವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಈ ಅಭಿಪ್ರಾಯ ತಪ್ಪೆಂದು ಬಸವಣ್ಣನವರು ಈ ವಚನವನ್ನು ಹಾಡಿ ತೋರಿಸಿಕೊಟ್ಟಿದ್ದಾರೆ.—



" ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು. ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೇ ಹಿಡಿದು ಸದ್ಭಕ್ತರು ಗೆದ್ದರು ಕೂಡಲ ಸಂಗಮದೇವಾ. "

ಈ ವಚನದಲ್ಲಿ ಬಸವಣ್ಣನವರು ಎಂತಹ ಆವೇಶವನ್ನು ಹುಟ್ಟಿಸುವ, ಎಂತಹ ಸ್ಫೂರ್ತಿಯನ್ನುಂಟುಮಾಡುವ, ಎಂತಹ ಹುರುಪನ್ನು ಹೊರಹೊಮ್ಮಿಸುವ ಸಾಹಿತ್ಯವನ್ನು ನಿರ್ಮಿಸಿದ್ದಾರೆಂಬುದನ್ನು ಯಾರು ಬೇಕಾದರೂ ತಿಳಿಯಬಹುದಾಗಿದೆ.

ಬಸವಣ್ಣನವರ ವಚನ ಸಾಹಿತ್ಯದ ಮತ್ತೊಂದು ವಿಶೇಷ ಕೌಶಲ್ಯವನ್ನು ನಾನು ಇಲ್ಲಿ ವರ್ಣಿಸದೆ ಇರಲಾರೆ. ಅದು ಅವರ ಕಥನ ಕೌಶಲ್ಯ. ಜನರು ಕಂಡು ಕೇಳಿದ, ಅವರ ಮನಸ್ಸಿಗೆ ಹಿಡಿಯುವ, ಜನಜೀವನದ ಕೆಲವು ದೃಶ್ಯಗಳನ್ನು ಕಥೆಯ ರೂಪದಲ್ಲಿ ಹೇಳಿ ಆ ಮೂಲಕ ಬಸವಣ್ಣನವರು ನೀತಿ ಬೋಧೆಯನ್ನು ಮಾಡಿ ಭಾಷೆಯನ್ನು ನುರುಗಿಸಿದ್ದಾರೆ. ಅವರು ಅನೇಕ ಕಥೆಗಳನ್ನು ಹೇಳಿದ್ದಾರೆ. ಆದರೆ ಅವೆಲ್ಲವುಗಳನ್ನು ಇಲ್ಲಿ ಹೇಳುವುದಕ್ಕಾಗುವದಿಲ್ಲ. ಒಂದು ಕಥೆಯನ್ನು ಮಾತ್ರ ಹೇಳುತ್ತೇನೆ. ಅದು ಹಾವಾಡಿಗ ಮೂಕೊರತೆಯರ ಕಥೆ. ಆ ಕಥೆಯನ್ನು ನಾವುಗಳಾಗಿದ್ದರೆ ಹೀಗೆ ಪ್ರಾರಂಭಿಸುತ್ತಿದ್ದೆವೆಂದು ಕಾಣುತ್ತದೆ. " ಒಂದೂರಿನಲ್ಲಿ ಒಬ್ಬ ಹಾವಾಡಿಗನಿದ್ದ. ಅವನು ಒಬ್ಬ ಮೂಗಿಯನ್ನು ಮದುವೆಯಾದ. ಅವರಿಗೊಂದು ಗಂಡು ಮಗು ಆಯಿತು. ಆ ಮಗು ಬೆಳೆದು ಪ್ರಾಪ್ತವಯಸ್ಕನಾದ. ಮದುವೆಗೆ ಒಂದು ಹೆಣ್ಣು ಗೊತ್ತು ಮಾಡುವದಕ್ಕಾಗಿ ಶಕುನ ಕೇಳುವದಕ್ಕೆ ಹಾವಾಡಿಗ ಮೂಕೊರತೆಯರು ಹೊರಟರು. " ಮುಂತಾಗಿ ಪ್ರಾರಂಭಿಸುತ್ತಿದ್ದೆವು. ಆದರೆ ಬಸವಣ್ಣನವರು ಕಥೆಯನ್ನು ಈ ರೀತಿ ಲಂಬಿಸಿ ಹೇಳುವದಿಲ್ಲ. ಮನಸ್ಸಿಗೆ ಬೇಸರಿಕೆಯನ್ನು ಹಿಡಿಸುವದಿಲ್ಲ. ಕಥೆಯನ್ನು ನೇರವಾಗಿ ಎರಡೇ ಮಾತುಗಳಲ್ಲಿ ಹೇಳುತ್ತಾರೆ. ಆದರೆ ಅವರು ಹೇಳಿದ ಆ ಎರಡೇ ಮಾತುಗಳಲ್ಲಿಯೇ ಒಂದು ಮನೋಹರವಾದ ಚಿತ್ರವನ್ನು ಕಟ್ಟುತ್ತಾರೆ. ಕಥೆಗೆ ಬೇಕಾದ ಎಲ್ಲ ಸನ್ನಿವೇಶಗಳನ್ನು, ಎಲ್ಲ ವರ್ಣನೆಗಳನ್ನು, ಆ ಎರಡೇ ಮಾತುಗಳಲ್ಲಿ ಮುಗಿಸಿ ಒಂದು ಉದಾತ್ತವಾದ ತತ್ವವನ್ನು ಹೊರಹೊಮ್ಮಿಸುತ್ತಾರೆ. ಇವರ ಕಥೆಗಳನ್ನು

ಈಸೊಪ್ಪನ ಕಥೆಗಳಿಗೆ ಧಾರಳವಾಗಿ ಹೋಲಿಸಬಹುದಾಗಿದೆ. ಹಾವಾಡಿಗ ಮೂಕೊರತೆಯ ಕಥೆಯನ್ನು ಹೀಗೆ ಹೇಳಿದ್ದಾರೆ. –

"ಹಾವಾಡಿಗನು ಮೂಕೊರತೆಯು ತನ್ನ ಮಗನ ಮದುವೆಗೆ
ಶಕುನವ ನೋಡ ಹೋಹಾಗ, ಇದಿರಿಲೊಬ್ಬ ಮೂಕೊರತೆಯ
ಹಾವಾಡಿಗನ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ.
ತನ್ನ ಸತಿಯು ಮೂಕೊರತೆ, ತನ್ನ ಕೈಯ್ಯಲು ಹಾವು. ತನ್ನ
ಭಿನ್ನವನರಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲ
ಸಂಗಮದೇವಾ."

ಇನ್ನು ಬಸವಣ್ಣನವರ ವರ್ಣನಾಚಾತುರ್ಯದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸಾವಿರಾರು ಪದ್ಯಗಳನ್ನು ಮೀಸಲಾಗಿರಿಸಿ ಅಷ್ಟಾದಶ ವರ್ಣನೆಯನ್ನು ಮಾಡುವುದು ಮಾತ್ರವೇ ವರ್ಣನೆಯಲ್ಲ. ಸಹಜವಾದ, ಸರಳವಾದ, ಲಲಿತವಾದ, ಮಿತಭಾಷೆಯಲ್ಲಿ ಒಂದು ಸಾಮಾನ್ಯ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ಓದುವವರಲ್ಲಿ, ಕೇಳುವವರಲ್ಲಿ ರಸೋದ್ರೇಕಗೊಳಿಸುವ ರೀತಿಯಲ್ಲಿ ಮಾಡುವ ವರ್ಣನೆಯೂ ವರ್ಣನೆಯೇ ಎಂಬುದನ್ನು ನಾವು ಈ ವಚನದಲ್ಲಿ ಮನಗಾಣಬಹುದಾಗಿದೆ.

"ಮನ ಮನ ಬೆರಿಸಿದಲ್ಲಿ ತನು ಕರಗದಿದ್ದಡೆ, ಸೋಂಕಿನಲ್ಲಿ
ಪುಳಕಂಗಳು ಹೊರ ಹೊಮ್ಮದಿರ್ದಡೆ, ಕಂಡಾಗಳಶ್ರು ಜಲಂ
ಗಳು ಸುರಿಯದಿರ್ದಡೆ, ನುಡಿಯಲ್ಲಿ ಗದ್ಗದಂಗಳು ಪೊಣ್ಮ
ದಿರ್ದಡೆ, ಕೂಡಲ ಸಂಗಮದೇವರ ಭಕ್ತಿಗಿದು ಚಿನ್ಹ. ಎನ್ನಲ್ಲಿ
ಇಲ್ಲವಾಗಿ ನಾನು ಡಂಭಕ ಕಾಣಿರೋ."

ಈ ವಚನದಲ್ಲಿ ಭಕ್ತಿಯ ವರ್ಣನೆಯನ್ನು ಎಷ್ಟು ಹೃದಯಂಗಮವಾಗಿಯೂ, ಎಷ್ಟು ಪರಿಪೂರ್ಣವಾಗಿಯೂ, ಎಷ್ಟು ಸಹಜವಾಗಿಯೂ, ಮಾಡಿದ್ದಾರೆಂಬುದನ್ನು ನಾವು ನೋಡಬಹುದಾಗಿದೆ. ಈ ವಚನದಲ್ಲಿ ಮತ್ತೊಂದು ವಿಶೇಷವನ್ನು ನಾವು ಕಾಣಬಹುದು. ಬಸವಣ್ಣನವರು ಭಕ್ತಿಯ ಭರದಲ್ಲಿ ಭಕ್ತಿಯ ವಿಚಾರವಾಗಿಯೇ ಬರೆಯುತ್ತ "ನುಡಿಯಲ್ಲಿ ಗದ್ಗದಂಗಳು ಪೊಣ್ಮದಿರ್ದಡೆ" ಎಂದು ಬರೆದು ಅಲ್ಲಿಗೆ ಸುಮ್ಮನಾಗಿ ಆ



ವಾಕ್ಯವನ್ನು ಪೂರ್ಣ ಮಾಡದೆಯೇ ಮುಂದಿನ ಹೊಸ ವಾಕ್ಯವನ್ನು ಬರೆದು ಗದ್ಗದಂಗಳನ್ನು ತಾವೇ ಅನುಭವಿಸಿದ್ದಾರೆ.

ಇನ್ನು ಕನ್ನಡದಲ್ಲಿ ಅಧ್ಯಾತ್ಮ ವಿಚಾರಗಳನ್ನು ವಿವೇಚಿಸಲು ಕನ್ನಡ ಭಾಷೆಗೆ ಸಾಮರ್ಥ್ಯವಿದೆಯೇ ಎಂದು ಯಾರಾದರೂ ಕೆಣಕಿ ಮಾತನಾಡಬಹುದು. ಬಸವಣ್ಣನವರು ಕೇವಲ ಭಾಷೆಯನ್ನು ಉದ್ಧರಿಸಬೇಕೆಂದು ಉದ್ಯಮಗೊಂಡವರಲ್ಲ. ಅವರು ಜನಸಾಮಾನ್ಯಕ್ಕೆ ಅರಿವನ್ನುಂಟುಮಾಡಬೇಕೆಂದು ಹೊರಟವರು. ಅಧ್ಯಾತ್ಮದ ವಿಚಾರದಲ್ಲಿಯೂ ಸಹ ಅವರು ಜನಸಾಮಾನ್ಯಕ್ಕೆ ಅಖಂಡವಾದ ಜ್ಞಾನವನ್ನುಂಟುಮಾಡಿಕೊಟ್ಟಿದ್ದಾರೆ. ಇವಕ್ಕೆ ಅವರ ಷಟ್‌ಸ್ಥಲದ ವಚನಗಳೇ ಸಾಕ್ಷಿ. ಘಂಟೆಗಟ್ಟಲೆ, ದಿನಗಟ್ಟಲೆ, ವರುಷಗಟ್ಟಲೆ ಚರ್ಚೆ ನಡೆಸಿ ಕೊನೆಗೂ ಜಿಜ್ಞಾಸುಗಳಾಗಿಯೇ ಉಳಿಯುವಂತೆ ಮಾಡುವ ವಿಶ್ವದ ತತ್ವಗಳನ್ನು ಅವರು ಸುಲಭವಾಗಿ ಎರಡೆರಡು ಮಾತುಗಳಲ್ಲಿ ಸಹಜವಾದ ಸಾಮಾನ್ಯಗಳ ಮೂಲಕ ಜನಸಾಮಾನ್ಯಕ್ಕೆ ಶ್ರುತಪಡಿಸಿದ್ದಾರೆ. ಅವರು ನಿರೂಪಿಸಿದ ಷಟ್‌ಸ್ಥಲ ವಚನಗಳಲ್ಲಿ ಒಂದೆರಡನ್ನು ಇಲ್ಲಿ ತಮ್ಮ ಅವಗಾಹನೆಗೆ ತರುತ್ತೇನೆ.

"ಬಯಲ ರೂಪ ಮಾಡಬಲ್ಲಾತನೇ ಶರಣನು. ಆ ರೂಪ
ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ. ಈ ಉಭಯ
ಒಂದಾದರೆ ನಿಮ್ಮಲ್ಲಿ ತೆರಹುಂಟೇ ಕೂಡಲ ಸಂಗಮದೇವಾ?"

ಈ ವಚನದಲ್ಲಿ ಬಸವಣ್ಣನವರು ವಿಶ್ವದ ಅತಿ ಮುಖ್ಯವಾದ ತತ್ವವನ್ನು ನಿರೂಪಿಸಿದ್ದಾರೆ. ಬಯಲನ್ನು ರೂಪ ಮಾಡುವುದು ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟುದು. ಮಾನವನು ತ್ರಿವಿಧ ಸಂಪಾದನೆಗಳನ್ನು ಮಾಡಬೇಕೆಂಬುದೇ "ಬಯಲ ರೂಪ ಮಾಡಬಲ್ಲಾತನೇ ಶರಣನು." ಎಂಬುದಕ್ಕೆ ಅರ್ಥ. ಆ ರೂಪ ಬಯಲ ಮಾಡುವುದು ಪಾರಮಾರ್ಥಿಕ ವ್ಯವಹಾರಕ್ಕೆ ಸಂಬಂಧ ಪಟ್ಟುದು. ಸಂಪಾದಿಸಿದ ತನು ಮನ ಧನವೆಂಬ ಸಂಪಾದನ ತ್ರಯವನ್ನು ಮಾನವರು ಗುರು ಲಿಂಗ ಜಂಗಮಕ್ಕೆ ಎಂದರೆ ಲೋಕ ಸೇವೆಗೆ ಸಮರ್ಪಿಸಬೇಕೆಂಬುದು ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ ಎಂಬುದಕ್ಕೆ ಅರ್ಥ. ಈ ರೀತಿ ಬಸವಣ್ಣನವರು ಒಂದು ಚಿಕ್ಕ ಕನ್ನಡ ವಚನದಲ್ಲಿ ಎಂತಹ ದೊಡ್ಡ ಅರ್ಥವನ್ನು ತುಂಬಿದ್ದಾರೆಂಬುದನ್ನು ನಾವು ನೋಡಬಹುದಾಗಿದೆ.

" ಏನನಾದರೆಯೂ ಸಾಧಿಸಬಹುದು. ಮತ್ತೇನನಾದರೆಯೂ
ಸಾಧಿಸಬಹುದಯ್ಯಾ. ತಾನಾರೆಂಬುದ ಸಾಧಿಸಬಾರದಯ್ಯಾ,
ಕೂಡಲ ಸಂಗಮದೇವರ ಕರುಣವುಳ್ಳವಂಗಲ್ಲದೆ. "

ಈ ವಚನದಲ್ಲಿ ಬಸವಣ್ಣನವರು 'ತತ್ವಮಸಿ' ಎಂಬ ಮಹಾವಾಕ್ಯದ ಅರ್ಥವನ್ನು ಎಷ್ಟು ಸರಳವಾಗಿ ವಿವರಿಸಿದ್ದಾರೆಂಬುದನ್ನು ನೋಡಬಹುದಾಗಿದೆ.

ಇನ್ನು ಬಸವಣ್ಣನವರ ಶೈಲಿಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಈ ಲೇಖನವನ್ನು ಮುಗಿಸುತ್ತೇನೆ.

ಸಾಹಿತಿಗಳ ಶೈಲಿಯನ್ನು ಹೀಗೆಯೇ ಇರಬೇಕೆಂದು ಯಾರೂ ನಿರ್ಣಯಿಸುವದಕ್ಕೆ ಬರುವದಿಲ್ಲ. ಒಬ್ಬೊಬ್ಬರ ಶೈಲಿ ಒಂದೊಂದು ವಿಧವಾಗಿರುತ್ತದೆ. ನೂರು ಜನ ಬರೆದರೆ ನೂರು ವಿಧದ ಶೈಲಿಯನ್ನು ನಾವು ಕಾಣಬಹುದಾಗಿದೆ. ಎಂದರೆ ಶೈಲಿಯ ವಿಚಾರದಲ್ಲಿ ಯಾವ ಕಟ್ಟುಪಾಡುಗಳೂ ಇಲ್ಲ. ಆದರೆ ಶೈಲಿ ಚೆನ್ನಾಗಿದೆಯೇ ಇಲ್ಲವೆಂಬುದನ್ನು ಮಾತ್ರ ಯಾರು ಬೇಕಾದರೂ ಹೇಳಬಹುದಾಗಿದೆ. ಬಸವಣ್ಣನವರ ಶೈಲಿ ಅನುಪಮವಾದ ಶೈಲಿಯು. ಅವರ ಶೈಲಿಯ ಹಿಂದೆ ಅವರ ಒಂದು ಮುಖ್ಯವಾದ ಗುಣವಿಶೇಷವನ್ನು ನಾವು ಕಾಣಬಹುದಾಗಿದೆ. ಆ ಗುಣವಿಶೇಷವನ್ನು ನಾವು ಅರಿತದ್ದೇ ಆದರೆ ಅವರ ಶೈಲಿಯ ಓಜಸ್ಸಿಗೆ ತೇಜಸ್ಸಿಗೆ ಕಾರಣವೇನೆಂಬುದನ್ನು ನಾವು ಅರಿತಂತೆ ಆಗುತ್ತದೆ. ಅನುಕಂಪನವೇ ಬಸವಣ್ಣನವರ ಶೈಲಿಯ ತಳಹದಿ. ಬಸವಣ್ಣನವರ ಯಾವ ನುಡಿಯನ್ನೇ ತೆಗೆದುಕೊಂಡರೂ ಅದರಲ್ಲಿ ನಾವು ಅನುಕಂಪನವನ್ನು ಕಾಣಬಹುದಾಗಿದೆ. ಅನುಕಂಪನವೆಂದರೆ ಮರುಕ. ಬಸವಣ್ಣನವರಿಗೆ ಮಾನವರ ಮೇಲೆಯೇ ಅಲ್ಲ ಸಕಲ ಜೀವಕೋಟಿಗಳ ಮೇಲೂ ಮರುಕವನ್ನು ಉಳ್ಳವರಾಗಿದ್ದರು. ಉದಾಹರಣೆಗೆ ಈ ಒಂದು ವಚನವನ್ನು ನಿಮಗೆ ಹೇಳುತ್ತೇನೆ.

" ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ
ತಳಿರ ಮೇಯಿತ್ತು. ಕೊಂದಿಹರೆಂಬುದನರಿಯದೆ ಬೆಂದೊಡಲ
ಹೊರೆವುತ್ತಲಿದೆ. ಅದಂದೆ ಹುಟ್ಟಿತ್ತು. ಅದಂದೆ ಹೊಂದಿತ್ತು.
ಕೊಂದವರುಳಿವರೇ ಕೂಡಲ ಸಂಗಮದೇವಾ ? "



ಈ ವಚನದಲ್ಲಿ ಬಡಕುರಿಯ ಮುಗ್ಧತೆಯನ್ನು "Innocense" ವರ್ಣಿಸಿ, ಅದರ ಮುಂದಿನ ಗತಿಯ ಸನ್ನಿವೇಶವನ್ನು ಚಿತ್ರಿಸಿ, ಬಸವಣ್ಣನವರು ಆ ಬಡ ಪ್ರಾಣಿಯ ವಿಚಾರದಲ್ಲಿ ಎಂತಹ ಅನುಕಂಪನವನ್ನು ತೋರಿಸಿದ್ದಾರೆಂಬುದನ್ನು ಮತ್ತು ಈ ವಚನವನ್ನು ಕೇಳಿದವರೂ ಸಹ ಜೀವಕೋಟಿಗಳ ಮೇಲೆ ಅನುಕಂಪನವನ್ನು ತೋರಿಸುವಂತೆ ಮಾಡಿರುತ್ತಾರೆಂಬುದನ್ನು ನಾವು ನೋಡಬಹುದಾಗಿದೆ.

ಈ ರೀತಿಯಲ್ಲಿ ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಸೇವೆ ಅಪಾರವಾದುದಾಗಿದೆ. ನಾನು ಮೊದಲೇ ಹೇಳಿದಂತೆ ಬಸವಣ್ಣನವರು ಸ್ವತಃ ವಚನಗಳನ್ನು ರಚಿಸಿದುದಲ್ಲದೆ ಅನಂತಾನಂತ ಶಿವಶರಣರ ಕೈಯ್ಯಲೂ ವಚನಗಳನ್ನು ನಿರ್ಮಿಸಿ, ಎರಡೆಂಭತ್ತು ಕೋಟಿ ವಚನಗಳಿಗೆ ಕಾರಣರಾಗಿದ್ದಾರೆ. ಇಂತಹ ಮಹಾನುಭಾವರಾದ ಬಸವಣ್ಣನವರು ಕನ್ನಡ ಭಾಷೋದ್ಧಾರಕರಾಗಿರುವರಲ್ಲದೆ ಕನ್ನಡ ಭಾಷಾಜನಕರೂ ಆಗಿದ್ದಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

## ಶಿವಶರಣರ ಶಿವಾನುಭವ ಮಂಟಪ.

ಕ್ರಿ. ಶ. ೧೨ ನೆಯ ಶತಮಾನದಲ್ಲಿ ಇಡೀ ಜಗತ್ತನ್ನೇ ನಿಬ್ಬೆರಗುಗೊಳಿಸುವ 'ಶಿವಾನುಭವ ಮಂಟಪ'ವೆಂಬ ತೇಜೋಮಯವಾದ ಸಂಸ್ಥೆಯೊಂದು ಪ್ರಾದುರ್ಭವಿಸಿತು. ಅದು ತತ್ವಜ್ಞಾನಿಗಳ ಚಕ್ರಗೋಷ್ಠಿಯೋ, ದಿವ್ಯಜ್ಞಾನಿಗಳ ಜ್ಯೋತಿರ್ಮಂಡಲವೋ, ಸಮಾಜ ಸುಧಾರಕರ ಉಗಮಸ್ಥಾನವೋ, ಧರ್ಮ ಜಾಗ್ರತಿಯ ಉತ್ಕ್ರಾಂತಿ ಸದನವೋ, ಪತಿತೋದ್ಧಾರದ ಶಯನ ಮಂದಿರವೋ, ಎಂಬಂತೆ ಕಂಗೊಳಿಸುತ್ತಿತ್ತು. ಆ ಶಿವಾನುಭವ ಮಂಟಪವೆಂಬ ವಿಶಾಲ ಗಗನದಲ್ಲಿ ಮಿನುಗುವ ಅಸಂಖ್ಯಾತ ಶಿವಶರಣರೆಂಬ ನಕ್ಷತ್ರ ಮಂಡಲದ ಮಧ್ಯದಲ್ಲಿ, ಬಸವ, ಚೆನ್ನಬಸವ ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮೊದಲಾದ ಜೀವಜ್ಯೋತಿಗಳು ದೈದೀಪ್ಯಮಾನವಾಗಿ ವಿರಾಜಿಸುತ್ತಿದ್ದವು. ಈ ನಿರಾಳವಾದ ವಿಶ್ವಸಾಗರದ ಆಳದಲ್ಲಿ ಒಳಹೊಕ್ಕು ಶಿವಶರಣರು ಶೋಧಿಸಿ ತೆಗೆದ ಉಜ್ವಲ ತತ್ವಗಳೆಂಬ ರತ್ನರಾಶಿಗಳು ತ್ರಿಕಾಲಾಬಾಧಿತವಾಗಿ ರಂಜಿಸುತ್ತಿರುವವು.

ಆ ಶಿವಾನುಭವ ಮಂಟಪದಲ್ಲಿ ಎಂಥ ಅಘಟಿತ ಘಟನಾ ಕಾರ್ಯಗಳು ಜರಗಿದವೆಂಬುದನ್ನು ಬಲ್ಲಿರಾ ? ಅದರಲ್ಲಿ ಶಿವಶರಣರು ಮಥಿಸಿ ತೆಗೆದ ಎರಡೆಂಭತ್ತು ಕೋಟಿ ವಚನಗಳು ಜಗತ್ತಿನ ಯಾವ ದೇಶದ ಇತಿಹಾಸದಲ್ಲಿ ಕಂಡು ಬರುತ್ತವೆ ? ಯಾವ ದೇಶದ ಇತಿಹಾಸದಲ್ಲಿ ಅಸಂಖ್ಯಾತ ದಿವ್ಯಜ್ಞಾನಿಗಳು ಏಕ ಕಾಲಕ್ಕೆ ಉದ್ಧರಿಸಿದ್ದಾರೆ ? ಯಾವ ದೇಶದ ಸಾಮಾಜಿಕ ಧಾರ್ಮಿಕ ಸುಧಾರಣೆಗಳು ಶಿವಶರಣರು ಗೈದ ಸುಧಾರಣೆಗಳನ್ನು ಮೀರಿ ಹೋಗಿವೆ ? ಶಿವಶರಣರು ಸಮಾಜ ಸುಧಾರಕರೂ ಧಾರ್ಮಿಕ ಸುಧಾರಕರೂ ಆಗಿದ್ದರಿಷ್ಟೇ ಅಲ್ಲ, ಒಳ್ಳೇ ಯೋದ್ಧರೂ ಆಗಿದ್ದರು. ಇಂಥ ವೈಚಿತ್ರ್ಯವು ಯಾವ ದೇಶದ ಇತಿಹಾಸದಲ್ಲುಂಟು ? ಕ್ರಿಸ್ತನು ಗುರುವಾಗಿದ್ದರೆ ಆತನಿಗೆ ಅನೇಕರು ಶಿಷ್ಯರಾಗಿರಬಹುದು. ಮಹಮ್ಮದ ಪೈಗಂಬರರು ಗುರುಗಳಾಗಿದ್ದರೆ ಅವರ ಅನುಯಾಯಿಗಳು ಅನೇಕರಾಗಿರಬಹುದು. ಬುದ್ಧನು ಗುರುವಾಗಿದ್ದರೆ ಆತನ ಧರ್ಮ ಪ್ರಸಾರಕರನೇಕರಿರಬಹುದು. ಸಾಕ್ರೆಟೀಸನ ತತ್ವಗಳನ್ನು ಪ್ರಸಾರ ಮಾಡಲಿಕ್ಕೆ ಪ್ಲೇಟೋನಂಥ ಶಿಷ್ಯನು ಕಾರಣನಾಗಿರಬಹುದು. ಸ್ವಾಮಿ ಪರಮಾನಂದರ ದಿವ್ಯ ಸಂದೇಶಗಳನ್ನು ಬೀರಲಿಕ್ಕೆ ಸ್ವಾಮಿ ವಿವೇಕಾನಂದರು ಟೊಂಕ



ಕಟ್ಟಿರಬಹುದು. ಈ ಮೇರೆಗೆ ಒಬ್ಬೊಬ್ಬ ದಿವ್ಯ ಜ್ಯೋತಿಗಳು ಅನುಸರಿಸುವ ಸಾಮಾನ್ಯರು ಬಹು ಜನರಿರಬಹುದು. ಆದರೆ ಎಲ್ಲರೂ ಸ್ವಯಂ ಜ್ಯೋತಿಗಳೂ ಸ್ವಯಂ ಧೀರರೂ ಆಗಿ ತತ್ವಪ್ರಸಾರ ಮಾಡಿದ ಶ್ರೇಯಸ್ಸು ಶಿವಾನುಭವ ಮಂಟಪದಿಂದ ಹೊರಟ ಶಿವಶರಣರಿಗಲ್ಲದೆ ಮತ್ತಾರಿಗುಂಟು? ಮುಂದಾಳು ಒಬ್ಬರಾಗಿದ್ದರೆ ಅವರನ್ನು ಹಿಂಬಾಲಿಸುವವರು ಅನೇಕರಿದ್ದುದು ಎಲ್ಲೆಡೆಯಲ್ಲಿಯೂ ಕಂಡು ಬರುತ್ತಿದೆ. ಆದರೆ ಅಸಂಖ್ಯರು ಮುಂದಾಳುಗಳಾಗಿ ಜನತಾಜನಾರ್ದನನ ಸೇವೆಯನ್ನು ಮಾಡಿದವರು ಶಿವಶರಣರಲ್ಲದೆ ಮತ್ತಾರು ?

ಶಿವಾನುಭವ ಮಂಟಪದಲ್ಲಿ ಶಿವಶರಣರು ಅನುಸರಿಸಿ ನಡೆದ ಶಿಷ್ಟಾಚಾರವು ಒಳ್ಳೇ ಆದರಣೀಯವೂ ಅನುಕರಣೀಯವೂ ಆಗಿದೆ. ಶಿವಾನುಭವ ಗೋಷ್ಠಿಯಲ್ಲಿ ಭಾಗ ವಹಿಸುತ್ತಿದ್ದವರು ಅನೇಕರು ಜನಸಾಮಾನ್ಯರಾಗಿದ್ದರೂ ಅವರು ಪರಶಿವನ ವರ ಕೃಪೆಗೆ ಪಾತ್ರರಾದಂಥವರು. ಶಿವಾನುಭವ ಮಂಟಪದಲ್ಲಿ ಕೀಳು ಮೇಲುಗಳಿಗೆ ಆಸ್ಪದವಿರಲಿಲ್ಲ. ತನ್ನ ಸದಸದ್ವಿವೇಕ ಬುದ್ಧಿಗೆ ತೋಚಿದ ಸತ್ಯವನ್ನು ನಿರ್ಭಯದಿಂದ ಮರೆಮಾಜದೆ ಪ್ರಸ್ತಾಪಿಸಲು ಪ್ರತಿಯೊಬ್ಬನಿಗೂ ಶಿವಾನುಭವ ಮಂಟಪದಲ್ಲಿ ಅಧಿಕಾರವಿದ್ದಿತು. ತಾನು ಹೇಳಿದ್ದೇ ನಿಜ, ಉಳಿದವರು ಹೇಳಿದ್ದು ತಪ್ಪು, ಎಂಬ ಕ್ಷುದ್ರ ಮದಾಂಧತೆಯು ಅವರಲ್ಲಿರಲಿಲ್ಲ. ಪರಸ್ಪರರು ವಿಷಯಗಳನ್ನು ಚರ್ಚಿಸುವಾಗ ಮನಸ್ಸಿಗೆ ಹತ್ತುವ ಕಠೋರ ಶಬ್ದಗಳಿಗೆ ಆ ಮಂಟಪದಲ್ಲಿ ಆಸ್ಪದವಿರಲಿಲ್ಲ. ಪರಸ್ಪರರು ಅಪ್ಪಾ, ಅಣ್ಣಾ, ತಂದೆ, ಗುರುವೇ, ಎಂಬ ವಿನಯ ವಾಕ್ಯಗಳಿಂದಲೇ ಸಂಬೋಧಿಸುತ್ತಿದ್ದರೆಂಬ ಮಾತಿಗೆ 'ಶೂನ್ಯ ಸಂಪಾದನೆಯು' ಒಳ್ಳೇ ಸಾಕ್ಷಿಯಾಗಿದೆ. ತಮ್ಮ ಅಭಿಪ್ರಾಯವು ತಪ್ಪಾಗಿದ್ದರೆ ನಿರ್ವಂಚನೆಯಿಂದ ಶಿರಸಾ ಮಾನ್ಯವಾಗಿ ಒಪ್ಪುತ್ತಿದ್ದರು. ವಾದದಲ್ಲಿ ಒಬ್ಬರ ಯೋಗ್ಯತೆಯನ್ನೊಬ್ಬರು ಹೆಚ್ಚಿಸುವರೇ ವಿನಾ ತಮ್ಮ ದರ್ಪವನ್ನು ಮಂಡಿಸುವ ಹವ್ಯಾಸ ಅವರಿಗಿರಲಿಲ್ಲ. ಆಗಮೋಪನಿಷತ್ತು ಮೊದಲಾದ ಶಾಸ್ತ್ರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಶಿವಶರಣರು ಅವುಗಳ ಬಗ್ಗೆ ವಾದ ವಿವಾದ ಮಾಡುತ್ತಿರಲಿಲ್ಲ. ತಮ್ಮ ಪವಿತ್ರಾಂತಃಕರಣಗಳಿಗೆ ಹೊಳೆದ ನುಡಿಗಳನ್ನೇ ನಿರ್ಭೀತಿಯಿಂದ ಮಂಡಿಸುತ್ತಿದ್ದರು. ಸೂಕ್ಷ್ಮದಲ್ಲಿ ಸೂಕ್ಷ್ಮವನ್ನು ಹುಡುಕಿ, ಸತ್ಯವನ್ನು ಶೋಧಿಸುವ ಮೂಲ ಬುದ್ಧಿಯು ಶರಣರದು. ಅವರದು ಕಲಿತ ಬುದ್ಧಿ

ಯಲ್ಲ. ಎಂಜಲು ಮಾತುಗಳನ್ನವರೆಂದಿಗೂ ಆಡರು. ಅವರ ಅಂತರಾಳದಿಂದ ಮೀಸಲು ನುಡಿಗಳೇ ಹೊರಹೊಮ್ಮುತ್ತಿದ್ದವು. ಶರಣನಿಗೆ ವಾದದಲ್ಲಿ ತಾನು ಗೆದ್ದೆನೆಂಬ ಅಹಂಕಾರವಿಲ್ಲ, ಸೋತೆನೆಂಬ ನಾಣಿಲ್ಲ.

ಈ ಪ್ರಕಾರ ಕ್ರಮಬದ್ಧವಾದ ಸಂಘಟನೆಯನ್ನು ಮಾಡಿಕೊಂಡು ಶಿವಶರಣರು ಒಬ್ಬರೊಬ್ಬರ ಗುಣಗಳನ್ನು ಹೊಗಳುತ್ತ, ದೋಷಗಳನ್ನು ತೆಗಳುತ್ತ, ತಪ್ಪುಗಳನ್ನು ಒಪ್ಪುತ್ತ, ಒಪ್ಪುಗಳನ್ನು ಕೊಂಡಾಡುತ್ತ, ಸುಗಮವಾದ ಮಾರ್ಗ ವಿಡಿದು ಸಾಗುತ್ತಿದ್ದರು. ಸದಾಚಾರ ಸದ್ಭಕ್ತಿಯುಳ್ಳಾತನೇ ಶಿವಾನುಭವ ಮಂಟಪದ ಸದಸ್ಯನು. ಯಾವನಲ್ಲಿ ನಿಜವಾದ ಯೋಗ್ಯತೆ ಇರುತ್ತಿತ್ತೋ ಅವನನ್ನು ಎಲ್ಲರೂ ಎತ್ತಿ ಹಿಡಿದು ಗೌರವಿಸುತ್ತಿದ್ದರು. ನಾನೇ ಜಗದ್ಗುರು, ನಾನೇ ಜಗದಾಚಾರ್ಯನೆಂಬ ಹಮ್ಮುಬಿಮ್ಮುಗಳು ಅವರಲ್ಲಿರಲಿಲ್ಲ. ‘ ವಾದೇ ವಾದೇ ಜಾಯತೇ ತತ್ವಬೋಧಃ ’ ಎಂಬ ನಿಯಮಕ್ಕನುಸರಿಸಿ ಮಾತಿನ ಮಥನದಿಂದ ತತ್ವದ ನವನೀತವನ್ನು ತೆಗೆದು ಜನತೆಗೆ ಸಲ್ಲಿಸುತ್ತಿದ್ದರು.

ಶಿವಾನುಭವ ಮಂಟಪದಲ್ಲಿ ಪಾರಂಗತೆಯನ್ನು ಪಡೆದ ಜಂಗಮರು ಊರೂರಲ್ಲಿ ಸಂಚರಿಸಿ ಮಠಗಳನ್ನು ಸ್ಥಾಪಿಸಿ ಕ್ರಮಬದ್ಧವಾದ ಸಮಾಜಘಟನೆಯನ್ನೇರ್ಪಡಿಸಿ ಜನರಿಗೆ ಸದ್ಬೋಧ ಮಾಡುತ್ತಿದ್ದರು. ಅವರಲ್ಲಿ ಸದಾಚಾರ ಸದ್ಭಕ್ತಿಗಳು ನೆಲೆಗೊಳ್ಳುವಂತೆ ಹಗಲಿರುಳು ಪ್ರಯತ್ನಿಸುತ್ತಿದ್ದರು. ಅವರ ತತ್ವಬೋಧೆಗೆ ಮನಸೋತು ಲಿಂಗಾಂಗಿಗಳಾದರೆಂದು ಹಡಪದಪ್ಪಣ್ಣಗಳು ತಮ್ಮದೊಂದು ವಚನದಲ್ಲಿ ನುಡಿದಿದ್ದಾರೆ. ಶಿವಾನುಭವ ಮಂಟಪವೇ ಮಠಗಳ ಮಾರ್ಪಾಟಿಗೆ ಮೂಲ ಕಾರಣವೆಂದು ಹೇಳಬಹುದು. ಪರುಷ ಸೋಂಕಿದ ಕಬ್ಬಿಣವು ಸುವರ್ಣವಾಗುವಂತೆ ಶಿವಾನುಭವ ಮಂಟಪವನ್ನು ಆಶ್ರಯಿಸಿದ ಅನೇಕ ಕೀಳು ಕುಲದವರೂ ಸಹ ಗುರುಸ್ವರೂಪರಾದರೆಂಬುದಕ್ಕೆ ಅನೇಕ ಉದಾಹರಣೆಗಳುಂಟು. ಉರಿಲಿಂಗಪೆದ್ದಿ ಮೊದಲಾದ ಅಸ್ಪೃಶ್ಯರೂ ಕೂಡ ತಮ್ಮ ಉಜ್ವಲವಾದ ಭಕ್ತಿಜ್ಞಾನಗಳ ಮೂಲಕ ಗುರುಪೀಠವನ್ನು ಅಲಂಕರಿಸಿದ್ದೂ ಉಂಟು. ಸದಾಚಾರ ಸದ್ಭಕ್ತಿಯುಳ್ಳಾತನೇ ಕುಲಜನು. ದುರ್ಗುಣ ದುರಾಚಾರಿಯೇ ಕುಲಹೀನನು, ಎಂಬೀ ತತ್ವವನ್ನು ಬಳಿಕೆಯಲ್ಲಿ ತಂದವರು ಶಿವಶರಣರೇ. ಅಂಥ ನೈತಿಕ ಧೈರ್ಯವು ಈ ವರೆಗೆ ಆರ್ಯಾವರ್ತದಲ್ಲಿ ಯಾರಿಗೂ ಉಂಟಾಗಿರಲಿಕ್ಕಿಲ್ಲ.



ಶಿವಾನುಭವ ಮಂಟಪದಲ್ಲಿ ಹೊರಟ ಶರಣಸಂಕುಳವೆಲ್ಲ ಸ್ವಯಂಜ್ಯೋತಿಗಳು. ಅವರಿಗೆ ಮಹಾತೇಜೋಮಯವಾದ ಪರವಸ್ತುವಿನಿಂದಲೇ ನೇರವಾಗಿ ಪ್ರಕಾಶವು ಪ್ರಾಪ್ತವಾಯಿತಲ್ಲದೆ, ಯಾವ ಗುರುವಿನಿಂದಾಗಲಿ ಸದ್ಗ್ರಂಥ ಬೋಧೆಯಿಂದಾಗಲಿ ದೊರೆಯಲಿಲ್ಲ. ಶಿವಶರಣರು ನಿರಧಿಕರಣ ದೀಕ್ಷಾಬದ್ಧರು. ಆದರೆ ಶಿವಶರಣರ ನಂತರ ಪ್ರಕಾಶಮಾನರಾಗಿ ಬೆಳಗಿದ ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮ, ಭೀಮ, ವಿರೂಪಾಕ್ಷ, ಷಡಕ್ಷರಿ, ನಿಜಗುಣಯೋಗಿ, ಸರ್ವಜ್ಞ ಮೊದಲಾದ ಕವಿ ಪುಂಗವರು ವಿಶೇಷತಃ ಶರಣರ ಪ್ರಕಾಶದಿಂದಲೇ ಬೆಳಗಿದರು. ಈ ಕವಿಗಳ ಪ್ರಕಾಶವನ್ನು ಹೊಂದಿ ಮುಂದೆ ಅನೇಕ ಷಟ್ಪದಿಕಾರರೂ ದಾಸರ ಭಕ್ತಿಪಂಥಗಳೂ ಅನುಭವ ಪದಗಳೂ ಬೆಳಕಿಗೆ ಬಂದವು. ಇವೆಲ್ಲವುಗಳಿಗೆ ಕಾರಣೀಭೂತವಾದ ಮಹಾತೇಜದ ಆಗರವೆಂದರೆ ಶಿವಾನುಭವ ಮಂಟಪ.

ಶಿವಾನುಭವ ಮಂಟಪದಲ್ಲಿ ಶಿವಶರಣರು ಮೊದಲು ವ್ಯಕ್ತಿಗತವಾದ ಆತ್ಮೋನ್ನತಿಯನ್ನು ಮಾಡಿಕೊಂಡೇ ಸಮಾಜೋನ್ನತಿ ಪಾರಮಾರ್ಥಿಕ ತತ್ವಪ್ರಸಾರಗಳಿಗೆ ಕೈಹಾಕಿದರು. “ ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ ? ಮೊದಲು ನಿಮ್ಮ ಮನದ ಕಾಳಿಕೆಯ ಕಳೆದುಕೊಳ್ಳಿರಣ್ಣಾ. ” ಎಂಬ ಬಸವಣ್ಣನವರ ವಚನವನ್ನು ವಿಚಾರಿಸಲು ಆತ್ಮೋನ್ನತಿಯಿಲ್ಲದ ಮನುಷ್ಯನು ಅನ್ಯರ ಉದ್ಧಾರ ಮಾಡಲು ಎಂದೂ ಸಮರ್ಥನಾಗಲಾರನೆಂಬುದು ಸಿದ್ಧವಾಗುತ್ತದೆ. ಶಿವಶರಣರು ಆತ್ಮವೀರರು, ಆತ್ಮ ಬಲಶಾಲಿಗಳು, ಸ್ವಯಂ ಧೀರರು. ಅಂತೆಯೇ ಅವರ ವಾಣಿಯಲ್ಲಿ ಸತ್ಯವಿದೆ, ಓಜಸ್ಸಿದೆ, ಪ್ರಸಾದವಿದೆ, ತೇಜಸ್ಸಿದೆ, ಜನತೆಯನ್ನುದ್ಧಾರ ಮಾಡುವ ಸಾಮರ್ಥ್ಯವಿದೆ. ಅಂಥ ದಿವ್ಯ ವಚನಗಳ ಸಾಮರ್ಥ್ಯದಿಂದಲೇ ಶರಣರು ಸಮಾಜದಲ್ಲಿ ನೆಲೆಗೊಂಡ ಅಸ್ಪೃಶ್ಯತೆಯನ್ನು ಹೋಗಲಾಡಿಸಿದರು. ಜಾತಿ ಭೇದಗಳ ಬೇರನ್ನು ಕಿತ್ತೊಗೆದರು. ಯಜ್ಞಯಾಗಾದಿಗಳನ್ನು ಹುರಿದರು. ದುರ್ಗುಣ ದುರಾಚಾರಗಳನ್ನು ದೂರೀಕರಿಸಿದರು. ಡಾಂಭಿಕತನ ಮೂಢಭಾವನೆ ಅಜ್ಞಾನಗಳಿಗೆ ತಡೆಹಾಕಿದರು. ಕಾಯಕ ಮಾಡುವ ಮಹತ್ವವನ್ನು ತೋರಿಸಿ ಸಮಾಜದಲ್ಲಿ ಉದ್ಯೋಗ ಕಲಾಕೌಶಲ ಗಳನ್ನು ಹೆಚ್ಚಿಸಿದರು. ಮ. ಗಾಂಧಿಯವರಾದರೂ ಸಮಾಜಸುಧಾರಣೆಯ ವಿಷಯದಲ್ಲಿ ಶಿವಶರಣರ ಮಾದರಿಯನ್ನೇ ತೀಡುತ್ತಿರುವರಲ್ಲವೇ ? ಅಂದ ಬಳಿಕ ಶಿವಶರಣರು ಹುಡುಕಿ ತೆಗೆದ ಸಮಾಜ ಸುಧಾರಣಾ ತತ್ವಗಳು

ತ್ರಿಕಾಲಾಬಾಧಿತವಾಗಿವೆಯಲ್ಲವೇ ? ರಶಿಯಾ ದೇಶದ ಸಮಾಜವಾದ ವಾದರೂ ಶಿವಶರಣರ ತತ್ವಗಳನ್ನೇ ಅನುಸರಿಸಿಲ್ಲವೇ ?

ಇದೇ ಮೇರೆಗೆ ಶಿವಶರಣರ ಷಟ್‌ಸ್ಥಲ ಮಾರ್ಗವು ಭಗವದ್ಗೀತೆಯ ಕರ್ಮಮಾರ್ಗ, ಜ್ಞಾನಮಾರ್ಗ, ಭಕ್ತಿಮಾರ್ಗ, ಯೋಗಮಾರ್ಗಗಳಿಗಿಂತ ಯಾವ ದೃಷ್ಟಿಯಲ್ಲಿ ಕಡಿಮೆಯಾಗಿವೆ? ಯಾವ ಆಗಮೋಪನಿಷತ್ತುಗಳು ಶರಣರ ತತ್ವಗಳನ್ನು ಮೀರಿಹೋಗಿವೆ? ಬಾಯಬಲ್, ಕುರಾನ, ಬೌದ್ಧ ಗ್ರಂಥಗಳಲ್ಲಿಯ ತತ್ವಗಳಾದರೂ ಶರಣರ ನುಡಿಗಳನ್ನು ಮೀರುವವುಂಟೇ? ಹೀಗೆ ಸರ್ವಧರ್ಮಗಳ ಸಾರವನ್ನೊಳಗೊಂಡ ಶಿವಶರಣರ ವಚನಗಳು ತ್ರಿಕಾಲದಲ್ಲಿ ಸತ್ಯವಾದವುಗಳೆನ್ನಲಿಕ್ಕೆ ಹೆದರಿಕೆಯೇಕೆ? ಇಂಥ ಉದಾತ್ತವಾದ ಮತ್ತು ದಿವ್ಯವಾದ ತತ್ವಗಳಿಗೆ ಶಕ್ತಿಯನ್ನಿತ್ತ ಸಂಸ್ಥೆ ಯಾವುದು? ಶಿವಾನುಭವ ಮಂಟಪ.

ಅಂಥ ಶಿವಾನುಭವ ಮಂಟಪವು ಈಗ ನಾಮಶೇಷವಾಗಿ ಹೋಗಿದ್ದರೂ ಆ ಶರಣರ ಕೆಲವು ವಚನಗಳು ಇನ್ನೂ ಜೀವಂತವಾಗಿ ಉಳಿದಿರುವದು ವೀರಶೈವರ ಸುದೈವವೆಂದೇ ತಿಳಿಯಬೇಕು. ಅಂಥ ವಚನಗಳನ್ನು ಮೊದಲಿಗೆ ಬೆಳಕಿಗೆ ತಂದ ಶ್ರೀ ಹಳಕಟ್ಟಿಯವರಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸದರೂ ಕಡಿಮೆಯೇ ಸರಿ. ಅಂಥ ವಚನಗಳನ್ನು ಪುನಃ ಸೃಷ್ಟಿಸುವ ಸಮರ್ಥರು ಈ ಮನ್ವಂತರದಲ್ಲಿ ಜನಿಸದಿದ್ದರೂ ಆ ವಚನಗಳ ಸುಧೆಯನ್ನುಂಡು ಆತ್ಮೋನ್ನತಿಯನ್ನು ಮಾಡಿಕೊಳ್ಳಲು ಎಲ್ಲರಿಗೂ ಆಸ್ಪದವಿದೆ. ಈಗ ಅಲ್ಲಲ್ಲಿ ಸ್ಥಾಪಿತವಾದ ಶಿವಾನುಭವ ಮಂಟಪಗಳಲ್ಲಿ ಹಿಂದಿನಂಥ ಮಹಾಶರಣರು ಹುಟ್ಟದಿದ್ದರೂ ಆ ಶರಣರ ವಚನಗಳ ಶ್ರವಣ ಪಠಣದಿಂದ ಸನ್ಮಾರ್ಗಕ್ಕೆ ಹತ್ತುವ ವ್ಯಕ್ತಿಗಳಾದರೂ ಹುಟ್ಟಬಹುದು. ನಮ್ಮ ಸಮಾಜವು ಈಗ ಸ್ವಾರ್ಥ, ಅಧರ್ಮ, ಅನೀತಿ, ಮುಂತಾದವುಗಳ ಹಾವಳಿಯಿಂದ ಬಳಲಿ ಬೆಂಡಾಗಿದೆ.

ಈಗ ನಮಗೆ ಶಾಂತಿಯು ನಿಜವಾಗಿ ವಚನಗಳಿಂದಲೇ ದೊರೆಯುವದೆಂದು ನಾನು ಎದೆ ತಟ್ಟಿ ಹೇಳುತ್ತೇನೆ. ಈ ಮಾತು ಸುಳ್ಳೆನ್ನುವವರು ಕೆಲ ದಿನ ಮಟ್ಟಿಗಾದರೂ ವಚನಗಳನ್ನು ಲಕ್ಷಪೂರ್ವಕವಾಗಿ ಅವಲೋಕಿಸಲಿ. ಅದರಿಂದ ಅವರಿಗೆ ಶಾಂತಿಯುಂಟಾಗುವದೋ ಇಲ್ಲವೋ ಅವರೇ ಕಂಡುಕೊಳ್ಳಲಿ. ಈಗ ಶಿವಾನುಭವ ಮಂಟಪಗಳು ಊರೂರಿಗೆ



ಅವೇಕೆ ? ಮನೆಮನೆಗೂ ಬೇಕು. ಅರ್ಥಾತ್ ಶರಣರ ವಚನಗಳು ಪ್ರಸಾರವಾಗಬೇಕು. ಅವರ ನುಡಿಗಳು ಮೃತ ವಾಕ್ಯಗಳಲ್ಲ. ಅವುಗಳಲ್ಲಿ ಜೀವವಿದೆ, ಚೈತನ್ಯವಿದೆ, ಬಾಳಿನಲ್ಲಿ ಬೆಳಕನ್ನು ಕೊಡುವ ಸಾಮರ್ಥ್ಯವಿದೆ. ಅದುದರಿಂದಲೇ ನಾವು ಮನೆಗೊಂದು ಶಿವಾನುಭವ ಮಂಟಪವನ್ನು ಮಾಡಿಕೊಂಡು ಪ್ರತಿನಿತ್ಯ ಐದು ವಚನಗಳನ್ನಾದರೂ ನಾವು ಸ್ವತಃ ಓದಿ ಮನೆಯವರಿಗೆ ಅದರ ಸ್ವಾದವನ್ನುಣಿಸಿದರೆ ಹಿಂದಿನ ಶಿವಾನುಭವ ಮಂಟಪದ ಒಂದು ಸಹಸ್ರಾಂಶ ಸೇವೆಯನ್ನಾದರೂ ನಾವು ಮಾಡಿದೆವೆಂಬ ಸಮಾಧಾನವುಂಟಾದೀತು. ಅಂಥ ಸುಸಂಧಿಯನ್ನು ಶಿವಶರಣರೇ ನಮ್ಮ ಸಮಾಜಕ್ಕೆ ಉಂಟುಮಾಡಲೆಂದು ನಾನು ಪರಶಿವನನ್ನು ಪ್ರಾರ್ಥಿಸುತ್ತೇನೆ.

— ಶಿವಮೂರ್ತಿ.

# ಬಸವೇಶ್ವರನ ಶಿವಾನುಭವ ಮಂಟಪವು ಮತ್ತು ಅಲ್ಲಿಯ ಚರ್ಚೆಗಳು.

" ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹುವ್ವಾಯಿತ್ತಯ್ಯ ! ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿ ಎಂಬ ಹಣ್ಣಾಯಿತ್ತು ! ತೊಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದೆತ್ತಿಕೊಂಡ " ( ಬಸವ ವಚನ-ಭಕ್ತಸ್ಥಲ )

ಬಸವನು ಕಲ್ಯಾಣದಲ್ಲಿರುವಾಗ ಆತನ ಯಶೋದುಂದುಭಿಯನ್ನು ಕೇಳಿ ನಾನಾ ದೇಶಗಳಿಂದ ಶಿವಶರಣರು ಅಲ್ಲಿಗೆ ಬಂದು ತತ್ವಚಿಂತನೆಯನ್ನು ಮಾಡುವರು. ಇದಕ್ಕೋಸ್ಕರ ಬಸವೇಶ್ವರನು ರಚಿಸಿದ್ಧ ಸ್ಥಾನವೇ ಶಿವಾನುಭವಮಂಟಪವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇಲ್ಲಿಗೆ ಕಾಶ್ಮೀರ, ನೇಪಾಳ, ಬಂಗಾಲಗಳಿಂದಲೂ, ಪಶ್ಚಿಮದಲ್ಲಿ ಗುರ್ಜರ (ಗುಜರಾಥ) ದೇಶದಿಂದಲೂ, ಪೂರ್ವದಲ್ಲಿ ಓಢ್ರ ( ಒರಿಸಾ ) ತುಳುದೇಶಗಳಿಂದಲೂ ಶಿವಶರಣರು ಕಲ್ಯಾಣಕ್ಕೆ ಬಂದರೆಂದು ಚನ್ನಬಸವ ಪುರಾಣದ ೬ ನೇ ಸಂಧಿಯ ೪೮.ನೇ ಪ್ರಕರಣದಲ್ಲಿಯೂ ಬಸವ ಪುರಾಣದ ೬ ನೇ ಸಂಧಿ ೧೮—೧೯ ನೇ ಪದಗಳಲ್ಲಿಯೂ ಹೇಳಿದೆ. ಕಲ್ಯಾಣವು ಮಹಾಮಹಿಮರ ಆಗರವಾಯಿತು. ಭೂಕೈಲಾಸವೆಂದೆನಿಸಿಕೊಂಡಿತು. ಆಗ ಕಲ್ಯಾಣಕ್ಕೆ ಬಂದ ಮಹಿಮರಲ್ಲಿ ಅಲ್ಲಮ, ಸಿದ್ಧರಾಮ, ಮಹಾದೇವಿಯಕ್ಕ, ಮುಕ್ತಾಯಿ ಮೊದಲಾದವರು ಬಹು ಪ್ರಸಿದ್ಧರಾದರು.

ಸಿದ್ಧರಾಮಯೋಗಿಯು ಸೊಲ್ಲಾಪುರದಲ್ಲಿದ್ದು ಅನೇಕ ಗುಡಿಗುಂಡಾರಗಳನ್ನು ಕಟ್ಟಿಸಿ ದಾನ ಧರ್ಮಗಳನ್ನು ಮಾಡುತ್ತ ತನ್ನ ಹಾಗೆ ಧಾರ್ಮಿಕರಾದವರು ಮತ್ತಾರೂ ಇಲ್ಲವೆಂದು ತಿಳಿದಿದ್ದನು. ಅಲ್ಲಮನು ಸೊಲ್ಲಾಪುರಕ್ಕೆ ಹೋದಾಗ್ಗೆ ಸಿದ್ಧರಾಮನ ಚಾರರ ಎದುರಿಗೆ ಈ ಬಗ್ಗೆ ಸಿದ್ಧರಾಮನ ನಿಂದೆಯನ್ನು ಮಾಡಿದನು. ಅವರು ಸಿಟ್ಟಿಗೆದ್ದು ಅಲ್ಲಮನನ್ನು ಹಿಡಿಯ ಹೋಗಲು ಆತನು ಅವರ ಕೈಗೆ ಸಿಗಲಿಲ್ಲ. ಅಲ್ಲಮನನ್ನು ಅವರು ಕಲ್ಲಿನಿಂದ ಹೊಡೆಯಲು ಆತನಿಗೆ ಅವು ತಗಲಲಿಲ್ಲ, ಈ ಅಗಾಧವನ್ನು ನೋಡಿ ಅವರು ತಮ್ಮ ಒಡೆಯನಾದ ಸಿದ್ಧರಾಮನನ್ನೇ ಅಲ್ಲಿಗೆ



ಕರೆತರಲು ಸಿದ್ಧರಾಮನು " ನನ್ನ ನಿಂದೆಯನ್ನು ಮಾಡುವ ಜಂಗಮ ಭಿಕ್ಷುಕನೇ, ನೀನಾರು ? ನಿನ್ನ ನಾಲಿಗೆಯನ್ನು ಸೀಳುವೆನು. " ಎಂದನು.

ಅಲ್ಲಮ:— ಸಿದ್ಧರಾಮನೇ, ಶಿವಯೋಗಿಗಳು ತಮ್ಮಿಂದ ಇರುವೆ ಮೊದಲಾದ ಪ್ರಾಣಿಗಳ ಹಿಂಸೆಯಾಗಬಾರದೆಂದು ಮಾರ್ಗದಲ್ಲಿ ಬಹು ಎಚ್ಚರದಿಂದ ನಡೆಯುವರು. ಮತ್ತು ಕಾಮಕ್ರೋಧಾದಿಗಳ ವಿಕಾರವು ತಮಗೆ ಉಂಟಾಗಬಾರದೆಂದು ಸರ್ವದಾ ತಮ್ಮ ಚಿತ್ತ ವೃತ್ತಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳುವರು. ಸಾಧುಗಳಿಗೆ ಉಚಿತವಾದ ಸಹನಶೀಲತೆಯನ್ನೂ ಶಾಂತಿಯನ್ನೂ ಬಿಟ್ಟು ಈ ವಿಪರೀತ ಕಾರ್ಯವನ್ನೇಕೆ ನೀನು ಅವಲಂಬಿಸಿದಿ ?

ಇದನ್ನು ಕೇಳಿ ಶ್ರೀ ಸಿದ್ಧರಾಮನು ಸಿಟ್ಟಿನಿಂದ ಇವನನ್ನು ಸುಡುವೆನೆಂದು ಉರಿಗಣ್ಣನ್ನು ತೆರೆಯಲು ಸುತ್ತಲಿನ ಪ್ರದೇಶವು ಸುಟ್ಟಿತೇ ಹೊರತು ಅಲ್ಲಮನು ಅಚ್ಚಳಿಯದಂತಿದ್ದನು. ಶ್ರೀ ಸಿದ್ಧರಾಮನು ಈ ವಿಚಿತ್ರವನ್ನು ಕಂಡು ಆತನು ತನಗಿಂತಲೂ ಮಹಿಮನೆಂದರಿತು ಆತನ ಪಾದಕ್ಕೆರಗಿ " ಎಲೈ ಸ್ವಾಮಿಯೇ, ನಿನ್ನ ದರ್ಶನದಿಂದ ನನ್ನ ಆತ್ಮಜ್ಞಾನವು ಅಂಕುರವಾಗಿ ಸರ್ವರಲ್ಲಿ ಸಮದೃಷ್ಟಿ ಇಡಲು ನಾನು ಕಲಿತೆನು. ನಾನೊಬ್ಬನೇ ಜಗತ್ತಿನಲ್ಲಿ ವಂದ್ಯನೆಂದು ತಿಳಿದುಕೊಂಡಿದ್ದೆನು. ಈ ಸಮತೆಯು ನನ್ನಲ್ಲಿ ನಿರಂತರವಾಗಿ ಉಳಿಯುವಂತೆ ಉಪದೇಶ ಮಾಡು " ಎಂದನು.

ಅಲ್ಲಮ:— ಎಲೈ ಸಿದ್ಧರಾಮನೇ, ಮನಸ್ಸಿನಲ್ಲಿ ವೈರಾಗ್ಯವನ್ನು ಹೊಂದಿ ಅದನ್ನು ದೃಢವಾಗಿ ಮಾಡಲೆತ್ನಿಸಿದರೆ ಅದರಿಂದ ಸಾತ್ವಿಕ ಗುಣವು ಉಂಟಾಗಿ ಮನಸ್ಸು ಸ್ಥಿರವಾಗುವದು. ಸ್ಥಿರ ಮನಸ್ಸಿನಿಂದ ಶಾಂತಿಯು ಉದಯಿಸುವದು. ಶಾಂತಿಯಿಂದ ಸುಖ ಉಂಟಾಗುವದು. ಶಾಂತಿ ಸ್ವಭಾವಗಳಿಗೆ ಭೇದಬುದ್ಧಿ ಇರುವದಿಲ್ಲ. ಮನಸ್ಸನ್ನು ಆತ್ಮನ ಕಡೆಗೆ ಒಲಿಸಬೇಕು. ಕೊಬ್ಬಿದ ಇಂದ್ರಿಯಗಳನ್ನು ಸತ್ಕಾರ್ಯವೆಂಬ ಬಂಡಿಗೆ ಹೂಡಿ ದುಡಿಸಿಕೊಳ್ಳಬೇಕು. ಇಂದ್ರಿಯಗಳನ್ನು ಜಯಿಸಿದವನೇ ಮೋಕ್ಷ ಹೊಂದುವನು.

ಸಿದ್ಧರಾಮ:— ಗುರುವರ್ಯನೇ, ಇಂದ್ರಿಯಗಳನ್ನು ಗೆಲ್ಲುವ ರೀತಿಯನ್ನು ದಯಮಾಡಿ ಹೇಳಬೇಕು.

ಅಲ್ಲಮಃ—ಮನವು ಇಂದ್ರಿಯಗಳಿಗೆ ಅರಸಾಗಿದೆ. ಮನಸ್ಸನ್ನು ವಿಷಯ ಸುಖಗಳಿಂದ ಹಿಮ್ಮೆಟ್ಟಿಸಿ ಆತ್ಮಚಿಂತನೆಯ ಕಡೆಗೆ ತಿರುಗಿಸಬೇಕು. ಅಂದರೆ ಇಂದ್ರಿಯಗಳು ತಾವೇ ಆತ್ಮರೂಪದ ಕಡೆಗೆ ಒಲಿಯುವವು.

ಸಿದ್ಧರಾಮಃ— ದಾನಧರ್ಮಗಳಿಂದ ಮೋಕ್ಷವು ಸಿದ್ಧಿಯಾಗುವದಿಲ್ಲವೆ? ಇದಕ್ಕೆ ಸಂಸಾರವು ಸಾಧನವಲ್ಲವೇ?

ಅಲ್ಲಮಃ— ಕರ್ಮಮಾರ್ಗವು ಸಾಮಾನ್ಯರ ವರ್ತನವು. ಒಕ್ಕಲಿಗರು ಹೇಗೆ ಕಷ್ಟಪಟ್ಟು ಬೀಜ ಬಿತ್ತಿ ಬೆಳೆಯನ್ನು ತಕ್ಕೊಳ್ಳುವರೋ ಅದರಂತೆ ಕರ್ಮಿಗಳಿಗೆ ಅದರ ಪಾಪಪುಣ್ಯಕ್ಕೆ ಸರಿಯಾಗಿ ಫಲವು ಲಭಿಸುವದು. ಈ ಫಲವನ್ನು ಭೋಗಿಸಿಯೇ ತೀರಬೇಕಾದ್ದರಿಂದ ಅವರು ಜನನ ಮರಣದಿಂದ ಕೂಡಿದ ಸಂಸಾರಬಂಧನದಿಂದ ಬಿಡುಗಡೆಯಾಗುವದಿಲ್ಲ. ಆದರೆ ವೀರಶೈವ ದೀಕ್ಷೆಯನ್ನು ಪಡೆದು ಇಷ್ಟಲಿಂಗಸಂಬಂಧಿಯಾಗಿ ಸರ್ವಭೋಗ ಕ್ರಿಯೆಗಳನ್ನು ಲಿಂಗಕ್ಕರ್ಪಿಸುತ್ತ ಲಿಂಗಧ್ಯಾನಿಯಾಗಿ ಶಿವಯೋಗದಲ್ಲಿ ನಿರತನಾದವನಿಗೆ ಮಾತ್ರ ಭವಬಂಧನವು ನಾಶವಾಗುವದು. ಮನಸ್ಸನ್ನು ಸ್ಥಿರಗೊಳಿಸಿ ಸರ್ವಕರ್ಮಗಳನ್ನು ಬಿಟ್ಟು ಚಿತ್ ಸ್ವರೂಪಾತ್ಮಕವಾದ ಲಿಂಗದಲ್ಲಿ ನಿಶ್ಚಲ ದೃಷ್ಟಿಯನ್ನಿಟ್ಟರೆ ಅಂಥವನನ್ನು ಬ್ರಹ್ಮದೇವನು ಕೂಡ ನಾಶಮಾಡನು. ಕರ್ಮಕಾಂಡಿಗಳು ಕರ್ಮದಲ್ಲಿ ಸ್ವಲ್ಪ ತಪ್ಪು ಮಾಡಿದರೆ ಅದು ನಿರರ್ಥಕವಾಗುವದೆಂದು ಶಾಸ್ತ್ರವು ಹೇಳುವದು. ಬಾಹ್ಯ ಜ್ಞಾನವು ಪ್ರಪಂಚದ ಕುಟಿಲತನವು. ಅಂತಜ್ಞಾನವು ಅನುಭವದಿಂದ ತಿಳಿಯತಕ್ಕದ್ದು. ಜಾಣನು ಬಾಹ್ಯ ವಿಷಯಗಳ ವಾಸನೆಯನ್ನು ಕಿತ್ತುಹಾಕಿ ಆ ಮನಸ್ಸನ್ನು ವಿಜ್ಞಾನರೂಪ ದೀಪಕ್ಕೆ ಎದುರಿನಲ್ಲಿರಿಸಿ ಅದನ್ನು ವಶಮಾಡಿಕೊಂಡು ಸರ್ವದಾ ಸದಸದ್ವಿಚಾರದಲ್ಲಿರುವನು. ವಿಷಪಾನ ಮಾಡಿದವನನ್ನು ವಿಷ ವೈದ್ಯನೂ ರಕ್ಷಿಸನು. ಹಾಗೆಯೇ ವಿಷಯ ಸುಖದ ಸೆಳವಿಗೆ ಬಿದ್ದು ಭ್ರಷ್ಟನಾದವನನ್ನು ಬ್ರಹ್ಮನೂ ರಕ್ಷಿಸನು. ಮೋಕ್ಷಕ್ಕೆ ಶಿವಜ್ಞಾನವೊಂದೇ ಕಾರಣವು. ಲಿಂಗಪೂಜಾದಿ ಕ್ರಿಯೆಗಳು ಜ್ಞಾನದ ಕುರುಹುಗಳು. ಯಜ್ಞಾದಿ ಕ್ರಿಯೆಗಳನ್ನಾಚರಿಸುವುದು ಅಜ್ಞಾನದ ಗುರುತು. ಎಂಥ ಜ್ಞಾನಿಯಾದರೂ ಲಿಂಗಪೂಜಾದಿ ಕ್ರಿಯೆಗಳನ್ನು ಬಿಡಲಾರನು! ಕಪಟವನ್ನು ಕಿತ್ತುಹಾಕಿ ಏಕಾಕಿಯಾಗಿ ಯೋಗಸಾಧನೆಯಲ್ಲಿರಬೇಕು. ಶಿವಜೀವೈಕ್ಯ ಸ್ವರೂಪದಲ್ಲಿ ದೃಢಭಾವವುಳ್ಳವನಾಗಿ ಒಳಗೂ ಹೊರಗೂ ಪರಿಶುದ್ಧತೆಯನ್ನು



ಹೊಂದಿ ಮನಸ್ಸಿನ ಚಾಂಚಲ್ಯವನ್ನು ನಿಲ್ಲಿಸಬೇಕು. ಏಕಾಗ್ರ ಚಿತ್ತವನ್ನು ಮೊದಲು ಇಷ್ಟಲಿಂಗದಲ್ಲಿ ತೊಡಗಿಸಬೇಕು. ಹೀಗೆ ಬೋಧಿಸಿ ಸಿದ್ಧರಾಮನ ಇಚ್ಛೆಯಂತೆ ಅಲ್ಲಮನು ಆತನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟು ಕಲ್ಯಾಣಕ್ಕೆ ಕರೆದುಕೊಂಡು ಬಂದನು.

ಇದರಂತೆಯೇ ಆ ಕಾಲಕ್ಕೆ ಮುಕ್ತಾಯಿ ಎಂಬ ಶರಣಳೂ ಪ್ರಸಿದ್ಧಳಾಗಿದ್ದಳು. ಒಂದು ದಿನ ಅಲ್ಲಮನು ಸಂಚರಿಸುತ್ತ ಮುಕ್ತಾಯಿಯು ದುಃಖದಲ್ಲಿರುವಳೆಂದು ಯೋಗ ದೃಷ್ಟಿಯಿಂದ ತಿಳಿದು ಅವಳೆಡೆಗೆ ಬಂದು ಆವಳ ದು:ಖದ ಕಾರಣವನ್ನು ಕೇಳಿದನು. ಅವಳು ತನಗೆ ಅಜಗಣ್ಣನೆಂಬ ತಮ್ಮನಿದ್ದನೆಂತಲೂ ಆತನು ಶಿವಭಕ್ತಿಯಲ್ಲಿ ಧುರೀಣನಾಗಿ ತನಗೆ ಶಿವಾಚಾರದಲ್ಲಿ ಗುರುವಿನಂತಿದ್ದನೆಂತಲೂ ಅವನು ತೀರಿಹೋದದ್ದರಿಂದ ತನಗೆ ದುಃಖವಾಗಿದೆ ಎಂತಲೂ ಹೇಳಿದಳು. ಅದಕ್ಕೆ ಅಲ್ಲಮನು ಜಗತ್ತಿನಲ್ಲಿ ಪ್ರಮಥರು ಯಾವುದಾದರೊಂದು ನಿಮಿತ್ತದಿಂದ ಭೂಮಿಯಲ್ಲಿ ಜನ್ಮವೆತ್ತುವರು. ತಮ್ಮ ಕೆಲಸವು ಪೂರ್ತಿಯಾದೊಡನೆ ಕೈಲಾಸಕ್ಕೆ ತೆರಳುವರು. ಚನ್ನಾಗಿ ವಿಚಾರಮಾಡಲು ಅವರಿಗೆ ಯಾವನೊಬ್ಬನ ಕೂಡ ಅಣ್ಣ, ತಮ್ಮ, ತಂದೆ, ಮಗನೆಂಬ ಸಂಬಂಧವಿರುವದಿಲ್ಲ. ಇದರಿಂದ ಅಜ್ಞಾನಿಗಳಿಗೆ ಮಾತ್ರ ದುಃಖವಾಗುವದು. ಈಶ್ವರಾಜ್ಞೆಯನ್ನು ಮೀರಲು ಯಾರೂ ಸಮರ್ಥರಲ್ಲ. ತಮ್ಮ ಕರ್ಮಫಲವನ್ನು ತಾವೇ ಅನುಭೋಗಿಸಬೇಕು. ಒಬ್ಬರ ಕೂಡ ಮತ್ತೊಬ್ಬರು ಸಾಯುವದಿಲ್ಲ. ಗಂಡ ಹೆಂಡಿರ, ಅಣ್ಣ ತಮ್ಮಂದಿರ ಇವೇ ಮೊದಲಾದ ಸಂಬಂಧಗಳು ಸಾಯುವ ವರೆಗೆ ಇರುತ್ತವೆ. ಇವೆಲ್ಲ ಸಂಬಂಧಗಳು ಪೂರ್ವ ಕರ್ಮದಿಂದ ಉಂಟಾಗುತ್ತವೆ. ಆದ್ದರಿಂದ ಪಾಪ ಪುಣ್ಯ ರೂಪವಾದ ಸರ್ವಕರ್ಮಗಳನ್ನು ತ್ಯಜಿಸು. ಸಾಧನ ಚತುಷ್ಟಯಗಳಿಂದ ಶಿವಭಕ್ತಿಯನ್ನು ಸಾಧಿಸಬೇಕು. ಆ ಸಾಧನಗಳಾವುಗಳೆಂದರೆ— (೧) ನಿತ್ಯಾನಿತ್ಯವಿವೇಕ. ಆತ್ಮಸುಖವೇ ನಿತ್ಯವಾದದ್ದು. ಸಂಸಾರ ಸುಖವು ಅನಿತ್ಯವಾದದ್ದು. (೨) ಫಲಭೋಗ ವಿರಾಗ. ಇಹಪರ ಲೋಕಗಳ ಬಗ್ಗೆ ವೈರಾಗ್ಯ ಉಂಟಾಗುವಿಕೆ. (೩) ಮನೋ ನಿಗ್ರಹ, ಇಂದ್ರಿಯ ನಿಗ್ರಹ, ಫಲತ್ಯಾಗ ವಿಷಯಗಳಲ್ಲಿ ವಿರಕ್ತಿ, ಆಸ್ತಿಕ್ಯಬುದ್ಧಿ ಮತ್ತು ಚಿತ್ತಸಮಾಧಾನವೆಂಬ ಶಮದಮಾದಿ ಸಾಧನಗಳು. (೪) ಮೋಕ್ಷದ ಇಚ್ಛೆ. ಈ ನಾಲ್ಕು ಸಾಧನಗಳು ಅನುಕೂಲ ಸ್ಥಿತಿಯಲ್ಲಿದ್ದರೆ ಜೀವನಿಗೆ

ಶಿವಜ್ಞಾನವು ಪ್ರಾಪ್ತಿಯಾಗುವದು, ಮಹೇಶ್ವರನೇ ಮಾಯೋಪಾಧಿಯಿಂದ ಈಶ್ವರನೆಂತಲೂ ಅವಿದ್ಯೋಪಾಧಿಯಿಂದ ಜೀವನೆಂತಲೂ ಎರಡು ಪ್ರಕಾರವಾಗಿರುವನು. ಸ್ಥೂಲ ದೇಹವು ಪೃಥ್ವಿವ್ಯಾದಿ ಪಂಚ ಮಹಾಭೂತಗಳಿಂದಾಗಿದೆ. ಪಂಚೀಕರಣವಿಲ್ಲದೆ ಕೇವಲ ಪಂಚ ಮಹಾ ಭೂತಗಳಿಂದ ಸೂಕ್ಷ್ಮ ದೇಹವಾಗಿದೆ. ಸ್ಥೂಲ ಸೂಕ್ಷ್ಮದೇಹ ಮೂರಿದ್ದು ಕಾರಣ ದೇಹ. ಈ ದೇಹತ್ರಯಂಗಳಲ್ಲಿ ಲಿಂಗವು ನೆಲೆಗೊಳ್ಳಲು ಶಿವಜೀವರ ಐಕ್ಯವು ಸಂಭವಿಸುವದು. ಅನಾದಿ ಕಾಲದಿಂದ ಬಂದ ಅಜ್ಞಾನದಿಂದ ಜೀವನು ಸಂಸಾರ ಬಂಧನದಲ್ಲಿ ಬೀಳುತ್ತಾನೆ. ತನ್ನ ಇಚ್ಛೆಗಳು ಪೂರ್ಣವಾಗದೆ ಇರುವ ತನಕ ದುಃಖ ಪಡುತ್ತಾನೆ. ಕೊಡವನ್ನು ಒಯ್ದ ಕಡೆಗೆ ಅದರಲ್ಲಿಯ ಆಕಾಶವು ಬರುವಂತೆ ದೇಹವು ಹೋದ ಕಡೆಗೆ ಜೀವನು ಬರುವನು. ಕರ್ಮಫಲದಿಂದ ಜೀವನು ಮನುಷ್ಯ ಪಶುಪಕ್ಷಿ ಮೊದಲಾದವುಗಳ ಜನ್ಮವೆತ್ತುವನು. ಅದರೆ ಜೀವಾತ್ಮನೇ ಪರಮಾತ್ಮನೆಂದು ಯಾರೂ ಚಿಂತಿಸುತ್ತಾರೋ ಅಂಥವನಿಗೆ ಶಿವನು ಒಲಿಯುತ್ತಾನೆ. ಶಿವನು ದೇವತೆಗಳ ಶರೀರದಲ್ಲಿರುವಾಗ ಸರ್ವಜ್ಞನೆಂದೂ ಮನುಷ್ಯ ಮೊದಲಾದ ಪ್ರಾಣಿಗಳ ದೇಹದಲ್ಲಿರುವಾಗ ಕಿಂಚಿಜ್ಞನೆಂದೂ ಆಶ್ರಯ ಭೇದದಿಂದ ತೋರುತ್ತಾನೆ. ಈ ಭೇದಜ್ಞಾನವು ಉಪಾಧಿ ಮೂಲಕ ಉಂಟಾಗುವದು. ಉಪಾಧಿಯನ್ನು ನಾಶಗೊಳಿಸಿದರೆ ಉಳಿಯುವದು. ಚಿತ್ ಸ್ವರೂಪನು ಸದಾಶಿವ ಮೂರ್ತಿಯು. ಶರೀರವು ಅನಿತ್ಯವಾದ್ದರಿಂದ ವೀರಶೈವರಲ್ಲಿ ಶಿವನು ಗುರುರೂಪದಿಂದ ಜೀವನಿಗೆ ಶಿವದೀಕ್ಷಾ ಸಂಸ್ಕಾರವನ್ನು ಮಾಡಿ ಅವನಲ್ಲಿ ಶಿವಭಕ್ತಿಯನ್ನು ನೆಲೆಗೊಳಿಸುವನು. ವೀರಶೈವರಿಗೆ ಜನನ ಮರಣ ಸೂತಕವಿಲ್ಲ. ಮತ್ತು ಅವುಗಳಿಂದಾಗುವ ಸುಖ ದುಃಖಗಳೂ ಇಲ್ಲ. ಲಿಂಗೈಕ್ಯರಾದರೆಂದರೆ ಅವರಿಗೆ ಹೆಚ್ಚು ಕಲ್ಯಾಣವಾದಂತಾಗುವದು. ಅಂತ್ಯ ಕ್ರಿಯೆಯನ್ನು ಅತಿ ಸಂಭ್ರಮದಿಂದ ಈ ಕಾರಣದಿಂದಲೇ ಮಾಡುವರು. ನಿನ್ನ ತಮ್ಮನಾದ ಅಜಗಣ್ಣನು ಪ್ರಮಥನಿದ್ದು ನಾಶಹೊಂದದೆ, ಆಕಾಶದಂತೆ ಸರ್ವತ್ರ ವ್ಯಾಪಿಸಿ ಶಿವನೊಡನೆ ಬೆರೆತಿರುವನು. ಚಿಂತೆಮಾಡಬೇಡ. ಆತನು ನಿನ್ನಲ್ಲಿಯೂ ಇರುವನು. ನೀನು ದುಃಖಿಸುವುದು ವೀರಶೈವಾಚಾರಕ್ಕೆ ವಿರೋಧವಾಗಿರುವದು.

ಮುಕ್ತಾಯಿಃ— ಮನುಷ್ಯಾದಿ ಪ್ರಾಣಿಗಳು ಅನೇಕ ವ್ಯವಹಾರಗಳನ್ನು ಮಾಡುತ್ತ ಬಂದು, ಸಾಯುವಾಗ್ಗೆ ಒಮ್ಮೆಲೇ ಹೇಗೆ ಬಿಡಲಾದೀತು?



ಅಲ್ಲಮಃ— ಹಾಲು ಹಸುಮಕ್ಕಳ ಮುಖ್ಯ ಜೀವನವಿದ್ದು ಕೂಸು ಹುಟ್ಟಿದ ಕೂಡಲೇ ತಾಯಿಯ ಮೊಲೆಯಲ್ಲಿ ಅದು ಉತ್ಪನ್ನವಾಗುತ್ತದೆ. ಕೂಸು ದೊಡ್ಡದಾಗುತ್ತ ಹೋದ ಹಾಗೆ ಹಾಲು ಕುಡಿಸುವದನ್ನು ತಾಯಿಯು ಕಡಿಮೆ ಮಾಡುತ್ತಾಳೆ. ಆ ವೇಳೆ ಹಾಲಿನಲ್ಲಿ ಸಕ್ಕರೆ ಹಾಕಿ ಪಾಯಸ ಮಾಡಿ ಉಣ್ಣಿಸುತ್ತಾಳೆ. ಕೆಲವು ದಿನಗಳ ಮೇಲೆ ಅನ್ನವನ್ನು ಉಣ್ಣಿಸುತ್ತಾಳೆ. ಹೀಗೆ ಬರಬರುತ್ತ ಹಾಲಿನ ಮರೆಯುಂಟಾಗುವದು. ಹೀಗೆಯೇ ಗುರುವಿನ ಉಪದೇಶದಿಂದ ಶಿವಭಕ್ತರಲ್ಲಿ ಭಕ್ತಿಯುಂಟಾಗುವದು. ಭಕ್ತಿಯಿಂದ ಮೋಕ್ಷವು ಲಭಿಸುವದು. ಹೀಗೆ ಹೇಳಿ ಅವಳಿಗೆ ವೇಧಾದೀಕ್ಷೆಯನ್ನು ಕೊಟ್ಟು ಆಶೀರ್ವದಿಸಿದನು.

ಹೀಗೆಯೇ ಮಹದೇವಿಯಕ್ಕನೆಂಬ ಮತ್ತೋರ್ವಳು ಕಲ್ಯಾಣಕ್ಕೆ ಬಂದಳು. ಇವಳ ಜೀವನ ಚರಿತ್ರೆಯನ್ನಿಷ್ಟು ವಿಚಾರಿಸುವಾ. ಮಾಯೆಯು ಅಲ್ಲಮನನ್ನು ಸೋಲಿಸಲಿಲ್ಲನೆಂತಲೂ ಅಲ್ಲಮನು ಆಕೆಯನ್ನು ಜಯಿಸಿದನೆಂತಲೂ ಹಿಂದೆ ಹೇಳಿದೆ. ಆ ಮೇಲೆ ಮಾಯೆಯು ನಿರಾಶೆಯುಳ್ಳವಳಾಗಿ ಕೈಲಾಸಕ್ಕೆ ಬಂದು ಪಾರ್ವತಿಗೆ ಆ ಸಂಗತಿಯನ್ನು ಹೇಳಲಾಗಿ ಶಿವನು ಪಾರ್ವತಿಯನ್ನು ಕುರಿತು “ಅಲ್ಲಮನು ಪರಮ ವೈರಾಗಿಯು. ಅವನನ್ನು ಜಯಿಸುವ ಹೆಮ್ಮೆಯನ್ನು ಬಿಡು. ಆದರೂ ನಿನ್ನ ಚಿತ್ಕಳೆಯನ್ನು ಸ್ತ್ರೀ ರೂಪದಿಂದ ಭೂಮಿಗೆ ಕಳಸು. ಅಲ್ಲಮನು ಅವಳಿಗೆ ನಿಶ್ಚಯವಾಗಿ ವಶನಾಗುವನು.” ಎಂದನು. ದಕ್ಷಿಣದಲ್ಲಿ ಉಡುತಡಿ ಎಂಬಲ್ಲಿ ವಿಮಲನೆಂಬ ವೀರಶೈವನೊಬ್ಬನಿದ್ದನು. ಅವನಿಗೆ ಸುಮತಿ ಎಂಬ ಸುಶೀಲೆಯಾದ ಹೆಂಡತಿ ಇದ್ದಳು. ಪಾರ್ವತಿಯು ಚಿತ್ಕಳೆಯು ಸುಮತಿಯ ಗರ್ಭದಲ್ಲಿ ಪ್ರವೇಶ ಮಾಡಿ ಕಪ್ಪೆ ಚಿಪ್ಪಿನಲ್ಲಿ ಮುತ್ತು ಹುಟ್ಟುವಂತೆ ಮಹಾದೇವಿಯಕ್ಕನೆಂಬ ಹೆಸರಿನಿಂದ ಹುಟ್ಟಿದಳು. ಈಕೆಯು ಪ್ರಾಯಕ್ಕೆ ಬರಲು ಈಕೆಯ ಅಸಾಧಾರಣವಾದ ರೂಪವನ್ನು ನೋಡಿ ಆ ನಗರದ ರಾಜನಾದ ಕೌಶಿಕನು ಅವಳನ್ನು ಲಗ್ನವಾಗಬೇಕೆಂದು ಅವಳ ತಾಯಿ ತಂದೆಗಳಿಗೆ ಹೇಳಿ ಕಳುಹಿದನು. ರಾಜನು ಜೈನ ಕುಲದವನಾದುದರಿಂದ ಅವರು ಅದಕ್ಕೆ ಒಪ್ಪಲಿಲ್ಲ. ರಾಜನು ಸ್ವತಃ ಮಹಾದೇವಿಯನ್ನೇ ಕೇಳಲು ಆಕೆಯು ಅರಸನು ವೀರಶೈವ ದೀಕ್ಷೆಯನ್ನು ಹೊಂದಿದರೆ ತಾನು ಅತನನ್ನು ಲಗ್ನವಾಗುವೆನೆಂತಲೂ ಇಲ್ಲವಾದರೆ ತಾನು ಸನ್ಯಾಸಿನಿಯಾಗುವೆನೆಂತಲೂ ಹೇಳಿದಳು. ರಾಜನು

ಅದಕ್ಕೊಪ್ಪದ್ದರಿಂದ ಆಕೆಯು ಉಡಿಗೆಯನ್ನು ತೆಗೆದೊಗೆದು ಗಿರಿಗಂಹರಗಳನ್ನು ತಿರುಗುತ್ತ ಕಡೆಗೆ ಬಸವೇಶ್ವರನ ವಾರ್ತೆಯನ್ನು ಕೇಳಿ ಕಲ್ಯಾಣಕ್ಕೆ ಬಂದಳು. ಈಕೆಯು ತನ್ನ ವಚನದಲ್ಲಿ ಬಸವಾದಿ ಪ್ರಮಥರನ್ನು ಹೀಗೆ ಸ್ತುತಿಸಿರುವಳು—"ಬಸವಣ್ಣನ ಮನೆಯ ಮಗಳಾದ ಕಾರಣ ಭಕ್ತಿ ಪ್ರಸಾದವ ಕೊಟ್ಟನು. ಪ್ರಭುದೇವರ ತೊತ್ತಿನ ತೊತ್ತಿನ ಮರಿದೊತ್ತಿನ ಮಗಳಾದ ಕಾರಣ ಜ್ಞಾನ ಪ್ರಸಾದವ ಕರುಣಿಸಿ ಕೊಟ್ಟನು. ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ ಪ್ರಾಣ ಪ್ರಸಾದವ ಕರುಣಿಸಿ ಕೊಟ್ಟನು. ಮಡಿವಾಳಯ್ಯನ ಮನೆಯ ಮಗಳಾದ ಕಾರಣ ನಿರ್ಮಲ ಪ್ರಸಾದವ ಕರುಣಿಸಿ ಕೊಟ್ಟನು. ಇಂತೀ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ಕರುಣದ ಕಂದನೆಂದು ತಲೆದಡಹಿದ ಕಾರಣ ಚನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು."

ಇಂಥ ಮಹಾಜ್ಞಾನಿಗಳು ಕಲ್ಯಾಣದಲ್ಲಿ ಬಸವನನ್ನು ಆಶ್ರಯಿಸಿರಲಾಗಿ ಬಸವನು ತತ್ವಚಿಂತನೆಗಾಗಿ ಒಂದು ಸಮಿತಿಯನ್ನೇ ಸ್ಥಾಪಿಸಿದನು, ಈ ತತ್ವ ಚರ್ಚೆಗಾಗಿ ಬಸವನು ತನ್ನ ಅರಮನೆಯ ಒಂದು ಭವ್ಯವಾದ ಮಂಟಪವನ್ನೇ ಅದಕ್ಕೆ ಪ್ರತ್ಯೇಕವಾಗಿ ವಿನಿಯೋಗಿಸಿದನು. ಇದಕ್ಕೆ ಅನುಭವ ಮಂಟಪವೆಂದು ಹೆಸರಾಯಿತು. ಷಟ್‌ಸ್ಥಲ ಬ್ರಹ್ಮಿಗಳೆಂದು ಪ್ರಸಿದ್ಧರಾದವರೇ ಇದರಲ್ಲಿ ಪ್ರವೇಶಿಸಲು ಯೋಗ್ಯರಾಗುತ್ತಿದ್ದರು. ಇದಕ್ಕೆ ಸೇರಿದವರಲ್ಲಿ ಕೆಲವರು ಎಂಥ ಮಹಾತ್ಮರಿದ್ದರೆಂದು ಮಹಾದೇವಿಯಕ್ಕನು ತನ್ನ ವಚನದಲ್ಲಿ "ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢಸ್ಥಲ, ಸಿದ್ಧರಾಮಯ್ಯನ ಸಮಾಧಿಸ್ಥಲ, ಇಂತಿವರ ಕರುಣ ಪ್ರಸಾದವೆನಗಾಯಿತ್ತು." ಈ ಅನುಭವ ಮಂಟಪದಲ್ಲಿ ಪರಮ ಜ್ಞಾನ ಮೂರ್ತಿಯಾದ ಪ್ರಭುವು ಅತ್ಯಂತ ಮಿಗಿಲಾಗಿ ಪ್ರಕಾಶಿಸುತ್ತಿದ್ದನು. ಸಂಗನಬಸವನೆಂಬ ವಚನಕಾರನು ಅನುಭವ ಮಂಟಪದ ವಿವರಣೆಯನ್ನು ಹೃದಯಂಗಮವಾಗಿ ಮಾಡಿರುವನು. ಅದರಲ್ಲಿ ಕೆಲವು ಭಾಗವನ್ನು ಇಲ್ಲಿ ಕೊಡುತ್ತೇವೆ. "ಆ ನಿಲುಕಡೆಯ ನಿಜವೆಂತೆಂದೊಡೆ ಪ್ರಥಮದಲ್ಲಿ ಘಟ್ಟಿವಾಳ ನೂರೊಂದು ವಿರಕ್ತ ಅಜಗಣ್ಣ ತಂದೆಗಳು, ಅಕ್ಕನಾಗಮ್ಮ, ಮಹಾದೇವಿ, ನೀಲಲೋಚನೆ, ಮುಕ್ತಾಂಗನೆ ಮೊದಲಾದ ಶರಣಗಳ ನಿರವಯ



ಸ್ಥಲಕ್ಕೆ ಕಾರಣವಾದ ಶೂನ್ಯ ಲಿಂಗಾನುಭಾವವ ಬೋಧಿಸಿ ೨೧೬ ಸಕೀಲು ಮೊದಲಾದ ಸಕೀಲವನರುಹಿ ಅಸಮ್ಮರ ಕುಂಡಲಿ, ಶೂನ್ಯ ಲಿಂಗೋದ್ಧರಣೆ, ಚಿದಂಬರ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ನಿರ್ವಾಣ ಸಮಾಧಿಯ ಪಥವ ತೋರಿದರು ನೋಡಾ. ದ್ವಿತೀಯದಲ್ಲಿ ಬಸವ, ಚನ್ನಬಸವ, ಸಿದ್ಧರಾಮ ಮೊದಲಾದ ಶರಣಗಳ ನಿರಾಲಂಬ ಸ್ಥಲಕ್ಕೆ ಕಾರಣವಾದ ನಿಃಕಳಂಕ ಲಿಂಗಾನುಭಾವವ ಬೋಧಿಸಿ ೨೧೬ ಸಕೀಲವನರುಹಿ ಅಷ್ಟಾವರಣ ಜ್ಞಾನಚಕ್ರ ನೂರೊಂದು ಪ್ರಣವ ಅನಾದಿ ಜಂಗಮ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ಸಚ್ಚಿದಾನಂದ ಸಮಾಧಿಯ ಪಥವ ತೋರಿದರು ನೋಡಾ. ತೃತೀಯದಲ್ಲಿ ಮರುಳು ಶಂಕರ, ನಿಜಗುಣ ಚನ್ನಮಲ್ಲದೇವರು ಮೊದಲಾದ ಶರಣಗಳ ನಿಜೈಕ್ಯ ಸ್ಥಲಕ್ಕೆ ಕಾರಣವಾದ ಮಹಾಲಿಂಗಾನುಭಾವವ ಬೋಧಿಸಿ, ನಿರವಯ ಸಮಾಧಿಯ ಪಥವ ತೋರಿದರು. ಚತುರ್ಥದಲ್ಲಿ ಸಮಸ್ತ ಜಂಗಮಾಕೃತಿಯ ಧರಿಸಿದ ಶರಣಗಳ ನಿಜ ಶರಣ ಸ್ಥಲಕ್ಕೆ ಕಾರಣವಾದ ಪ್ರಸಾದಲಿಂಗಾನುಭಾವವ ಬೋಧಿಸಿ ನಿಜಶಿವ ಸಮಾಧಿಯ ಪಥವ ತೋರಿದರು. ಪಂಚಮದಲ್ಲು ರೇವಣಸಿದ್ಧ ಮರುಳಸಿದ್ಧ ಏಕೋರಾಮ ಪಂಡಿತಾರಾಧ್ಯ ಮೊದಲಾದ ಶರಣಗಳ ನಿಜ ಪ್ರಾಣಲಿಂಗಿ ಸ್ಥಲಕ್ಕೆ ಕಾರಣವಾದ ಜಂಗಮ ಲಿಂಗಾನುಭಾವವ ಬೋಧಿಸಿ, ಬಯಲ ಸಮಾಧಿಯ ಪಥವ ತೋರಿದರು. ಷಷ್ಠಮದಲ್ಲಿ ನಮಃಶಿವಾಯದೇವನು, ಷಡಕ್ಷರಾಂಕ, ಗಣದಾಸಿವೀರಣ್ಣ, ಹರಳಯ್ಯ ಮೊದಲಾದ ಶರಣರ್ಗೆ ನಿಜ ಪ್ರಸಾದಿ ಸ್ಥಲಕ್ಕೆ ಕಾರಣವಾದ ಶಿವಲಿಂಗಾನುಭಾವವ ಬೋಧಿಸಿ......ಗೋಳಕ ಸಮಾಧಿಯ ಪಥವ ತೋರಿದರು. ಸಪ್ತಮದಲ್ಲಿ ಪಂಚಾಕ್ಷರ ಕಲಿಗಣನಾದೊಡೆಯರು ಚಿಲುಮೆ ಅಗ್ಗಣಿಯ ಭಕ್ತರು, ಅಂತ್ಯ ಪ್ರಸಾದಿ, ನಿಜಪ್ರಸಾದಿ, ಸಮಯಪ್ರಸಾದಿ ಮೊದಲಾದ ಶರಣರ್ಗೆ ಗೋಮುಖ ಸಮಾಧಿಯ ಪಥವ ತೋರಿದರು. ಅಷ್ಟಮದಲ್ಲಿ ಪರ್ತಿಸುವ ಮಸಣಯ್ಯ, ಚಿಕ್ಕ ಮಾದಯ್ಯಗಳು, ಕದಿರ ರೇಮ್ಮಯ್ಯನು, ರಾಘವಾಂಕ ಮೊದಲಾದ ಶರಣಗಳ ಸದ್ಭಕ್ತ ಸ್ಥಲಕ್ಕೆ ಕಾರಣವಾದ ಸಹಜ ಕ್ರಿಯಾಸಮಾಧಿಯ ಪಥವ ತೋರಿದರು. ಗೋಳಕ ಸಮಾಧಿಯ ಆಕಾರವ ರಚಿಸಿ ಆಯಾಯ ಸ್ಥಾನದಲ್ಲಿ ಪ್ರಣಮವ ಸ್ಥಾಪಿಸಿ ಅನಾದಿ ಪರಶಿವಲಿಂಗವ ಉಭಯತರ ಮಧ್ಯದಲ್ಲಿ ಬಾಸಣಿಸಿ

ಅನಾದಿ ಮೂಲ ಪ್ರಣವ ಧ್ಯಾನದಿಂದ ಪ್ರಥಮ ಸೋಪಾನವಿಡಿದು ಹೋಗಿ ತ್ರಿಕೋಣೆಯ ಮಧ್ಯದಲ್ಲಿ ಪದ್ಮಾಸನವ ಬಲಿದು ಮೂರ್ತವ ಮಾಡಿ ಅಂತರಂಗದಲ್ಲಿ ಬೆಳಗುವ ಜ್ಯೋತಿರ್ಲಿಂಗದ ಅನುಮಿಷಸ್ಥಾನಕ್ಕೆ ತಂದು ಮೂರ್ತವ ಮಾಡಿಸಿ ಕ್ಷೀರವ ಬೆರೆದಂತೆ ಚಿದ್ಘನ ಸ್ವರೂಪನಾದ ಇಷ್ಟಲಿಂಗವು ನಿರಂಜನ ಜಂಗಮ ಸ್ವರೂಪವಾದ ಪ್ರಾಣಲಿಂಗದಲ್ಲಿ ಶಿಖಿಕರ್ಪೂರದ ಹಾಗೆ ಬಯಲಪ್ಪದು ಬಯಲ ಸಮಾಧಿಯೆನಿಸುವುದು. ಶಿವಪದಕ್ಕೆ ಯೋಗ್ಯವಾಗಿ ಬಂದವರ ಒಡಗೂಡಿ ಯೋಗ್ಯವಾಗದವರ ತ್ಯಜಿಸಿ ಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವೆಂಬ ನಿಷ್ಕಲ ಪರಶಿವ ಬಿಂದು ಸ್ವರೂಪವಾದ ಷೋಡಶ ವರ್ಣದ ಚಿದ್ಬೆಳಗಿನೊಳಗೆ ಉರಿಕರ್ಪೂರದಂತೆ ಶಿವ ಸಮಾಧಿಯಲ್ಲಿ ಬೆರೆದು ಹೋದರು ನೋಡಾ ಸಂಗನ ಬಸವೇಶ್ವರಾ.”

ಕಲ್ಯಾಣದ ಅನುಭವ ಮಂಟಪವು ಹಿಂದಕ್ಕೆ ಗ್ರೀಸ ದೇಶದಲ್ಲಿ ಪ್ಲೇಟೋ ಎಂಬ ತತ್ವಜ್ಞಾನಿಯು ಸ್ಥಾಪಿಸಿದ ತತ್ವ ಮಂಟಪವನ್ನು ಹೋಲುತ್ತದೆ. ಪ್ಲೇಟೋನ ತತ್ವಮಂಟಪಕ್ಕಾದರೂ ದೂರಿನಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ತತ್ವ ವಿಚಾರ ದೃಷ್ಟಿಯಿಂದ ಪ್ಲೇಟೋನನ್ನು ಬಸವನಿಗೆ ಹೋಲಿಸಬಹುದು. ಅರಿಸ್ಟಾಟಲನನ್ನು ಚನ್ನ ಬಸವನಿಗೆ ಹೋಲಿಸಬಹುದು. ಮಹಾದೇವಿಯಕ್ಕನು ತನ್ನ ವಚನದಲ್ಲಿ ಬಸವನಲ್ಲಿದ್ದ ಗುಣವಿಶೇಷಗಳನ್ನು ಹೀಗೆ ತೋರಿಸಿದ್ದಾಳೆ. ಇವೇ ಶಿವಾನುಭವಾಚಾರದ ಮುಖ್ಯಾಂಶಗಳೆಂದು ಹೇಳಬಹುದು:—

“ನಮ್ಮ ಬಸವಣ್ಣನವರು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಬಂದು ವೀರಶೈವ ಮಾರ್ಗವನರಿಪುವುದಕ್ಕೆ ೩೨ ವಿಧವನೊಳಕೊಂಡು ಚರಿಸಿದನು. ಅದೆಂತೆಂದೊಡೆ, ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಧಾರಕನು, ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗಸಂಬಂಧಿ, ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ, ಪಾದೋದಕ ಪ್ರಸಾದ ಗ್ರಾಹಕನು, ಗುರುಭಕ್ತಿ ಸಂಪನ್ನನು, ಏಕಲಿಂಗ ನಿಷ್ಠಾಪರನು, ಚರಲಿಂಗ ಲೋಲುಪ್ತನು, ಶರಣ ಸಂಗಮೇಶ್ವರನು, ತ್ರಿವಿಧಕ್ಕೆ ಆಯತನು, ತ್ರಿಕರಣ ಶುದ್ಧನು, ತ್ರಿವಿಧ ಲಿಂಗಾಂಗ ಸಂಬಂಧಿ, ಅನ್ಯದೈವ ಸ್ಮರಣೆಯ ಹೊದ್ದ, ಭವಿಸಂಗ ಮಾಡ, ಭವಿಪಾಕವನೊಲ್ಲ, ಪರಸ್ತ್ರೀಯರ ಬೆರಸ, ಪರಧನ



ವನೊಲ್ಲ, ಪರನಿಂದೆಯ ಮಾಡ, ಅನೃತವ ನುಡಿಯ, ಹಿಂಸೆಯ ಮಾಡ, ತಾಮಸಭಕ್ತ ಸಂಗವ ಮಾಡ, ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದ ಸಮಸ್ತವೆಲ್ಲವ ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ, ಜಂಗಮ ನಿಂದೆಯ ಸೈರಿಸ. ಪ್ರಸಾದ ನಿಂದೆಯ ಕೇಳ, ಅನ್ಯರನಾಶ್ರೈಯ್ಯ, ಪಾತ್ರಾ ಪಾತ್ರವನರಿದೀವ, ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕಳುಕ, ಕುಲಾದಿ ಮದಂಗಳ ಬಗೆಗೊಳ್ಳ, ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ ವಿಕಲ್ಪವ ಮಾಡುವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿಹ, ಷಟ್‌ಸ್ಥಲಭರಿತ, ಸರ್ವಾಂಗಲಿಂಗಿ, ದಾಸೋಹಸಂಪನ್ನ. ಇಂತೀ ೩೨ ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀ ಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚನ್ನಮಲ್ಲಿಕಾರ್ಜುನಾ.”

ಮಹಾದೇವಿಯಕ್ಕನಾದರೂ ಶಿವಾನುಭವದ ಜ್ಞಾನವನ್ನು ಬಹು ಚನ್ನಾಗಿ ಕೂಡಿ ಮಂಟಪದಲ್ಲಿ ಪ್ರಕಟ ಮಾಡುತ್ತಿದ್ದಳು. ಆವಳು ಅಲ್ಲಮನ ಕೃಪೆಯಿಂದ ಸ್ವರೂಪ ಸಾಕ್ಷಾತ್ಕಾರವನು ಪಡೆದಳು. ಇಷ್ಟಲಿಂಗವನ್ನು ತಾಳಿ ತನ್ನ ಶರೀರ ವ್ಯಾಪಾರಗಳನ್ನೆಲ್ಲ ಆ ಲಿಂಗಪೂಜೆಯ ಕಡೆಗೆ ತಿರುಗಿಸಿದ್ದರಿಂದ ಶರೀರದ ಬಂಧನವಿಲ್ಲದಾಯಿತು. ಶರೀರ ಮನಸ್ಸುಗಳಿಗೆ ಅತಿ ಸಮೀಪ ಸಂಬಂಧವುಂಟು. ಶರೀರ ವೃತ್ತಿಗಳು ಶಿವಪೂಜೆಯ ಕಡೆಗೆ ತಿರುಗಲು ಮನಸ್ಸಿನ ವೃತ್ತಿಗಳು ಶಿವನ ಚಿಂತನೆಯ ಕಡೆಗೆ ಹರಿದವು. ವಿಷಯಗಳನ್ನು ತೊಲಗಿಸಿದ್ದರಿಂದ ಇಂದ್ರಿಯ ಮನಸ್ಸುಗಳಲ್ಲಿ ತುಂಬಿದ ಶಿವಜ್ಯೋತಿಯು ಮೋಡವಿಲ್ಲದ ಆಕಾಶದಲ್ಲಿ ಸೂರ್ಯನಂತೆ ತೋರಿ ಪ್ರಾಣಲಿಂಗವೆನಿಸಿತು. ಶರೀರದ ಜಾಡ್ಯ ಮನಸ್ಸಿನ ತಾಮಸಗಳು ಇಲ್ಲದಾಗಲು ಜೀವಭಾವಕ್ಕೆ ಕಾರಣವಾದ ಉಪಾಧಿಯು ಇಲ್ಲದಂತಾಗಿ ಜೀವನವೆಂಬ ಅಂಗನು ಶಿವನೆಂಬ ಲಿಂಗದಲ್ಲಿ ಬೆರೆತು ಎರಡಿಲ್ಲದಂತಾದನು. ಇದೇ ಭಾವಲಿಂಗಯೋಗವು. ಜೀವನು ತನ್ನ ಪೊರೆಯನ್ನು ಅಂದರೆ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳನ್ನು ತೊರೆದು ಚಿಚ್ಛಕ್ತಿಯ ಅಗ್ರಭಾಗದಲ್ಲಿಯ ಶಂಭುವನ್ನು ತನ್ಮಯವಾಗಿ ಸಾಕ್ಷಾತ್ಕರಿಸುವನು. ಇಂಥ ತನ್ನ ಜೀವನ್ಮುಕ್ತ ಸ್ಥಿತಿಯನ್ನು ಮಹಾದೇವಿಯಕ್ಕನು “ಅಂಗ ಸಂಗದಲ್ಲಿ ಲಿಂಗಸಂಗಿಯಾದೆ. ಲಿಂಗ ಸ ಗ

ದಲ್ಲಿ ಅಂಗಸಂಗಿಯಾದೆ. ಶಿವಾಚಾರದ ಅಂಗವೇ ಲಿಂಗವು. ಅಂತಪ್ಪ ಅಂಗಸಂಗಿಯಾಗಿ ಲಿಂಗಸಂಗಿಯಾದೆನು. ಇಷ್ಟ ಲಿಂಗಯುತಳಾದೆನು. ಲಿಂಗ ಸಂಗದಿಂದ ಇಂದ್ರಿಯಗಳ ವಿಷಯ ಪ್ರವೃತ್ತಿಯು ಸವೆದು ಅವುಗಳಲ್ಲೆಲ್ಲ ಶಿವಜ್ಯೋತಿಯು ತುಂಬಿರಲು, ಲಿಂಗವು ಸಂಗತವಾದಂತಾಯಿತ್ತು. ಅಂದರೆ ಪ್ರಾಣಲಿಂಗಿಯಾದೆನು. ಹೀಗೆ ಅಂಗ ಲಿಂಗಗಳ ಯೋಗವಾಗಲು ಅಂಗ ಲಿಂಗ ಭೇದವಿಲ್ಲದೆ ನುಡಿಗಳ ಗಣಕ್ಕೆ ನಿಲುಕದ ಭಾವಲಿಂಗದಲ್ಲಿ ಬೆಚ್ಚಿಹೆನೆಂಬರ್ಥವು" ಅನುಭವ ಮಂಟಪದಲ್ಲಿ ಬಸವನು ಮಹದೇವಿಕ್ಕನ ವಚನಕ್ಕೆ ಹೀಗೆ ಆಕ್ಷೇಪಿಸಿದನು.

ಬಸವ:—ಅಂಗದಲ್ಲಿ ಲಿಂಗಸಂಗ, ಅಂಗಸಂಗ, ಮಾಡಿಹೆನೆಂದರೆ ಜಂನು ಭೇದವಳಿವ ಪರಿಯೆಂತು ಹೇಳಾ? ಅಂಗದಲ್ಲಿ ಲಿಂಗಸಂಗವ ಮಾಡಿದೆನೆಂದರೆ ಮುಂದುಗೆಡಿಸಿ ಕಾಡುವನು ಶಿವನು. ಕಾಮನೆಂಬ ಬಯಕೆಯಲ್ಲಿ ಅಳಲಿಸುವ ಬಳಲಿಸುವ ಶಿವನು ಬರಿಯ ಮಾತಿನಿಂದ ಭೇದವಳಿವುದೇ? ಅಂಗದಲ್ಲಿ ಲಿಂಗ ಸಂಗವನು ಮಾಡುವೆನೆಂದರೆ ಶಿವನು ಅಂಗಸಂಗವನೊಲ್ಲನು. ಈ ಅಂಗವು ಕಾಮದ ನೆರೆವನೆಯು, ಸದ್ಗುರುವಿನ ದೀಕ್ಷಾಬಲದಿಂದ ಈ ಕಾಮವು ಹೋಗದು. ಲಿಂಗದಲ್ಲಿಯೇ ಅಂಗವನು ಅಡಗಿಸುವೆನೆನ್ನುವಿಯಾ? ಶಿವನು ಅಂಗದ ಸಂಬಂಧವನು ಹಚ್ಚಿಕೊಳ್ಳನು. ಅಂದ ಬಳಿಕ ನೀನು ಹೇಳಿದ ಸಾಮರಸ್ಯಾನುಭಾವವು ಹೇಗೆ? ಅಂಗದ ಭಾವವು ಇರುವನಕ ಜೀವಾತ್ಮನು ಹೆಂಗಸಿನಂತೆ ಆ ಅಂಗದುಪಾಧಿಯಿಂದ ದುರ್ಬಲನು, ಸಂಸಾರ ತಾಪಕ್ಕೀಡಾದಾತನು. ಅಂಗವನ್ನು ಹಿಂಗಿ ನಿರ್ಭಯನಾದರೆ ಅಭಯ ಸ್ವರೂಪನಾದ ಶಿವನು ಜೀವಾತ್ಮನನ್ನು ತನ್ನಲ್ಲಿ ಬೆರೆಯಿಸುವನು. ಅಂಗದುಪಾಧಿಯನ್ನು ನೀಗಿ ನಿಂತ ಬಳಿಕ ಲಿಂಗಸಂಬಂಧವೆಲ್ಲಿಯದು? ಶಿವನನ್ನು ಕೂಡುವರೆ ಭಿನ್ನವಾಗದೆ ಅಂಗಸಂಬಂಧವಿದ ಕಲಿಯಾಗಬೇಕು.

ಭಕ್ತಿಯ ಸಾಮರಸ್ಯದ ಗುಟ್ಟು:— ಬಸವನ ಪ್ರಶ್ನೆಯನ್ನು ಮಹಾದೇವಿಯಕ್ಕನು ಸುಲಭವಾಗಿ ಬಿಡಿಸಿದಳು.

ಮಹಾದೇವಿಯಕ್ಕ:— ಕಾಮನ ಗೆಲಿದೆನಯ್ಯ ಬಸವಣ್ಣಾ, ನಿಮ್ಮ ದಯದಿಂದ. ಸೋಮಧರನ ಹಿಡಿತಪ್ಪೆನಯ್ಯ ಬಸವಣ್ಣಾ ನಿಮ್ಮ ದಯೆಯಿಂದ.



ನಾಮದಲ್ಲಿ ಹೆಣ್ಣು ರೂಪವಲ್ಲದೆ ಭಾವಿಸಲು ಗಂಡು ರೂಪು. ಅತಿ ಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರಸಿಕ್ಕಿ ಕೂಡಿ ಎರಡನರಿಯದೆ ಮರೆದೆನಯ್ಯ ಬಸವಣ್ಣಾ. ಶಿವಸರ್ವ ಸ್ವರೂಪನಾದ ನೀನು ಸರ್ವ ಕ್ಷೇತ್ರಗಳಲ್ಲೂ ವ್ಯಾಪಿಸಿರುವೆ. ಕಾಮನಿಗೆ ತವರುಮನೆಯಾದ ಈ ಅಂಗದಿಂದ ಆತನನ್ನು ಶಿವಭಕ್ತಿ ಸ್ವರೂಪನಾದ ನಿನ್ನ ದಯದಿಂದ ಓಡಿಸುವುದು ಕಠಿಣವಲ್ಲ. ಆದರೆ ಕಾಮವೆಂಬುದು ಅಜ್ಞಾನದಲ್ಲಿ ತೋರಿರುವುದೊಂದು ಪಿಶಾಚವು. ಧೀರರು ಜ್ಞಾನ ಬಲದಿಂದ ಪಿಶಾಚವನ್ನು ಗೆಲ್ಲುವಂತೆ ನಿನ್ನ ದಯದಿಂದ ಕಾಮನನ್ನು ಗೆದ್ದಿರುವೆನು. ಆದ್ದರಿಂದ ನನ್ನ ಅಂಗವು ಲಿಂಗಸಂಗಕ್ಕೆ ತಕ್ಕುದಾಗಿರುವದು. ಅಂಗದಿಂದ ಲಿಂಗಕ್ಕೆ ಬಾಧೆಯಾಗದು. ಅಂಗದಲ್ಲಿ ತುಂಬಿದ ಭಕ್ತಿ ಎಂಬ ಶಕ್ತಿಯು ಶಿವನನ್ನು ಸೆಳೆದು ತಾರದಿರದು ಶಿವನು ಭಕ್ತರ ಸೋದರನು. ನಾನಂತು ಈ ತ್ರೋರ ಶರೀರದಿಂದ ಹೆಣ್ಣಾಗಿ ಕಾಣುತ್ತೇನೆ. ಆದರೆ ಶಿವನನ್ನಲ್ಲದೆ ಬೇರೊಂದನು ಚಿಂತಿಸೆನೆಂಬ ದೃಢತ್ವದಿಂದ ಕಾಮಾದಿ ಷಡ್ವರ್ಗವನ್ನು ಗೆದ್ದು ಗಂಡುಗಲಿಯಾಗಿರುವೆನು. ಕಾಮಾದಿ ತಾಮಸವಿಲ್ಲದ ಅಂಗನೆಂಬ ಜೀವಾತ್ಮನು ಶಿವನು ಒಡ್ಡಿದ ಮಾಯಾ ಪ್ರಪಂಚವನ್ನು ಗೆದ್ದವನಾದ್ದರಿಂದ ಆ ಶಿವನನ್ನು ಗೆದ್ದು ಅವನ ಶಿವತ್ವವನ್ನು ಅಪಹರಿಸಿದ ಗಂಡುಗಲಿಯು. ಶಿವನು ಪ್ರೇಮರಸದಿಂದ ತುಂಬಿ ತುಳುಕುವ ಭಕ್ತನೆಂಬ ಕಾಮಿನಿಯಲ್ಲಿ ರತಿಯುಳ್ಳವನು. ಈ ಬಗೆಯಿಂದ ಶಿವನು ಮಿಗಿಲಾದ ಕಾಮಿಯು. ಶಿವಭಕ್ತಿಯು ಸೂಸುತ್ತಿರುವ ನಾನು ಆ ಪರಶಿವನೆಂಬ ಪತಿಯಲ್ಲಿ ದೃಢವಾದ ಸಾಮರಸ್ಯವನ್ನು ಪಡೆದು ಅಗಲದಿರುವೆನು. ಸಚ್ಚಿದಾನಂದ ಸ್ವರೂಪವನ್ನು ಖಂಡಿಸಿ ಸ್ಥೂಲ ಶರೀರದಲ್ಲಿ ಸದ್ರೂಪವನ್ನೂ ಸೂಕ್ಷ್ಮ ಶರೀರದಲ್ಲಿ ಚಿದ್ರೂಪವನ್ನೂ ಕಾರಣ ಶರೀರದಲ್ಲಿ ಆನಂದವನ್ನೂ ಕಂಡುದಾದರೆ ಅದೇ ಜೀವಭಾವನೆ. ಈ ಖಂಡಿತ ಸ್ವರೂಪವನ್ನು ವಿಚಾರದಿಂದ ಕಳೆದು ನಿಂದುದಾದರೆ ಈ ಆತ್ಮನೇ ಲಿಂಗವು. ಅಂಗವೆಂಬುದು ಲಿಂಗವೆಂಬುದು ಒಂದೇ ಪರಮಾರ್ಥ ವಸ್ತುವು ಇದು ಸಚ್ಚಿದಾನಂದ ಸ್ವರೂಪವು, ಶಕ್ತಿ ಸಮೇತವಾದುದು ಈ ಚಿಚ್ಛಕ್ತಿಯನೊಡಂಬಡದಿರಲು ಆತ್ಮನು ಜಡನಲ್ಲದೆ ಚೇತನನೆನಿಸಲಾರನು. ರತ್ನ ಕನಕಗಳು ಹೊಳೆಯುತ್ತವೆ. ಆದರೆ ಅವುಗಳಲ್ಲಿ ಸ್ವವಿಮರ್ಶ ಅಂದರೆ ತಮ್ಮ ಅರಿಕೆ ಇಲ್ಲದ್ದರಿಂದ ಅವು ಜಡವಾಗಿವೆ. ಶಿವನಲ್ಲಿ ಈ ಶಕ್ತಿಯು

ಪುಷ್ಪದಲ್ಲಿ ಪರಿಮಳದಂತೆಯೂ ಹಾಲಿನಲ್ಲಿ ರುಚಿಯಂತೆಯೂ ಒಂದಾಗಿದೆ. ತನ್ನ ಶಕ್ತಿಯ ಮಹಿಮೆಯಿಂದ ಶಿವನು ತನ್ನ ಪರಿಪೂರ್ಣತೆಯನ್ನು ಮರೆಮಾಡಿ ಸಂಕುಚಿತನಂತೆ ತೋರಬಲ್ಲನು. ಇದು ಮಲವು. ಪರಿಪೂರ್ಣತ್ವವು ಮರೆಯಾಗಲು ಆ ಮರವೆಯ ಜೊತೆಗೆ ಭಿನ್ನ ವಿಷಯ ದರ್ಶನವೆಂಬುದು ಪ್ರಕಟವಾಗುವುದು. ಇದೇ ಮಾಯೆಯು. ಮಾಯೆಯು ಬೇರೆ ಬೇರೆ ವಿಷಯಗಳನ್ನು ಆತ್ಮನ ಮುಂದಿಡಲು ಸಂಕೋಚ ಹೊಂದಿದ ಆತ್ಮನು ಆ ಸಂಕೋಚನೆಯನ್ನು ಕಳೆಯುವದಕ್ಕೆ ಎಲ್ಲ ಪದಾರ್ಥಗಳನ್ನು ಪಡೆಯಬೇಕೆಂದು ಹಂಬಲಿಸಹತ್ತುವನು. ಈ ಹಂಬಲವೇ ಕರ್ಮವು. ಮೂರು ಪಾಶಗಳಾವವೆಂದರೆ ಆತ್ಮಸ್ವರೂಪ ಮರವೆಯಿಂದಲೂ ಭಿನ್ನ ವಿಷಯಗಳ ತೋರಿಕೆಯಿಂದಲೂ ವಿಷಯ ಪ್ರಾಪ್ತಿಯ ಪ್ರಯತ್ನಗಳಿಂದಲೂ ಆತ್ಮನು ಸಂಸಾರಕ್ಕೀಡಾಗುವನು. ನಿಜವಾಗಿ ಆತ್ಮನ ಸ್ವರೂಪಕ್ಕೆ ಯಾವ ಹಾನಿಯೂ ತಟ್ಟದು. ಅಂಗದಲ್ಲಿ ಅಳಿದು ಲಿಂಗದಲ್ಲಿ ನಿಂತ ಬಳಿಕ ನಾನು ಎಂಬ ಅಂಗ ಭಾವವೂ ನೀನು ಎಂಬ ಲಿಂಗ ಭಾವವೂ ಇಲ್ಲವಾಗುವದರಿಂದ ಲಿಂಗಾಂಗವೆಂಬ ಭಾವವುಳಿಯದೆ ವಸ್ತುವೇ ನಿಲ್ಲುವುದು.

ಬಸವಃ— ಅಂಗವು ಲಿಂಗದಲ್ಲಿ ಅಳಿಯಿತ್ತೆಂದೂ ಅಂಗವು ತನ್ನಲ್ಲಿ ಅಳಿದಾಗ ಉಳಿದ ಲಿಂಗವು ನಿನ್ನಲ್ಲಿ ಅಳಿಯಿತ್ತೆಂದೂ ನಿನ್ನ ಭಾವವು. ಶಿವನು ನಿನ್ನ ಭಾವದಂತೆ ಅಳಿವುದಲ್ಲ. ಉಳಿವುದಲ್ಲ. ಪರಮಾತ್ಮನು ತೊಡಕು ಇಲ್ಲದಾತನು. ನಾನು ಅರಿತೆನೆಂಬವರ ಹೃದಯದಲ್ಲಿ ಶಿವನು ಪ್ರಕಟನಾಗುವನು.

ಮಹಾದೇವಿಃ— (ಇದಕ್ಕೆ ಅಂಜಲಿಲ್ಲ. ಅವಳದು ಗಿಳಿಯ ಜ್ಞಾನವಾಗಿದ್ದಿಲ್ಲ. ಲಿಂಗದಲ್ಲಿ ಅಂಗವಾಗಿ ಅಂಗಲಿಂಗೈಕ್ಯವ ಮಾಡಿದೆ. ಕ್ರಿಯೆಗಳೆಲ್ಲ ನಿಲಿಸಿ ನಿಲಿಸಿ ಕ್ರಿಯಾತೀತಳಾಗಿ ಲಿಂಗೈಕ್ಯವಾದೆ. ನಾನೆಂಬುದ ನೀನೆಂಬುದ ಕೆಡಿಸಿ ಉಭಯ ಲಿಂಗೈಕ್ಯವ ಮಾಡಿದೆ. ಆಗ ಆ ಲಿಂಗವು. ಜ್ವಾಲೆಯು ಕರ್ಪುರವನ್ನೆಲ್ಲ ಹಬ್ಬಿ ಕರ್ಪುರವನ್ನು ತನ್ನೊಳಗುಮಾಡಿಕೊಂಡಂತೆ ತನ್ನ ಅಂಗವೆಲ್ಲ ತುಂಬಿ ಅಂಗವನ್ನು ತನ್ನೊಡಲೊಳಗೊಂಡಿತು. ಲಿಂಗವಿಲ್ಲದ ಪ್ರಾಕೃತ ತನುವನಾನಿಂತವರ ಬಸುರಿನಿಂದ ಹುಟ್ಟಿದವನು ನಾನೀ ಕುಲದವನು ಮುಂತಾದ ಅನರ್ಥ ಪರಂಪರೆಗಳಲ್ಲಿ



ಜೀವವನ್ನು ತೊಡಕಿಸುವದು. ಆದರೆ ಲಿಂಗವನ್ನೊಡಗೂಡಿದ ಶರೀರವು ಹಾಗಲ್ಲ. ಸೂಜಿಗಲ್ಲಿಗೆ ಹೊಂದಿರುವ ಸೂಜಿಯು ಸೂಜಿಗಲ್ಲಿನ ಸ್ವಭಾವವನ್ನೇ ತೋರುವಂತೆ ಶರೀರವು ಲಿಂಗದ ಸ್ವಭಾವವನ್ನೇ ಹೋಲುವದು. ಲಿಂಗದೇವನು ತನ್ನ ಶಕ್ತಿಯಿಂದ ಈ ಸೃಷ್ಟಿಯನ್ನು ಹುಟ್ಟಿಸಿ ಅದಕ್ಕೆ ಚಾಲಕನಾಗಿರುವನು. ಶರೀರವು ಸೃಷ್ಟಿಯಲ್ಲಿ ಒಂದಾಗಿದೆ. ಶರೀರದಿಂದಾದ ಕಾರ್ಯಗಳು ಶಿವನಿಂದಾಗುವುದಲ್ಲದೆ ಜೀವನಿಂದಲ್ಲ, ಇಂತೆಂಬ ಭಾವದಿಂದ ಅಂಗವು ಲಿಂಗದಲ್ಲಿ ಒಂದುಗೂಡಿತು. ಗಾಳಿಯು ಅಲೆದಾಟದ ಕ್ರಿಯೆಯಲ್ಲಿ ಗಾಳಿಯು ಶಕ್ತಿಯಾಗಿರುವಂತೆ ಶರೀರ ಕ್ರಿಯೆಗಳು ಶಿವಶಕ್ತಿಮಯವಾಗಿವೆ.

ಈ ಮಹಾದೇವಿಯ ವಚನವನ್ನು ಬಸವ ಮೊದಲಾದ ಪ್ರಮಥರು ಕೇಳಿ ತಲೆದೂಗಿ ಬಣ್ಣಿಸಿದರು.

ಮಹಾದೇವಿಯು ಮತ್ತೆ ಹೇಳಿದ್ದುಃ—ಆತ್ಮನು ಸಂಸ್ಕಾರಗಳಿಂದ ಸ್ವರ್ಗವಾಸಿಯಾಗುವನು. ದುಷ್ಕೃತಿಗಳಿಂದ ನರಕಕ್ಕೀಡಾಗುವನೆಂದು ತಿಳಿದು ಕೆಲವರು ಸತ್ಕರ್ಮ ಮಾಡುವರು. ಇದೇ ಕರ್ಮಮೀಮಾಂಸೆ. ಇದಕ್ಕೂ ಮೊದಲಿನವರು ಕೇವಲ ಕರ್ಮಗಳು ಸುಖಸಾಧನಗಳಲ್ಲ. ಆತ್ಮಸ್ವರೂಪದ ನಿಜವಾದ ತಿಳುವಳಿಕೆಯೇ ಸುಖಸಾಧನವು, ಪರಿಪೂರ್ಣತೆಯ ಉಪಾಯವು ಎಂದು ಹೇಳುವರು. ಕೆಲವು ಮತಗಳು ಆತ್ಮನು ಕ್ಷಣಿಕನೆಂದೂ ಕೆಲವು ನಿತ್ಯನೆಂದೂ ಇನ್ನು ಕೆಲವು ಅಣುಪರಿಮಾಣನೆಂದೂ ಕೆಲವು ಮಧ್ಯ ಪರಿಮಾಣನೆಂದೂ ಕೆಲವು ದೇಹ ಪರಿಮಾಣನೆಂದೂ ಇನ್ನು ಕೆಲವು ವಿಭುವೆಂದೂ ಸಾಧಿಸುವವು. ಈ ವಿಭುತ್ವವಾದಿಗಳಲ್ಲಿ ಕೆಲವರು ಆತ್ಮನ ಹೊರತು ಈಶ್ವರನೆಂಬ ಪುರುಷನುಂಟೆಂತಲೂ ಇನ್ನು ಕೆಲವರು ಈಶ್ವರನಿಲ್ಲವೆಂತಲೂ ವಾದಿಸುವರು. ಮತ್ತೆ ಕೆಲವರು ಪರಮಾತ್ಮವೆಂಬ ಒಂದು ವಸ್ತುವಿನಲ್ಲಿಯೇ ಆತ್ಮೇಶ್ವರರು ತೋರಿದರು ಎಂಬರು. ಒಂದು ವಸ್ತುವೇ ಈಶ ಜೀವರೆನಿಸಿತು ಎಂಬ ಮತಗಳಲ್ಲಿ ವೀರಶೈವವು ಒಂದಾಗಿದೆ. ವಸ್ತು ಸಾಕ್ಷಾತ್ಕಾರವು ಬರಿಯ ಬಾಯ ಮಾತುಗಳಿಂದಲ್ಲ. ತರ್ಕವಾಕ್ಯಗಳಿಂದಲ್ಲ. ವಿಷಯ ಚಿಂತನೆ ಬಿಟ್ಟ ಆತ್ಮನಿಷ್ಠನಾಗಿರುವದರಿಂದಲೇ ಉಂಟಾಗಬಲ್ಲದು. ಸ್ಥೂಲತನುವಿನಲ್ಲಿ ಧರಿಸಿದ ಇಷ್ಟಲಿಂಗವು ಶಿವಾಚಾರಕ್ಕೆ ಕಾರಣವಾದುದರಿಂದ ಆಚಾರಲಿಂಗವೆನಿಸಿತು. ಆಚಾರವೇ ಶಿವಜ್ಞಾನದ ಭೂಮಿಕೆಯಾದುದರಿಂದ ಆಚಾ

ಶಲಿಂಗವು ಭೂತತ್ವವೆನಿಸಿತು. ನಾಸಿಕದಲ್ಲಿ ದುರ್ಗಂಧ ಪರಿತ್ಯಾಗವು ಸ್ವಾಭಾವಿಕವಾಗಿರುವದರಿಂದ ಅನಾಚಾರ ಪರಿತ್ಯಾಗ ರೂಪವಾದ ಆಚಾರಲಿಂಗಕ್ಕೆ ದೇಹಗತ ಭೂತತ್ವವೇ ಸ್ಥಾನವು. ಗಂಧಗ್ರಾಹಕವಾದ ನಾಸಿಕವೇ ಭೂಸ್ಥಾನವಾದುದರಿಂದ ನಾಸಿಕವೇ ಆಚಾರ ಲಿಂಗಕ್ಕೆ ಸ್ಥಾನ. ಇಷ್ಟಲಿಂಗಧಾರಕನು ಶಿವಮಂತ್ರ ಶಿವನಾಮಗಳಲ್ಲಿ ರಸಿಕನಾಗಿರುವದರಿಂದ ಇಷ್ಟಲಿಂಗವೇ ಗುರುಲಿಂಗವೆನಿಸಿತು. ನಾಲಿಗೆಗೆ ರುಚಿ ಇರುವದರಿಂದ ಅಪ್ಪತತ್ವಕ್ಕೆ ನಾಲಿಗೆಯೇ ಸ್ಥಾನವು. ಇಷ್ಟಲಿಂಗದಲ್ಲಿ ದೃಷ್ಟಿಯುಳ್ಳಾತನಿಗೆ ಬೇರೆ ಪದಾರ್ಥಗಳ ರೂಪದಲ್ಲಿ ರುಚಿದೋರದು. ದೃಷ್ಟಿಯು ಅಗ್ನಿತತ್ವವು. ಶಿವಲಿಂಗಕ್ಕೆ ದೃಷ್ಟಿಯು ಸ್ಥಾನವು. ಮುಟ್ಟುವ ಕಾರ್ಯವು ಚರ್ಮೇಂದ್ರಿಯದ್ದು. ಲಿಂಗಸ್ಪರ್ಶ ಮಾಡಿದವನಿಗೆ ಸ್ತ್ರೀಸ್ಪರ್ಶ ಮೊದಲಾದವು ರುಚಿಸುವದಿಲ್ಲ. ಚರ್ಮವು ದೇಹವನ್ನು ವ್ಯಾಪಿಸಿರುವದು. ದೇಹವನ್ನು ವ್ಯಾಪಿಸಿದ ಲಿಂಗವು ಜಂಗಮವಾಗಿದೆ, ಅಂದರೆ ವ್ಯಾಪಿಸಿರುವದೆಂದರ್ಥ. ಇಂತು ಲಿಂಗಾಚಾರ ಲಿಂಗನಾಮ ಲಿಂಗ ದೃಷ್ಟಿ ಲಿಂಗಸ್ಪರ್ಶಗಳು ವೇಧಿಸಿ ಲಿಂಗದಲ್ಲಿ ಸಂಬಂಧವುಳ್ಳಾತನ ಶ್ರೋತ್ರಕ್ಕೆ ಶಿವನಾಮವೂ ಮಂತ್ರವೂ ರುಚಿಸುವದು. ಶ್ರೋತ್ರವು ಆಕಾಶ ತತ್ವವು. ಒಂದಾನೊಂದು ಪದಾರ್ಥದ ವಿಷಯದಲ್ಲಿದ್ದ ಅಹ್ವಾನವು ಶಬ್ದದಿಂದ ಹೋಗುವದು. ನೋಡದಿದ್ದ ವಸ್ತುವನ್ನು ಶಬ್ದವು ಬುದ್ಧಿಯು ಮುಂದಿಡುವದು. ಅದುದರಿಂದ ಆ ಶಬ್ದದಲ್ಲಿ ಅಡಕವಾದ ಜ್ಞಾಪಕ ಶಕ್ತಿಗೆ ಆಧಾರವಾದ ಚೈತನ್ಯವು ಪ್ರಸಾದಲಿಂಗವಿದ್ದು ಅಜ್ಞಾನದ ಕತ್ತಲೆಯನ್ನು ಹರಿವುದರಿಂದ ನಿರ್ಮಲತ್ವಕ್ಕೆ ಹೇತುವಾಗಿ ಪ್ರಸಾದ ಲಿಂಗವೆನಿಸಿತು. ಆಕಾಶದಲ್ಲಿ ನಿರ್ಮಲತ್ವವಿದೆ. ಆಕಾಶತತ್ವವು ಶ್ರೋತ್ರೇಂದ್ರಿಯ ಸ್ಥಾನವು.

ಶರೀರದಲ್ಲೆಲ್ಲ ಸತ್ಕ್ರಿಯೆಗಳನ್ನುಂಟುಮಾಡಿದ ಇಷ್ಟಲಿಂಗವೆಂಬ ಭಾಂಡವು ಕಾಯುತ್ತ ಒಳಗಿನ ನೀರನ್ನು ಕಾಯಿಸುವ ಅಗ್ನಿಯಂತೆ ಅಂತಃಕರಣವನ್ನು ವೇಧಿಸುವದು. ಅಂತಃಕರಣದಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನ ಭಾವಗಳೆಂಬ ಆರು ಅಂಗಗಳಿರುವವು. ಚಿತ್ತವು ಆಯಾ ಇಂದ್ರಿಯದ ಸಂಚಲವನ್ನು ದೂರೀಕರಿಸುತ್ತದೆ. ಬುದ್ಧಿಯು ತಿಳಿಯುತ್ತದೆ. ಅಹಂಕಾರವು ಅಭಿಮಾನಿಸುತ್ತದೆ. ಜ್ಞಾನವು ಆನಂದಪಡುತ್ತದೆ. ಭಾವವು ತೃಪ್ತಿಪಡುವದು. ಲಿಂಗವು ವೇಧಿಸಲಾಗಿ



ಅಂತಃಕರಣವು ಶುದ್ಧವಾಗುವದು. ಚಿತ್ತವು ಸುಚಿತ್ತವಾಗಿ ಆಚಾರ ಲಿಂಗಕ್ಕೆ ನೆಲೆಯಾಗುವದು. ಬುದ್ಧಿಯು ಸುಬುದ್ಧಿಯಾಗಿ ಗುರುಲಿಂಗಕ್ಕೆ ಸ್ಥಾನವಾಗುವದು. ಹೀಗೆ ಸರ್ವೇಂದ್ರಿಯಗಳು ಲಿಂಗದಿಂದ ಕೂಡಿ ಸರ್ವ ವಿಶ್ವವು ಈಶ್ವರಮಯವೆಂಬ ನಿರಹಂಕಾರವು ಶಿವಲಿಂಗಕ್ಕೆ ಆಧಾರವಾಗಿರುವದು ಸಹಜವು. ಕಾರಣ ಶರೀರವು ಶುದ್ಧವಾಗಲು ಅಜ್ಞಾನವು ಅಳಿದು ಸರ್ವಜ್ಞತ್ವವು ಅಂದರೆ ಶಿವಾದಿ ಭೂವ್ಯಂತವಾದ ೩೬ ತತ್ವಗಳ ಜ್ಞಾನವುಂಟಾಗುತ್ತದೆ. ಸರ್ವಜ್ಞತ್ವವು ಆಚಾರಲಿಂಗಕ್ಕೆ ಸ್ಥಾನವಾಗಿರುವದು. ಅಜ್ಞಾನದಿಂದ ಅನಾಚಾರ ಪ್ರವೃತ್ತಿಯು, ಶಿವಜ್ಞಾನದಿಂದ ಮುಕ್ತಿಯುಹುದು ಎಂದು ಹೇಳಿದಳು. ಶರಣರೆಲ್ಲರೂ ಇವಳ ಅಸಾಧಾರಣ ಜ್ಞಾನಕ್ಕೆ ಮೆಚ್ಚಿದರು. ಅಲ್ಲಮನು ಆದರದಿಂದ ಹೀಗೆಂದನು. ‘ ಆದಿ ಅನಾದಿ ಶಕ್ತಿಯೆಂಬುದು ಜನವಾರು ಬಲ್ಲರಯ್ಯ? ಅಂತರಂಗದ ಪ್ರಭೆ ಬಹಿರಂಗವೆಲ್ಲ ತಾನೆಯಾಗಿ ಗುಹೇಶ್ವರಲಿಂಗದಲ್ಲಿ ಸಂದಿಲ್ಲದಿರ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.” ಚನ್ನಬಸವನು ಹೀಗೆಂದನು. “ ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಅನುವನಂದು ಘನವು ಬೆರಸಿ ಹಿರಿದು ಕಿರಿದು ಎಂಬ ಭೇದವ ಮರೆದು ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನವೆಮ್ಮ ಮಹಾದೇವಿಯಕ್ಕಗಾಯಿತ್ತು.” ಮಡಿವಳ ತಂದೆಯು ಹೀಗೆಂದನು—“ಕಾಮಿನಿಯಾಗಿ ನಿಷ್ಕಾಮಿಯಾದಳು. ಸೀಮೆಯಲ್ಲಿದ್ದು ನಿಃಸೀಮೆಯಾದಳು. ಭವಿಯ ಸಂಗವ ತೊರೆದು ಭವಬಾಧೆಯ ಹರಿದಳು. ಮಹಾದೇವಿಯಕ್ಕಗಳ ನಿಲವ ಬಸವಣ್ಣನ ಕೃಪೆಯಿಂದಾನರಿದೆನಯ್ಯ” ಮಹಾದೇವಿಯಕ್ಕನು ಹದಿನಾಲ್ಕು ವರುಷದ ಬಾಲೆಯಾದರೂ ಅನುಭವ ಮಂಟಪದಲ್ಲಿ ಬಸವ ಅಲ್ಲಮರಂಥ ಮಹಾಮಹಿಮರೊಡನೆ ವಾದ ಮಾಡಿ ಅದ್ವಿತೀಯ ಜ್ಞಾನವನ್ನು ತೋರಿಸಿದ್ದೇನು ಸಾಮಾನ್ಯವೇ? ಗಹನವಾದ ವಿಚಾರ ವಿಮರ್ಶೆಗೆ ನೆಲೆಯಾದ ಅನುಭವ ಮಂಟಪವನ್ನು ಸ್ಥಾಪಿಸಿದ ಬಸವನ ಚರಿತ್ರೆಯು ಸಾಮಾನ್ಯವಾಗಿಲ್ಲ. ಇದರ ಸ್ಥಾಪನೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸಂಗತಿಯಾಗಿದೆ.

—ರಾ|| ರಾ|| ವೀರಪ್ಪ ಯಗಟಿ, ಬಿ. ಎ. ಎಲ್. ಎಲ್. ವಕೀಲ- ಹಾವೇರಿ.

---

## ಬಸವನು ವೇದಬಾಹಿರನೇ?

ಭರತ ಖಂಡದಲ್ಲಿ ನೆಲೆಗೊಂಡ ಧರ್ಮಗಳಲ್ಲಿ ಆರ್ಯ ಧರ್ಮವೇ ಮುಖ್ಯವಾದುದು. ಇದಕ್ಕೆ ವೇದಗಳೇ ತಳಹದಿಯು. ಇವುಗಳಲ್ಲಿ ಉಪನಿಷತ್ತುಗಳು ಆಗಮುಗಳು ಅಂತರ್ಭಾವವಾಗುವವು. ಇವುಗಳಿಗೆ ಶ್ರುತಿಗಳೆಂದೂ ಪರ್ಯಾಯ ನಾಮವುಂಟು. ಶ್ರುತಿ ಸ್ಮೃತಿಪುರಾಣೇತಿಹಾಸಗಳಲ್ಲಿ ಆರ್ಯ ಧರ್ಮವು ವಿಸ್ತರಿಸಲ್ಪಟ್ಟಿದೆ. ಹೀಗೆ ಪ್ರತಿಪಾದಿತವಾದ ಧರ್ಮವೇ ಸನಾತನ ಧರ್ಮವಾಗಿರುವದು. ದೇಶೀಯರಾಗಲಿ ವಿದೇಶೀಯರಾಗಲಿ ಹಿಂದುಸ್ಥಾನದಲ್ಲಿಯ ಯಾವದೊಂದು ಧರ್ಮವು ಹೊಸದೋ ಹಳೆಯದೋ ಎಂಬದನ್ನು ತೂಗಿ ನೋಡಬೇಕಾದರೆ, ಶ್ರುತ್ಯಾಧಾರವೆಂಬ ತಕ್ಕಡಿಯನ್ನುಪಯೋಗಿಸುವರು. ಶ್ರುತಿ ಸಿದ್ಧವಾದ ಮತವು ಪುರಾತನದ್ದು, ತದಿತರ ಮತಗಳು ನೂತನವಾದವುಗಳು, ಎಂದು ಕಂಡು ಹಿಡಿಯುವ ಪರಿಪಾಠವುಂಟು.

ಇತ್ತೀಚೆಗೆ ಪೌರ್ವಾತ್ಯ ಮತ್ತು ಪ್ರಾಚ್ಯ ಸಂಶೋಧಕರು ಇನ್ನೊಂದು ಮಾತನ್ನು ಕಂಡು ಹಿಡಿದಿದ್ದಾರೆ. ಅದೇನೆಂದರೆ—ಜೈನ ಬೌದ್ಧ ಚಾರ್ವಾಕಮತಗಳು ಶ್ರುತಿ ಸಿದ್ಧವಾಗದೆ ಶ್ರುತಿಯ ಹೊರಗಿನವಾದರೂ ಅವು ವೇದ ಕಾಲದಲ್ಲಿದ್ದ ಬಗ್ಗೆ ವೇದಗಳಲ್ಲಿ ಅವುಗಳ ಉಲ್ಲೇಖವಿದೆಯೆಂದು ಪ್ರಮಾಣಪೂರ್ವಕವಾಗಿ ಪ್ರತಿಪಾದಿಸುವರು. ಅಂದ ಮೇಲೆ ಹಿಂದೂ ಸಂಸ್ಕೃತಿಯ ಅಂಗಭೂತವಾದ ಜೈನ ಬೌದ್ಧಚಾರ್ವಾಕಾದಿ ಮತಗಳು ಸನಾತನ ಧರ್ಮಗಳೆಂದು ಹೇಳಿಕೊಳ್ಳುವ ಧರ್ಮದ ಸಮಕಾಲೀನ ಮತಗಳೆಂದು, ಧರ್ಮಗಳೆಂದು ಸ್ಪಷ್ಟವಾಗುತ್ತದೆ. ಪುರಾಣ ಮತಾದಿಗಳು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಗೆ ವ್ಯಕ್ತಗೊಳಿಸಿದರೂ ಗೊಳಸಲಿ. ಆದರೆ ಸಾರಾಸಾರ ವಿಚಾರವಂತರ ಮತ್ತು ಸಂಶೋಧಕರ ಮಾತಿಗೆ ಕಿವಿಗೊಡುವುದು ಹೆಚ್ಚು ಸಮಂಜಸವಾಗಿ ತೋರುತ್ತದೆ.

ವೈದಿಕ ಕಾಲದ ಸಮಾಜ ಸ್ಥಿತಿಯನ್ನು ಪರಾಮರ್ಶಿಸಿದರೆ ಆಗ ನೀತಿವಂತರೂ ದುರ್ಮಾರ್ಗಗಾಮಿಗಳೂ ಜ್ಞಾನಿಗಳೂ ಅಜ್ಞಾನಮಯರೂ ತತ್ವವೇತ್ತರೂ ಸಂಸಾರ ವಿಷಯ ಲಂಪಟರೂ ಸಗುಣ ದೇವತೋಪಾಸಕರೂ ನಿರ್ಗುಣ ದೇವತೋಪಾಸಕರೂ ಆಸ್ತಿಕರೂ ನಾಸ್ತಿಕರೂ



ಮುಂತಾದ ಬಗೆ ಬಗೆಯ ವಿಚಾರ ತರಂಗಗಳು ಅಸ್ತಿತ್ವದಲ್ಲಿದ್ಧದ್ದು ಗೋಚರವಾಗುತ್ತದೆ. ಅಂದರೆ ಯಜ್ಞಯಾಗಾದಿಗಳಿಂದ ಮಾತ್ರ ನಿಜ ಸುಖವಿದೆ ಎಂಬ ಪಂಥವೂ, ಯಜ್ಞಯಾಗಾದಿಗಳಿಂದ ಸ್ವರ್ಗವು ಲಭಿಸಿದರೂ ಅದು ಶಾಶ್ವತವಾದ ಸುಖವಲ್ಲದ್ದರಿಂದ ಜ್ಞಾನಮಾರ್ಗವೊಂದರಿಂದಲೇ ಕೈವಲ್ಯ ಪ್ರಾಪ್ತಿಯೆಂದು ಹೇಳುವ ಪಂಥವೂ, ಹೀಗೆ ವೇದ ಕಾಲದ ನಂತರ ಸ್ಪಷ್ಟವಾಗಿ ತೋರುವ ಬೇರೆ ಬೇರೆ ದರ್ಶನಗಳ ದ್ಯೋತಕವು ವೈದಿಕ ಕಾಲದಲ್ಲಿಯೂ ದಿಗ್ದರ್ಶವಾಗುತ್ತದೆಂದು ವೇದವೇತ್ತರು ಹೇಳುವರು. ಉದಾಹರಣಾರ್ಥ-ಶಂಕರಾಚಾರ್ಯರ ವೇದಾಂತ-ಅದ್ವೈತ ವಿಚಾರ ಪ್ರತಿಷ್ಠಾಪಕತ್ವವೂ, ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ವಿಚಾರವೂ, ಶ್ರೀಕಂಠ ಅಥವಾ ನೀಲಕಂಠ ಶಿವಾಚಾರ್ಯರ ಶಕ್ತಿ ವಿಶಿಷ್ಟಾದ್ವೈತ ಪ್ರತಿಪಾದಕತ್ವವೂ, ವೇದ ಕಾಲದಲ್ಲಿ ಕೂಡ ಬೀಜ ರೂಪದಿಂದ ಇದ್ದವೆಂದು ಆಧುನಿಕ ಸಂಶೋಧಕರ ಮತವಿದೆ.

ಪೂರ್ವ ಕರ್ಮಾನುಗುಣವಾಗಿ ಜನರ ಗುಣಕರ್ಮ ಸ್ವಭಾವಗಳು ಭಿನ್ನ ಭಿನ್ನವಾಗಿರುವವು. ಒಬ್ಬನಿಗೊಂದು ಸೇರುತ್ತಿದ್ದರೆ, ಇನ್ನೊಬ್ಬನಿಗೆ ಮತ್ತೊಂದರಲ್ಲಿ ರುಚಿಯುಂಟಾಗುವದು. ಮಗದೊಬ್ಬನು ಮೇಲಿನವೆರಡನ್ನೂ ಬಿಟ್ಟು ಮೂರನೆಯದೊಂದನ್ನು ಪ್ರೀತಿಸುವನು. ಹೀಗೆ ಜನರು ಭಿನ್ನ ರುಚಿಯವರಿದ್ದರೂ ಅವರು ಒಬ್ಬರಿಗೊಬ್ಬರು ವಿರೋಧಿಗಳಲ್ಲ. ಅವರವರ ಮಾನಸಿಕ ಸ್ಥಿತಿಯು ಅವರನ್ನು ತಮಗಿಷ್ಟವಾದ ಪದಾರ್ಥದ ಕಡೆಗೆಳೆಸುವದರಿಂದ ಅವರಲ್ಲಿ ಪರಸ್ಪರ ವಿರೋಧಭಾವವನ್ನು ಕಲ್ಪಿಸುವದು ಯುಕ್ತವೆನಿಸದು. ಹಾಗೆಯೇ ವೇದ ರಾಶಿಯು. ಇದನ್ನೊಂದು ಗಿಡಕ್ಕೆ ಹೋಲಿಸುವಾ. ಗಿಡದ ಎಲೆಗಳನ್ನು ಒಬ್ಬನು ತಕ್ಕೊಂಡು ಸೇವಿಸುವನು. ಮತ್ತೊಬ್ಬನು ಕಸುಗಾಯಿಗಳನ್ನು ಪ್ರೀತಿಸಿ ಸೇವಿಸುವನು. ಬೇರೊಬ್ಬನು ಪಕ್ವವಾದ ಹಣ್ಣುಗಳನ್ನು ತರಿದು ತಿನ್ನುವನು. ಇನ್ನೊಬ್ಬನು ಆ ಗಿಡದ ತೊಗಟೆಯೊಂದನ್ನೇ ಕೆತ್ತಿ ತೆಗೆದುಕೊಂಡು ಬಂದು ಅದನ್ನುಪಯೋಗಿಸುವನು. ಹೀಗೆ ಗಿಡವೊಂದೇಯಾದರೂ ಅದರ ಉಪಯೋಗವನ್ನು ಒಬ್ಬೊಬ್ಬರು ಒಂದೊಂದು ರೀತಿಯಿಂದ ತನುಗಿಷ್ಟವಿದ್ದಂತೆ ಮಾಡುವರು. ಆದರೂ ಯಾರೂ ಗಿಡವನ್ನು ವಿರೋಧಿಸಿದಂತಾಗಲಿಲ್ಲ. ಅದರಂತೆ ವೇದದಲ್ಲಿ ಅನೇಕ ಕರ್ಮಗಳ ವಿಚಾರವೂ ತಾತ್ವಿಕ ವಿಚಾರವೂ ಅಡಕವಾಗಿದ್ದರೂ ಕರ್ಮಕಾಂಡಿಯೂ

ಕರ್ಮಪರವಾದ ಮಂತ್ರಗಳನ್ನಷ್ಟೇ ಕಲಿಯಲಿಚ್ಛಿಸುವನು. ಜ್ಞಾನ ಕಾಂಡಿಯು ಜ್ಞಾನ ಮಾರ್ಗ ಸೂಚಕವಾದ ಮಂತ್ರಗಳನ್ನು ಅಭ್ಯಾಸಿಸಲು ಮನಸ್ಸು ಮಾಡುವನು. ಇವರೀರ್ವರು ವೇದ ವಿರೋಧಿಗಳೂ-ವೇದ ಬಾಹಿರರೂ ಎಂದು ಕರೆಯಲ್ಪಡುವದು ಯುಕ್ತಿ ಯುಕ್ತವಲ್ಲ.

ಇನ್ನು ವೇದಗಳಲ್ಲಿಯು ಶಬ್ದಗಳು ಅರ್ಥವಿಸ್ತಾರವುಳ್ಳವು ಇರುವದರಿಂದ (ವಿಭವೋ ಹ್ಯೆ ವೇದ ಶಬ್ದಾಃ) ಆಯಾ ಮತ ಸಾಂಪ್ರದಾಯಕರು ವೇದ ಮಂತ್ರಗಳಿಗೆ ತಮಗಭಿಮತವಾದ ಅರ್ಥವನ್ನೇ ಪ್ರತಿಪಾದಿಸಿರುವರು. "ಅಗ್ನಿ ಮೀಳೆ ಪುರೋಹಿತಮ್" ಎಂಬ ಮಂತ್ರದ ಅರ್ಥವನ್ನು ಅಗ್ನಿ ದೇವತಾ ಉಪಾಸಕರು ಅಗ್ನಿ ಪರವಾಗಿ ಅರ್ಥ ಮಾಡಿರುವರು. ವೀರಶೈವ ಶಿವಾಚಾರ್ಯರು ಅದನ್ನು ಇಷ್ಟಲಿಂಗ ಪರವಾಗಿ ಅನ್ವಯಿಸಿರುವರು. "ಅತಪ್ತತನುರ್ನತದಾಮೋಽಶ್ನುತೆ" ಎಂಬ ಋಗ್ವೇದ ಮಂತ್ರವನ್ನು ದ್ವೈತಸಾಂಪ್ರದಾಯದವರು ತಮ್ಮ ತಪ್ತ ಮುದ್ರಾ ಸಂಪ್ರದಾಯಕ್ಕನುಸರಿಸಿ ಪ್ರತಿಪಾದಿಸಿರುವರು. ವೀರಶೈವಾಚಾರ್ಯರು ಅದನ್ನೇ ಇಷ್ಟಲಿಂಗ ಪೂಜಾಪರವಾಗಿ ಹೇಳಿರುವರು. ಅಂದ ಮೇಲೆ ವೈದಿಕ ಮಂತ್ರಗಳಲ್ಲಿಯೇ ಭಿನ್ನ ಭಿನ್ನ ಅರ್ಥಕೊಡುವ ಸಾಮರ್ಥ್ಯವಿರುವಾಗ ಒಬ್ಬ ಆಚಾರ್ಯನು ಮಾಡಿದ ಅರ್ಥವು ತಪ್ಪು, ಇನ್ನೊಬ್ಬ ಆಚಾರ್ಯನು ಮಾಡಿದ್ದು ನಿಜವೆಂದು ಹೇಗೆ ಅನ್ನುವದಕ್ಕಾದೀತು? ಅವರವರ ಬುದ್ಧಿಮತ್ತೆ ಮತ್ತು ಮನಸ್ಸಿನ ಒಲವು ಹಾಗು ಸಂಪ್ರದಾಯಕ್ಕನುಸರಿಸಿ ಮತ್ತು ಶಬ್ದಗಳ ಯೌಗಿಕ ಬಲವನ್ನನುಲಕ್ಷಿಸಿ ಮಾಡಿದ ಅರ್ಥ ವಿವೇಚನೆಯು ಬಲ್ಲವರು ಸರಿಯಾದುದೆಂದೇ ಒಪ್ಪಿಕೊಳ್ಳಬೇಕಾಗುವದು. ಈ ಭಿನ್ನ ಭಿನ್ನಾರ್ಥ ಪ್ರತಿಪಾದಕರು ವೇದ ವಿರೋಧಿಗಳೆಂದು ಅನ್ನಲಾಗದು.

ಈ ಸಾಮಾನ್ಯ ವಿಚಾರಗಳನ್ನು ನೆನಪಿನಲ್ಲಿಟ್ಟುಕೊಂಡು ಇನ್ನು ವೀರಶೈವ ಮತವು ವೇದ ವಿರೋಧವಾದದ್ದೋ ವೇದ ಬಾಹಿರವಾದದ್ದೋ ಎಂಬುದನ್ನು ವಿಚಾರಿಸುವಾ. ವೀರಶೈವರು ಉಳಿದ ಶೈವರಂತೆ ನಾಲ್ಕು ವೇದಗಳೂ ಇಪ್ಪತ್ತೆಂಟು ಶಿವಾಗಮಗಳೂ ಈಶ್ವರ ನಿರ್ಮಿತವಾದ್ದರಿಂದ ಅವು ಅನಾದಿಯೆಂದು ತಿಳಿಯುವರು. ವೇದಗಳಲ್ಲಿ ಸೂತ್ರರೂಪದಿಂದ ಸಾಮಾನ್ಯವಾಗಿ ಹೇಳಿದ್ದೇ ಶಿವಾಗಮಗಳಲ್ಲಿ ಭಾಷ್ಯ ರೂಪದಿಂದ ವಿಶೇಷವಾಗಿ ವಿವೇಚಿಸಲ್ಪಟ್ಟದೆ ಎಂದು ನಂಬುವರು. ವೀರಶೈವ ಮತಕ್ಕೆ



ಆಧಾರಭೂತವಾದ ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷ ಶಿವ ಮಂತ್ರ ಪಾದೋದಕ ಪ್ರಸಾದವೆಂಬ ಅಷ್ಟಾವರಣಗಳು ನಿಗಮಾಗಮಗಳ ತಳಹದಿಯುಳ್ಳವಾಗಿವೆ. ಇವುಗಳ ಬಗ್ಗೆ ವಿಸ್ತೃತ ವಿವೇಚನೆಯನ್ನು ನನ್ನ "ವೀರಶೈವ ಮತ ಪ್ರಾಚೀನತ್ವ" ಮತ್ತು "ಶ್ರೀಪಾಲ್ಕುರಿಕೆ ಸೋಮಾರಾಧ್ಯ ವಿಜಯ" ವೆಂಬ ಗ್ರಂಥಗಳಲ್ಲಿ ನೋಡಬಹುದು.

ಇಂತಹ ಸನಾತನ ವೀರಶೈವ ಮತವನ್ನೇ ಬಸವನು ಹನ್ನೆರಡನೆಯ ಶತಮಾನದಲ್ಲಿ ಉದ್ಧರಿಸಿದನು. ಅವ್ಯಕ್ತ ಸ್ಥಿತಿಯಲ್ಲಿದ್ದ ವೀರಶೈವ ತತ್ವಗಳನ್ನು ಒಂದು ವಿಶಿಷ್ಟ ಸಮಾಜ ರೂಪದಿಂದ ಬಸವನು ವ್ಯಕ್ತಗೊಳಿಸಿದನು. ಬಸವನ ಪೂರ್ವದಲ್ಲಿ ಅಲ್ಪ ಸಂಖ್ಯಾಕವಾದೀ ಮತಾನುಯಾಯಿಗಳು ಉಳಿದ ಹಿಂದೂ ಸಮಾಜದಲ್ಲಿದ್ದುಕೊಂಡು ವ್ಯಕ್ತಿಮಾತ್ರವಾಗಿ ತಮ್ಮ ಧರ್ಮ ತತ್ವಗಳನ್ನಾಚರಿಸುತ್ತಿದ್ದರು. ವೀರಶೈವ ತತ್ವಗಳಿಗೆ ಸಮಾಜ ರೂಪವೂ ಅಭಿವ್ಯಕ್ತದೆಸೆಯೂ ಬಸವನಿಂದಲೇ ಬಂದಿತೆಂದು ಹೇಳಿದರೆ ತಪ್ಪಾಗದು. ಬಸವನು ಬ್ರಾಹ್ಮಣ ಕುಲದಲ್ಲಿ ಜನಿಸಿ ಉಪನಯನ ಸಂಸ್ಕಾರವನ್ನು ತದ್ವಾರಾ ಜಾತಿ ಬ್ರಾಹ್ಮ್ಯವನ್ನು ನಿರಾಕರಿಸಿದ್ದರಿಂದ ಇವನಿಗೆ ಬ್ರಾಹ್ಮಣರು ವೇದ ವಿರೋಧಿಯೆಂದು ಅಪಲಾಪಿಸುವರು. ಈಶ್ವರನ ಅಭಿವ್ಯಕ್ತಿಗೆ ಕಾರಣವಾದದ್ದೇ ಉಪನಯನ. ಇಂತಹ ಅಭಿವ್ಯಕ್ತಿಯು ಆತನು ಜನಿಸಿದಾಗಳೆ ತನ್ನ ಗುರುವಾದ ಸಂಗಮೇಶ್ವರ ಸ್ವಾಮಿಯು ಇಷ್ಟಲಿಂಗ ಸಂಬಂಧವನ್ನು ಅಂದರೆ ಶಿವ ದೀಕ್ಷೆಯನ್ನು ಮಾಡಿದ್ದರಿಂದ, ಉಂಟಾಗಿತ್ತು. ಆದ್ದರಿಂದ ಅವನು ಸಂಸಾರ ಬಂಧನ, ಕರ್ಮ ಪಾಶ, ಸೂಚಕವಾದ ಜನ್ನಿವಾರವನ್ನು ತಿರಸ್ಕರಿಸಿದನು.

"ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ವೃಥಾ ಬರುದೊರೆಹೋಹ ಕೆಡುಕ ಹಾರುವ ನಾನಲ್ಲ. ಹಾರುವೆನಯ್ಯ ನಿಮ್ಮ ಭಕ್ತರ ಬರವ ಗುಡಿಗಟ್ಟಿ. ಹಾರುವೆನಯ್ಯ ನಿಮ್ಮ ಶರಣರ ಬರವ ಗುಡಿಗಟ್ಟಿ. ಕೂಡಲಸಂಗಮದೇವ ವಿಪ್ರಕರ್ಮವ ಬಿಡಿಸಿ ಆಶುದ್ಧನ ಶುದ್ಧನ ಮಾಡದನಾಗಿ."

ಸಾರ ಸಂಸಾರ ದ್ವಿಜತ್ವವ । ಪಾರಪತಿತವಲಾ ಸದಮಳಾ ।
ಚಾರಸದ್ಗುರುವಿನ ಕರಾಬ್ಜದಿ ಜನ್ಮನಾದಂಗೆ ॥

ಧಾರುಣೀಸುರ ಜನ್ಮ ಕರ್ಮಂ। ಕ್ರೂರ ಕರ್ಮವಲಾಪ ಗುರುಭಜ।
ನಾರತಂಗಗ್ನಿಗೆ ಹತಿಯನಿಕ್ಕಿದೊಡೆ ದೋಷವಲಾ ॥೪೫॥

"ವಿರಸವೆನಗಿದು ಮುಂಜಿಯೆಂಬುದನೊರೆಯದಿರು"

(ಭೀಮಕವಿಯ ಬಸವ ಪುರಾಣ)

ಹೀಗೆ ಬಸವನು ಕರ್ಮಕಾಂಡದಲ್ಲಿ ಸಿಲುಕಿದ ಬ್ರಾಹ್ಮಣರಲ್ಲಿ ಹುಟ್ಟಿದ್ದರಿಂದಾದ ಪ್ರಾಕೃತತ್ವ ಅಥವಾ ಜಡತ್ವವನ್ನು ಅರಿತು ಸದ್ಗುರುವಿನಿಂದ ಇಷ್ಟಲಿಂಗ ಸಂಬಂಧವನ್ನು ಪಡೆದು ಅಪ್ರಾಕೃತ ಶರೀರಿಯಾದನು. ಶರೀರವು ಪಂಚಧಾತುವಿನಿಂದ ಪುಷ್ಟಿಯನ್ನು ಹೊಂದುತ್ತದೆ. ನಾನು ಎಂಬ ಅಭಿಮಾನಕ್ಕೆ ಈ ಶರೀರವು ಒಳಗಾಗಿದೆ. ಇದಕ್ಕೆ ಲಿಂಗ ಸಂಬಂಧವಾಗುವದರಿಂದ ನಾನು ಎಂಬ ಅಭಿಮಾನವಳಿದು, ಶರೀರವು ಲಿಂಗಸ್ವರೂಪವಾಗುವದು. ಮಲಮಾಯಾ ಕರ್ಮಗಳು ಬಂಧನಕ್ಕೆ ಕಾರಣ. ಜಾತಿ ವರ್ಣಾಶ್ರಮಗಳಿಂದ ಜೀವನಿಗೆ ಸಂಕುಚಿತ ಭಾವ ವುಂಟಾಗುವದು. ಇಷ್ಟ ಪ್ರಾಣ ಭಾವಲಿಂಗಗಳಿಂದ ಆಣವಮಲ ಮಾಯಾಮಲ ಕಾರ್ಮಿಕ ಮಲವೆಂಬ ಮೂರು ಮಲಗಳು ನಾಶವಾಗುವದರಿಂದ ಬಸವನು ಉಪನಯನ ಸಂಸ್ಕಾರವನ್ನು ಬಿಟ್ಟನು. ಆತನು ಹತ್ತಿದ ಮೆಟ್ಟಲು ದ್ವಿಜತ್ವದ ಮೆಟ್ಟಲಿಗಿಂತ ಮೇಲಾದದ್ದಿತ್ತು. ಸನ್ಯಾಸ ವ್ರತವನ್ನು ಸ್ವೀಕರಿಸಿದ ಯತಿಗಳು ಜನ್ನಿವಾರವನ್ನು ಧರಿಸುವದಿಲ್ಲ. ಅವರಿಗೆ ಸೂತಕಾದಿಗಳಿಲ್ಲ. ಹೀಗಿದ್ದರೂ ಅವರಿಗೆ ವೇದವಿರೋಧಿಗಳೂ ವೇದಬಾಹಿರರೂ ಎಂದು ಯಾರೂ ಅನ್ನುವದಿಲ್ಲ.

ಇನ್ನು ಬಸವನ ವಚನಗಳ ಮೇಲಿಂದ ನೋಡಲು ಆತನು ವೇದ ವಿರೋಧಿಯೋ ಅಥವಾ ವೇದ ಬಾಹಿರನೋ ಹೇಗೆಂಬುವನ್ನು ಓದುಗರೇ ಗೊತ್ತುಮಾಡಲಿ.

ವೀರಶೈವ ಧರ್ಮವು ಶಿವಸರ್ವೋತ್ತಮತ್ವವನ್ನು ಸಾರುತ್ತದೆ. ಇದನ್ನು ತಿಳಿದು ಬಸವನು ತನ್ನ ವಚನಗಳಲ್ಲಿ ಕೆಳಗಿನ ಶ್ರುತಿವಾಕ್ಯಗಳನ್ನು ಆಧಾರವಾಗಿ ಉದಹರಿಸಿದ್ದಾನೆ.

ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮಮಹಿಮಂಗೆ ಪ್ರತಿಯುಂಟೆ? "ಸೋಮಃಪವತೆ" ಎಂಬ ಶ್ರುತಿಯನರಿದು ಶಿವ ಏಕೋದೇವ ರುದ್ರೋನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದೆತ್ತಿದೆ ಬಿರಿದ ಜಗವೆಲ್ಲವರಿಯಲು."



ಉಪ್ಪರ ಗುಡಿ, ನಂದಿವಾಹನ, ಸದ್ಯೋಜಾತನ ಬಾಗಿಲ ಮುಂದೆ ಸಾರುತ್ತಿದ್ದಾವೆ ನೋಡಾ ಶ್ರುತಿಗಳು. ನಾಲ್ಕುವೇದಗಳು ಹುಸಿಯದೆ "ಭರ್ಗೋದೇವಸ್ಯ ಧೀಮಹಿ" ಎಂದುದಾಗಿ ಕೂಡಲಸಂಗನಲ್ಲದಿಲ್ಲೆಂದುದು ವೇದ.

ವೇದ ಸ್ವಯಂಭುವೆಂಬ ವಾದಿನೀ ಕೇಳಿಲೆವೋ. ಏಕೋದೇವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. "ಓಂದ್ಯಾವಾಭೂಮೀ ಜನಯನ್ ದೇವಾ। ಏಕೋ ದೇವ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. "ಚಕಿತಮಭಿಧತ್ತೆ" ಎಂದು ಶ್ರುತಿ ಸಾರುತ್ತಿದ್ದಾವೆ. ಜಗದ ಕರ್ತ ಕೂಡಲಸಂಗಮದೇವನೊಬ್ಬನೇ ಕಾಣಿರಣ್ಣಾ.

ಶ್ರುತಿತತಿ ಶಿರದ ಮೇಲೆ "ಅತ್ಯತಿಷ್ಠದ್ದಶಾಂಗುಲನ" ನಾನೇನೆಂಬೆನಯ್ಯಾ? ಘನಕ್ಕೆ ಘನಮಹಿಮನ ಮನಕ್ಕಗೋಚರನ "ಅಣೋರಣೀಯಾನ್ ಮಹತೋ ಮಹೀಯಾನ್" ಮಹಾದಾನಿ ಕೂಡಲಸಂಗಮದೇವ.

ಹೀಗೆ ಮಹೇಶ್ವರ ಸ್ಥಲದ ವಚನಗಳಲ್ಲಿ "ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ। ಮುಖ ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ" ಎಂದುದಾಗಿ ತನ್ನ ವಚನಗಳ ಬೆಂಬಲಕ್ಕಾಗಿ ಉಪನಿಷದ್ವಾಕ್ಯಗಳನ್ನು ಉದಾಹರಿಸಿದ್ದಾನೆ. ಬಸವನು ತನ್ನ ವಚನಗಳಲ್ಲಿ ಪುರಾಣ ವಾಕ್ಯಗಳನ್ನೂ ಭಾರತ ರಾಮಾಯಣದಲ್ಲಿಯ ಕಥಾತಾತ್ಪರ್ಯವನ್ನೂ ಶೈವ ಶಾಸ್ತ್ರದ ವಚನಗಳನ್ನೂ ಅಪರಿಮಿತವಾಗಿ ಉದಾಹರಿಸಿರುವನು. ಬಸವನ ವಚನಗಳನ್ನು ಚನ್ನಾಗಿ ಪರಾಮರ್ಶಿಸಿದಲ್ಲಿ ಬಸವನು ಸಂಸ್ಕೃತ ಭಾಷೆಯಲ್ಲಿ ಚನ್ನಾಗಿ ಗತಿಯನ್ನು ಸಂಪಾದಿಸಿದ್ದನೆಂದೂ ಸಕಲ ಶಾಸ್ತ್ರ ಪಾರಂಗತನಿದ್ದನೆಂದೂ ಒಡೆದು ಕಾಣುವದು.

"ಈಶ್ವರ ಸದ್ಭಾವೇ ಕಿಂ ಪ್ರಮಾಣವೆ"ಂಬ ಮೀಮಾಂಸಕನ ಮೂಗಿನ ಕೊನೆಯನು 'ವಿಶ್ವತೋ ಚಕ್ಷುರುತ ವಿಶ್ವತೋಮುಖ ವಿಶ್ವತೋ ಬಾಹು

ರುತ ವಿಶ್ವತೋ ಪಾದ್ ಸ ಬಾಹುಭ್ಯಾಂ ದಮತಿ ಸಂಪದಿತ್ರೈದ್ಯಾವಾಭೂಮೀ !ಜನಯನ್ ದೇವಯೇಕ’ ಎಂಬ ಸುರಿಗಿಯಿಂದಿರಿದು ವೈಶೇಷಿಕನೆಂಬ ಇಟ್ಟಿಗೆಯಲೊರಸಿ, ಕೂಡಲಸಂಗಯ್ಯನೆಂಬ ಕನ್ನಡಿಯ ತೋರುವೆನು.’’

ಇದಲ್ಲದೆ ಬಸವನು ಯಜ್ಞಯಾಗದ ನೆವ ಮಾಡಿ ಮಾಂಸ ಭಕ್ಷಣೆಯಲ್ಲಿ ಆಸಕ್ತರಾದ ವೈದಿಕರನ್ನು ‘ಹೋಮದ ನೆವಮಾಡಿ ಹೋತನ ತಿಂಬುವ ದ್ವಿಜರ ಮಾತೇಕೋ’ ಎಂದು ಮೊದಲಾದ ತನ್ನ ವಾಕ್ಪ್ರಹಾರದಿಂದ ಚೆನ್ನಾಗಿ ತಿಳಿಸಿರುವನು. ಮತ್ತು ವೇದಗಳಲ್ಲಿ ಮುಖ್ಯವಾಗಿ ಹೇಳಿದ ಯಾಗಾದಿ ಕರ್ಮಗಳನ್ನು ತನ್ನ ಯುಕ್ತಿಪ್ರಯುಕ್ತಿಗಳಿಂದ ಖಂಡಿಸಿರುವನು. ಈ ಕಾರಣದಿಂದ ಬಸವನು ವೇದವಿರೋಧಿ ಅಥವಾ ವೇದ ಬಾಹಿರನಾಗಬಲ್ಲನೇ? ಹಾಗಾದರೆ, ಶ್ರೀಶಂಕರಾಚಾರ್ಯರು ಅದ್ವೈತ ಜ್ಞಾನವೇ ಮಾನವರ ಮುಕ್ತಿಗೆ ಮೂಲ ಕಾರಣವೆಂದು ಹೇಳುವಾಗ ಯಜ್ಞಯಾಗಾದಿ ಕರ್ಮಗಳು ಆತ್ಮಜ್ಞಾನಕ್ಕೆ ಪ್ರತಿಬಂಧಕಗಳಾಗಿರುತ್ತವೆಂದು ಅವುಗಳನ್ನು ಸಂಪೂರ್ಣವಾಗಿ ನಿರಾಕರಿಸಿರುವರು. ಇದರಿಂದ ಶ್ರೀಶಂಕರಾಚಾರ್ಯರು ವೇದವಿರೋಧಿಗಳೆಂದೂ ಅಥವಾ ವೇದ ಬಾಹಿರರೆಂದೂ ಹೇಳಲಿಕ್ಕಾದೀತೇ? ಯಜ್ಞಯಾಗಾದಿ ಕರ್ಮಗಳನ್ನು ಹಳಿದ ಮಾತ್ರದಿಂದ ವೇದಗಳು ಅವಂಗೆ ಅಪ್ರಮಾಣ ಗ್ರಂಥಗಳೆಂದು ಯಾರೂ ತಿಳಿಯುವದಿಲ್ಲ. ಅದ್ವೈತ ಮತವಾದಿಗಳು ಸನ್ಯಾಸಾಶ್ರಮಿಗಳಿಗೆ ಯಜ್ಞಾದಿ ಕರ್ಮಗಳನ್ನು ಹೇಳುವದಿಲ್ಲ.

ಪರಮತೀಯರು ಬಸವನ ವಿಷಯವಾಗಿ ಇನ್ನೊಂದು ಆಕ್ಷೇಪವನ್ನೆತ್ತುವರು. ಅದೇನೆಂದರೆ:— ಬಸವನು ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಲಿಂಗಸಾರಿಯಾಗಿ ತನ್ನ ಬ್ರಾಹ್ಮಣ ಧರ್ಮವನ್ನೂ ಬಂಧುಗಳನ್ನೂ ನಿರಾಕರಿಸಿ ವೀರಶೈವ ಭಕ್ತಿಯನ್ನು ಸರ್ವತ್ರ ಪ್ರಚಾರಗೊಳಿಸುವದಕ್ಕಾಗಿ ಜಾತಿ ತಾರತಮ್ಯವಿಲ್ಲದೆ ಕುಲ ಹದಿನೆಂಟು ಜಾತಿಯವರಿಗೂ ಲಿಂಗ ದೀಕ್ಷೆಯನ್ನು ಕೊಡಿಸಿ ಅವರೊಡನೆ ಬಳಿಕೆ ಭೋಜನ ಮುಂತಾದ ವ್ಯವಹಾರ ಮಾಡಿ ಜಾತಿ ಸಾಂಕರ್ಯಕ್ಕೆ ಅನುವಾದನು. ಕಾರಣ ವೇದ ಸಮ್ಮತವಾದ ವರ್ಣಾಶ್ರಮ ಧರ್ಮಗಳನ್ನು ಕಿತ್ತುಹಾಕಿದ್ದರಿಂದ ಅವನು ವೇದವಿರೋಧಿಯು ಹೇಗಲ್ಲ? ಎಂದು ಪ್ರಶ್ನೆ ಮಾಡುವರು.



ಇದಕ್ಕೆ ಉತ್ತರ. ಈ ಆಕ್ಷೇಪವು ವೀರಶೈವ ಮತಕ್ಕೇನೇ ಹತ್ತುವದು. ಬಸವನೊಬ್ಬನಿಗೆ ಮಾತ್ರ ಸಂಬಂಧಿಸುವದಿಲ್ಲ. ವೀರಶೈವ ಮತವು ನಿಗಮಾಗಮ ಸಮ್ಮತವಾದದ್ದೆಂಬ ಬಗ್ಗೆ ಅನೇಕ ಗ್ರಂಥಗಳು ಪ್ರಚಾರದಲ್ಲಿವೆ. ಆ ಪ್ರಮಾಣಗಳನ್ನೆಲ್ಲ ಉದಾಹರಿಸುತ್ತ ಹೋದರೆ ಈ ಚಿಕ್ಕ ನಿಬಂಧವು ವಿಸ್ತಾರವನ್ನೈದುವದರಿಂದ ಈ ಬಗ್ಗೆ ವಾದಿಗಳು ನಂಜನಾಚಾರ್ಯರಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ “ವೇದಾಂತಸಾರ ವೀರಶೈವ ಚಿಂತಾಮಣಿ’’ ಎಂಬ ಗ್ರಂಥವನ್ನೂ ಮತ್ತು ಆಂಗ್ಲ ಭಾಷೆಯಲ್ಲಿ ಪ್ರಸಿದ್ಧವಾದ “Veerashaiva Philosophy of Shaivagamas” ಎಂಬ ಗ್ರಂಥವನ್ನು ಮುಖ್ಯವಾಗಿ ಓದಿಕೊಂಡು ತಮ್ಮ ಶಂಕಾನಿರಸನ ಮಾಡಿಕೊಳ್ಳಬೇಕು. ಇವೆರಡಲ್ಲದೆ ಇನ್ನೂ ಅನೇಕ ಗ್ರಂಥಗಳಲ್ಲಿ ಈ ವಿಷಯವು ಪ್ರತಿಪಾದಿತವಾಗಿದ್ದು ಅವನ್ನು ಕೂಡ ವಾದಿಗಳು ತಮ್ಮ ವಿರಾಮ ಕಾಲದಲ್ಲಿ ಓದಿಕೊಂಡು ಸಮಾಧಾನ ಹೊಂದಬೇಕು. ನಿಷ್ಪಕ್ಷಪಾತಿಗಳಿಗೆ ನನ್ನೀ ಮಾತು. ಮತಾಂಧತೆಯಿಂದ ಅಸೂಯಾಪರರಾಗಿ ತಮ್ಮ ದುರಭಿಮಾನವನ್ನೂ ಹಟವನ್ನೂ ಸಾಧಿಸುವವರಿಗೆ ಈ ನಿಬಂಧವು ಸಮಾಧಾನಗೊಳಿಸದು.

ಬಸವನು ವೀರಶೈವ ಮತತತ್ವಗಳನ್ನು ಪುನರುಜ್ಜೀವನಗೊಳಿಸಿದನೆಂದು ಮೇಲೆ ಹೇಳಿದೆ. ಅಂದಮೇಲೆ ವೀರಶೈವ ಮತತತ್ವಗಳು ನಿಗಮಾಗಮಗಳ ಆಧಾರ ಸ್ತಂಭದ ಮೇಲೆ ನಿಂತಿವೆಯೆಂದ ಬಳಿಕ ಬಸವನು ವೇದಬಾಹಿರನಲ್ಲ; ವೇದ ವಿರೋಧಿಯೂ ಅಲ್ಲ. ಭವಿಯು ಹೋಗಿ ಭಕ್ತನಾದ ಬಳಿಕ ಆತನಲ್ಲಿ ಜಾತಿಭೇದವನ್ನು ಕಲ್ಪಿಸಲಾಗದೆಂದು ಶಾಸ್ತ್ರದ ಕಟ್ಟು. ಭಕ್ತರೆಲ್ಲರು ಶಿವ ಸಹೋದರರು. ಅವರಿಗೆ ಪಾರ್ವತೀ ಪರಮೇಶ್ವರರೇ ತಾಯಿತಂದೆಗಳು. ಅವರ ಕುಲವು ಶಿವ ಕುಲವು. ಒಬ್ಬ ಚಾಂಡಾಲನಾದರೂ ಸುಶೀಲನಿದ್ದು ಸಂಸಾರಕ್ಕೆ ಹೇಸಿ ಗುರು ಕಾರುಣ್ಯವಂ ಪಡೆದು ಲಿಂಗಧಾರಿಯಾದಲ್ಲಿ ಅಂಥವನ ಪೂರ್ವ ಜಾತಿಯನ್ನು ಸ್ಮರಿಸಲುಬಾರದು. ಎತ್ತಿ ಆಡಲುಬಾರದೆಂದು ಸೂಕ್ಷ್ಮಾಗಮ ವಚನವು ಕೈಯೆತ್ತಿ ಸಾರುತ್ತಿದೆ. ಅಂಥವನು ಲಿಂಗಧಾರಿಯಲ್ಲದ ಬ್ರಾಹ್ಮಣನಕ್ಕಿಂತಲೂ ಶ್ರೇಷ್ಠನು.

“ಉಂಬಲ್ಲಿ ಉಡುವಲ್ಲಿ ಕುಲವಲಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಮಾದಿಗರನೇನೆಂಬೆನಯ್ಯ? ಇವರೆಂತು ಭಕ್ತ

ರೆಂಬೆನಯ್ಯಾ? ಇವರೆಂತು ಯುಕ್ತರೆಂಬೆನಯ್ಯಾ? ಇವರು ವಜ್ಯೋಚ್ಛಿಷ್ಟ ಭಕ್ತರು; ಇವರು ವಜ್ಯೋಚ್ಛಿಷ್ಟ ಭವಿಗಳು; ಅದೆಂತೆಂದೊಡೆ ಲೈಂಗ್ಯೆ "ಸ್ತ್ರೀವಾ ಪುರುಷಷಂಡ ಚಾಂಡಾಲ ದ್ವಿಜವಂಶಜಃ। ನ ಜಾತಿ ಭೇದೋ ಲಿಂಗಾರ್ಚನೆ ಸರ್ವೇ ರುದ್ರಗಣಾಃ ಸ್ಮೃತಾಃ" ಇಂತೆಂಬ ಪುರಾಣ ವಾಕ್ಯವ ತಿಳಿದು ನೋಡಿರೇ. ಸರ್ವರೂ ರುದ್ರಗಣಂಗಳೆಂಬೆ. ಸರ್ವರೂ ಸದ್ಭಕ್ತರೆಂಬೆ. ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ, ಅವರಿಗೆ ಬೇಕಾದ ಹೆಣ್ಣು ಕೊಟ್ಟು ತನಗೆ ಬೇಕಾದುದ ತೆಗೆದುಕೊಂಬುವದು. ಈ ಕ್ರಮವನರಿಯದವನ ಭಕ್ತಿ ಹೊಲತಿ ಶುದ್ಧ ನೀರ ಮಿಂದಂತಾಯಿತ್ತು ಕೂಡಲಸಂಗಮದೇವಾ."

"ದೇವ ದೇವ ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರನೊಂದೇ ಎಂಬೆ............"

"ಆವ ಕುಲವಾದರೇನು ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರನಾದ ಬಳಿಕ? ಇದಕ್ಕೆ ಪ್ರಮಾಣ "ಶಿವ ಜಾತ ಕುಲೆ ಧರ್ಮ ಪೂರ್ವಜನ್ಮ ವಿವರ್ಜಿತಂ। ಉಮಾಮಾತಾ ಪಿತಾ ರುದ್ರ ಈಶ್ವರಃ ಕುಲಮೇವಚ.........."

ಕಟ್ಟಿಗೆಯಲ್ಲಿ ಅವ್ಯಕ್ತವಾಗಿದ್ದ ಅಗ್ನಿಯು ಅವುಗಳ ಮಥನ ಕ್ರಿಯೆಯಿಂದ ಹೊರಬಿದ್ದು ಕಟ್ಟಿಗೆಯನ್ನು ಸುಟ್ಟು ಅಗ್ನಿಯಾಗಿಯೇ ಉಳಿಯುವಂತೆ, ಗುರುವಿನ ಹಸ್ತಮಸ್ತಕ ಸಂಯೋಗದಿಂದ ಒಳಗಿನ ಚೈತನ್ಯವೇ ಇಷ್ಟಲಿಂಗವಾಗಿ ಅಭಿವ್ಯಕ್ತಿಯನ್ನು ಹೊಂದಿ ತನುಗುಣವಳಿದು ಅಂದರೆ ಅಂಗಗುಣಗಳನ್ನು ನಷ್ಟಮಾಡಿ ಲಿಂಗಕ್ರಿಯೆಗಳಾಗಿ ಪರಿಣಮಿಸುವದರಿಂದ ಜಾತಿಭೇದವು ಉಳಿಯಲಾರದು. ಈ ವಿಷಯದಲ್ಲಿ ಶ್ರೀಯುತ ಸಿದ್ಧರಾಮಪ್ಪ ಪಾವಟೆಯವರ ರಸವತ್ತಾದ ವಾಣಿಯಿಂದ ಆಡಿದ ನುಡಿಗಳನಿಲ್ಲಿ ಉಲ್ಲೇಖಿಸುವೆನು.

"ಲಿಂಗಧಾರಣದಿಂದ ಅಂಗದ ಕ್ರಿಯೆಗಳೆಲ್ಲ ಲಿಂಗ ಕ್ರಿಯೆಗಳಾಗುವುದರಿಂದ ಶರಣರ ಉದ್ಯೋಗ ಭೇದದಿಂದ ಅವರಲ್ಲಿ ಜಾತಿಭೇದಕ್ಕೆ ಆಯಾ ಚಿತ್ರರುಗಳು ಮಾಡುವ ಕ್ರಿಯೆಗಳು ತಮ್ಮ ತಮ್ಮವೆ ಆಗಿರುವುದರಿಂದ ಅವುಗಳಿಂದವರಲ್ಲಿ ಹಿರಿದು ಕಿರಿದು ಜಾತಿಗಳನೆಣಿಸಲಾಗು



ವುದು. ಆದರೆ ಲಿಂಗ ಕ್ರಿಯೆಗಳೇ ಕ್ರಿಯೆಗಳಾದ ಶರಣರಲ್ಲಿ ಜಾತಿ ಭೇದವು ತಲೆದೋರದು."

ಅಂದರೆ ಭವಿ ಜಾತಿಯಲ್ಲಿ ಕನಿಷ್ಠನೆನಿಸಿಕೊಂಡು ಭಕ್ತನಾದಲ್ಲಿ ಅವನ ಕೀಳುತನವು ತೊಲಗಿ ಕುಲೀನನಾಗುವನು. ಪೂರ್ವಾಶ್ರಯದ ಕುರುಹು ಯಾವದೂ ಆತನಲ್ಲಿ ತೋರುವದಿಲ್ಲ. ಅಂದ ಮೇಲೆ ಸಾಂಕರ್ಯ ದೋಷವು ಇಲ್ಲವಾಗಿ ಶಿವಕುಲಕ್ಕೆ ಸಂಬಂಧಿಸಿದವನಾದನು. ವಿಷಯಾಭಿಲಾಷೆಯಿಂದಾಗಲೀ ಕಾಮೋದ್ರೇಕದಿಂದಾಗಲೀ ಬೇರೆ ಬೇರೆ ಕುಲದ ಹೆಣ್ಣು ಗಂಡು ಬೆರೆದರೆ, ಅಥವಾ ಧರ್ಮಾಂತರ ಮಾಡಿದರೆ ಅದರಲ್ಲಿ ಸಾಂಕರ್ಯ ದೋಷವಿರುವದು. ಆದರೆ ಲಿಂಗ ಧಾರಣ ದೀಕ್ಷೆಯು ಕಂಡ ಕಂಡವರಿಗೆ ಸಲುವಳಿಯಾಗತಕ್ಕ ಕ್ರಿಯೆಯಲ್ಲ. ಸಂಸಾರದಲ್ಲಿ ವಿರಕ್ತಿ ಭಾವವನ್ನು ತಾಳಿದ ಸುಶೀಲರಿಗೆ ಮಾತ್ರ ಲಿಂಗಧಾರಣ ವಿಧಿಯು ಹೇಳಲ್ಪಟ್ಟಿದೆ.

ಇನ್ನೊಂದು ಮಾತನ್ನು ಹೇಳಿ ಈ ಲೇಖವನ್ನು ಮುಗಿಸುವೆನು.

"ವೇದಕ್ಕೆ ಒರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ ನೋಡಯ್ಯಾ. ಮಹಾದಾನಿ ಕೂಡಲ ಸಂಗಯ್ಯಾ ಮಾದರ ಚೆನ್ನಯ್ಯನ ಮನೆಯಲುಂಡ ಕಾರಣ."

"ವೇದ ನಡನಡುಗಿತ್ತು. ಶಾಸ್ತ್ರವಗಲಿ ಕೆಲಸಾರಿತ್ತಯ್ಯಾ. ತರ್ಕ ತರ್ಕಿಸಲರಿಯದೆ ಮೂಗುವಟ್ಟಿತ್ತಯ್ಯಾ. ಆಗಮ ಹೊರತೊಲಗಿ ಆಗಲಿದ್ದುದಯ್ಯಾ. ನಮ್ಮ ಕೂಡಲಸಂಗನು ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ."

ಬಸವನು ತನ್ನ ವಚನದಲ್ಲಿ ವೇದಾಗಮಶಾಸ್ತ್ರ ಪುರಾಣಗಳ ನಿಂದೆಯನ್ನು ಮಾಡಿದ್ದರಿಂದ ಆತನು ವೇದಬಾಹಿರನೇಕಲ್ಲ? ಎಂದು ವಾದಿಸಿದರೆ ಅದಕ್ಕುತ್ತರವೇನಂದರೆ, ಈ ವಚನಗಳ ನಿಜಾರ್ಥವನ್ನು ತಿಳಿಯದೆ ನೀವು ವಾದಿಸುವಿರಿ. ಮೇಲಿನ ವಚನಗಳಿಂದ ಬಸವನು ವೇದಾಗಮಗಳನ್ನಾಗಲಿ ಶಾಸ್ತ್ರಪುರಾಣಗಳನ್ನಾಗಲಿ ನಿಂದಿಸಿರುವದಿಲ್ಲ. ವೇದಗಳಾಗಲಿ ಶಾಸ್ತ್ರಗಳಾಗಲಿ ತಮ್ಮ ಕರ್ತೃವಾದ ಶಿವನ ನಿಲುಕಡೆ

ಯನ್ನು ತಿಳಿಯಲಾರವು. ಅದರಂತೆಯೇ ಶಿವಶರಣರ ಚಾರಿತ್ರ್ಯವನ್ನು ತಿಳಿಯಲು ಸಾಮರ್ಥ್ಯವಿಲ್ಲ. ಬೇಡರ ಕಣ್ಣಪ್ಪಯ್ಯನಿಂದ ಬಾಯಲ್ಲಿ ಮುಕ್ಕಳಿಸಿದ ಜಲವು ಕಾಲಹಸ್ತೀಶ್ವರನಿಗೆ ಮಜ್ಜನೋದಕವಾಯಿತು. ಆತನ ಬಾಯಿಂದ ತಂದ ಮಾಂಸವು ನೈವೇದ್ಯವಾಗಿ ಪರಿಣಮಿಸಿತು. ಕಣ್ಣನ್ನು ಕೊಟ್ಟಂಥ ಕಣ್ಣಪ್ಪನು ಶಿವಸಾಯುಜ್ಯ ಮುಕ್ತಿಯುಂ ಪಡೆದನು. ಈ ತರದ ಆಚರಣೆಯು ಯಾವ ವೇದದಲ್ಲಿ ಹೇಳಿದೆ? ಯಾವ ಶಾಸ್ತ್ರದಲ್ಲಿ ಕಂಡಿದೆ? ಶಿವನು ಹೇಗೆ ವೇದ ಆಗಮ ಶಾಸ್ತ್ರ ಪುರಾಣ ವಚನಗಳಿಗೆ ಮೀರಿದವನಾಗಿರುವನೋ ಹಾಗೆಯೇ ಶಿವಶರಣರ ನಡೆಯು ಅಗಾಧವಾದದ್ದೆಂಬದನ್ನು ತೋರಿಸುವದಕ್ಕಾಗಿಯೇ ಬಸವನು ಮಾರ್ಮಿಕ ಶಬ್ದಗಳಿಂದ ಆಡಿರುವನು. ಮೊದಲನೆಯ ವಚನದ ಅರ್ಥವನ್ನು ಶಿವಶರಣರು ಹೀಗೆ ಮಾಡಿರುವರು.

"ಲಿಂಗಾಂಗಿಗಳಲ್ಲಿ ಒಬ್ಬ ಶ್ರೇಷ್ಠ ಜಾತಿಯವನು ಮತ್ತೊಬ್ಬ ಕೀಳು ಜಾತಿಯವನೆಂದು ಹೇಳಿದ ಹಾಗೆ ನಾಲ್ಕು ವೇದಗಳ ಬಾಯ ಮುದ್ರಿಸುವೆನು. ಶಿವಶರಣರಲ್ಲಿ ಸುಖ ದುಃಖ ಪುಣ್ಯಪಾಪ ಬಂಧಮೋಕ್ಷಗಳೆಂಬ ದ್ವಂದ್ವ ಕರ್ಮಗಳನುಂಟುಮಾಡಿ ಹೇಳದ ಹಾಗೆ ಹದಿನೆಂಟು ಧರ್ಮಶಾಸ್ತ್ರಗಳಿಗೆ ಬೇಡಿಯ ಜೋಡಿಸುವೆನು. ತರ್ಕ ಶಾಸ್ತ್ರವು ಶಿವಶರಣರಲ್ಲಿ ಹೌದಾದುದನೇ ಅಲ್ಲ ಮಾಡಿ, ಅಲ್ಲವಾದುದನೇ ಹೌದುಮಾಡಿ ಹೇಳದ ಹಾಗೆ ಬೆನ್ನಿಗೆ ಚರ್ಮದ ಬಾರನ್ನು ತೋರಿಸುವೆನು. ಆಗಮಗಳು ಸಹ ಹಾಗೆ ಹೇಳಬಾರದೆಂದು ಅವುಗಳ ನಾಸಿಕವನ್ನು ಛೇದಿಸುವೆನು. ಯಾಕೆ ಹೀಗೆ ಅನ್ನುವೆನೆಂದರೆ, ಸಕಲ ವಿದ್ಯೆಗೆ ಕರ್ತೃವಾದ ಪರಮೇಶ್ವರನೇ ಮಾದರ ವಂಶದಲ್ಲಿ ಹುಟ್ಟಿ ಲಿಂಗಾಂಗ ಸಂಬಂಧಿಯಾದ ಶಿವಶರಣನೊಡನೆ ಕೂಡಿಕೊಂಡು ಉಂಡನಾದ್ದರಿಂದ."

ಇನ್ನು ಎರಡನೆಯ ವಚನದ ಅರ್ಥ.

"ಶಿವಶರಣರಲ್ಲಿ-ಲಿಂಗಾಂಗಿಗಳಲ್ಲಿ-ಜಾತಿಯನ್ನು ಹೇಳಿದರೆ ಶಿವನಿಂದ ತಮಗೇನು ಶಿಕ್ಷೆಯಾದೀತೋ ಎಂದು ವೇದವು ಗದಗದನೆ ಕಂಪಿಸಿತ್ತು. ಧರ್ಮ ಶಾಸ್ತ್ರಗಳು ಶಿವಶರಣರಿಗೆ ದ್ವಂದ್ವ ಕರ್ಮಗಳನ್ನು ಹೇಳಿದರೆ ತಮಗೇನು ಶಿಕ್ಷೆಯಾದೀತೋ ಎಂದು ಹೇಳುವದಕ್ಕೆ ಹೆದರಿ ಒತ್ತಟ್ಟಿಗೆ ನಿಂತವು. ತರ್ಕ ಮೊದಲಾದವು ವಾದಿಸಿ ಬ್ರಹ್ಮನನ್ನು ಕಾಣ



ಲರಿಯದೆ ಶಬ್ದ ಮುಗ್ಧವಾಗಿ ಸುಮ್ಮನಾದವು. ಆಗಮಗಳು ಸಹ ಶಿವನ ಮೆಟ್ಟನ್ನು ತಿಳಿಯಲಾರದೆ ಇಂಬಾಗಿ ನಿಂತವು.

ಶಿವಭಕ್ತರಲ್ಲಿ ಜಾತಿಭೇದ ಮೊದಲಾದವುಗಳನ್ನು ಎಣಿಸಕೂಡದೆಂಬ ಭಾವವು ನಿಗಮಾಗಮ ಪುರಾಣೇತಿಹಾಸಗಳಲ್ಲಿ ಅಡಕವಾಗಿದ್ದು ಅದನ್ನೇ ಬಸವನರಿತು ಆ ಮೇಲಿನಂತೆ ಆಡಿರುವನು. ಶಿವನ ಲೀಲೆಯಂತೆ ಶಿವಶರಣರ ಲೀಲೆಯು ಅಂದರೆ ಅವರ ಮಹಿಮೆಯು ನರರ ಭಾವಕ್ಕೆ ತಿಳಿಯದೆಂತಹುದು! ಅಂತೆಯೇ ಪಾವಟೆ ಸಿದ್ಧರಾಮಪ್ಪನವರು ಶರಣರ ತಿಳಿನಡೆಯ ಬಗ್ಗೆ ಹೀಗೆ ಅಂದಿರುವರು. "ವೇದಾಗಮ ಪುರಾಣೇತಿಹಾಸಗಳ ಸಾರದಲ್ಲಿ ಅಚಲವಾದ ಭಕ್ತಿಯ ತಿರುಳನ್ನು ಪರಮಾತ್ಮನ ಅನುಗ್ರಹದಿಂದರಿತು ಅವುಗಳಲ್ಲಿ ಕಾಣಬಾರದ ನವೀನತೆಯಿಂದ ತಮ್ಮ ನಡೆನುಡಿಗಳಲ್ಲಿ ಹರಡುವವರು ಶರಣರು. ಆಚಾರ್ಯರ ನುಡಿಯು ವೇದ ವಾಕ್ಯವನ್ನನುಸರಿಸುವುದು. ಶರಣರ ಭಾವವು ವೇದಭಾವವನ್ನು ಪುಟಗೊಳಿಸುವುದು."

ಬಸವನಂತೆ ಮಹಾರಾಷ್ಟ್ರದ ಸಂತಶಿರೋಮಣಿಗಳಾದ ಜ್ಞಾನೇಶ್ವರ, ನಾಮದೇವ, ರಾಮದಾಸ ಮೊದಲಾದವರು ಚಾತುರ್ವರ್ಣ್ಯದ ಕಠಿಣತೆಯ ಬಗ್ಗೆ ಬಹುಧಾ ಆಡಿಕೊಂಡು ತಾವು ಸಮತಾಭಾವವನ್ನು ತಮ್ಮ ಚರಿತ್ರದಲ್ಲಿ ಹೇಡಿರುವರು. ಇದರಂತೆ ಬಂಗಾಳದ ಸಾಧುವರ್ಯನಾದ ಶ್ರೀ ರಾಮಕೃಷ್ಣ ಪರಮಹಂಸನು ಜಾತಿಭೇದವನ್ನು ತಿರಸ್ಕರಿಸಿ ಸರ್ವಜೀವದಯಾಪರನಾದನು. "The desire to annihilate the pride of superiar social birth took hold of him (ಚೈತನ್ಯ) once and this Brahman of Brahmans could not rest in peace until he cleansed the dirtiest corner of a Pariah's hut with his flowing tresses. His heart was full to over-flowing with love for all." "But finding to their surprise that Namdeva was a Sudra and that the host ate with him, the Brahmins (who had dined with him) raised an uproar and said that a purification was necessary. But the host, (the Vithoba of Pandharpur) it is said, disclosing his divine attributes, preached to them on the nature of true

religion and told them that among those who worshipped him in faith and devotion, there was no distinction of caste or birth."

"Just as Luther and other............... reformers of Europe rebelled against the authority of the clergy, the Maratha reformers (including Ramdas, a Brahmin. and to some extent the reformers in other parts of India also rose up in protest against the monopaly of the..............Brahmin caste, and its exclusive spirit and asserted the dignity of the human soul as residing in it quite independently of the accidents of its birth and social rank."

Ekanath says "Blessed is this Kali age in spite of its wickedness, because we can attain salvation simply singing the glory of Hari. All castes all creeds assemble together and praise the Lord according to their knowledge and faith. Your sex or caste does not count. It matters not whether you are a Sudra or a woman. Have bhakti seeing the glory of Hari and you can attain heaven. Even the Vedas are miserly because thay are open to the first three castes only."

"The late Lok. Tilak has said in his Gita. To make the individual soul universal whereby the meanest creature in this world becomes only a manifestation of the Almighty and therefore a meet object of worship is the highest form of devotion compared to which the offering of incense and flowers to him in the privacy of your room or the solitude of the temple, though helpful, is less elevating."

ಹೀಗೆ ಎತ್ತ ನೋಡಿದರೂ ಸಾಧುಸಂತರ ಮನೋಭೂಮಿಯು ದಯಾದಾಕ್ಷಿಣ್ಯ ಸಮತಾಮಯವಾಗಿರುವದು. ಇಂತವರನ್ನು ವೇದಬಾ



ಹಿರರೆಂದು ಕರೆಯಬಹುದೇ? ಆಧುನಿಕ ಸಂಶೋಧಕರು ಬೌದ್ಧಮತೀಯರು ವೇದಬಾಹಿರರಲ್ಲೆಂದು ಪ್ರತಿಪಾದಿಸಹತ್ತಿರುವರು. ವೇದಬಾಹಿರ ವರ್ಗದಲ್ಲಿ ಸೇರಿದ ಜೈನ ಹಾಗು ಬೌದ್ಧರ ಬಗ್ಗೆ ಅದೇ ಕೈ. ಟಿಳಕರವರು ತಮ್ಮ ಗೀತಾರಹಸ್ಯದ ೫೬೬ ನೇ ಪುಟದಲ್ಲಿ ಹೀಗೆ ಅಂದಿರುವರು.

"ಜೈನ ಧರ್ಮಾ ಪ್ರಮಾಣೆ ಬೌದ್ಧ ಧರ್ಮಹಿ ವೈದಿಕ ಧರ್ಮ ರೂಪ ಆಪಲ್ಯಾ ಪಿತ್ರ್ಯಾಪಾಸೂನ ಆಪಲ್ಯಾಲಾ ಪಾಹಿಜೆ ತೇವಢ್ಯಾ ಸಂಪತ್ತೀಚ್ಯಾ ವಾಂಟಾ ಘೇವೂನ ಕಾಹೀ ಕಾರಣಾ ಸಾಠೀ ವೇಗಳಾ ನಿಘಾಲೇಲಾ ಮುಲಗಾ ಆಹೆ. ಅರ್ಥಾತ್ ತೋ ಪರಕೀ ನಸೂನ ತಾತ್ಪೂರ್ವೀಚ್ಯಾ ಬ್ರಾಹ್ಮಣ ಧರ್ಮಾಚೀ ಯೇಥೇಚ್ಚ ಉತ್ಪನ್ನ ಝಾಲೇಲಿ ಏಕ ಶಾಖಾ ಆಹೆ. ಹೀ ಗೋಷ್ಟ ಆತಾಂ ನಿಃಸಂಶಯ ಸಿದ್ಧ ಝಾಲೀ ಆಹೆ."

ಅಂದರೆ ಯಾವ ಜೈನ ಬೌದ್ಧ ಮತಾನುಯಾಯಿಗಳು ತಮ್ಮದೊಂದು ಸ್ವತಂತ್ರ ಪಂಥವನ್ನು ಸ್ಥಾಪಿಸಿ ಈ ವರೆಗೆ ಪರಕೀಯರೆಂದು (ವೇದ ವಿರೋಧಿಗಳೆಂದು) ಪರಮತೀಯರಿಂದ ವರ್ಣಿಸಲ್ಪಟ್ಟಿದ್ದರೋ ಅಂಥವರನ್ನೇ ಕೈ. ಟಿಳಕರವರು ವೈದಿಕ ಧರ್ಮ ರೂಪವಾದ ಸಂಪತ್ತಿನೊಳಗಿಂದ ತಮಗೆಷ್ಟು ಬೇಕೋ ಅಷ್ಟು ಪಾಲು ತಗೊಂಡು ಹೊರ ಬಿದ್ದ ಮಕ್ಕಳೆಂದು ಕರೆದುದನ್ನು ನೋಡಿದರೆ ವೀರಶೈವರು ಧರಿಸಿದ ಶಿವಲಿಂಗವೂ ಅದರ ಪೂಜೆಗೆ ಬೇಕಾದ ಪಂಚಾಕ್ಷರ ಷಡಕ್ಷರ ಮಂತ್ರಗಳೂ ಭಸ್ಮ ರುದ್ರಾಕ್ಷ ಮೊದಲಾದವು ಮತ್ತು ಅವರ ನಿತ್ಯ ನೈಮಿತ್ತಿಕ ಕ್ರಿಯಾ ವಿಧಿಯೂ ಅವರ ಅಷ್ಟಾವರಣ ಷಟ್‌ಸ್ಥಲ ವಿಚಾರವೂ ಅವರ ತತ್ವ ಜ್ಞಾನವೂ ನಿಗಮಾಗಮದ ತಳಹದಿಯ ಮೇಲೆ ನಿಂತಿದ್ದರೂ, ಅಂತಹ ವೀರಶೈವರಿಗೂ ಆ ಮಹತ್ತರವಾದ ಮತವನ್ನು ಪುನರುಜ್ಜೀವನಗೊಳಿಸಿದ ಬಸವನಿಗೂ ವೇದ ಬಾಹಿರ ಅಥವಾ ವೇದ ವಿರೋಧವೆಂಬ ವಿಶೇಷಣವನ್ನು ಹಚ್ಚುವದು ಸರ್ವ ಸಮಂಜಸವಾದದ್ದೋ ಹೇಗೆಂಬದನ್ನು ಓದುಗರು ವಿಚಾರಿಸಲಿ.

—ರಾ॥ ರಾ॥ ವ್ಹಿ. ಬಿ. ಬಿಳೇ ಅಂಗಡಿ,
ಬಿ. ಏ ಎಲ್. ಎಲ್. ಬಿ., ಹುಬ್ಬಳ್ಳಿ.

